# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 22 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 156 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಸಾಹಿತಿ ಬಾನು ಮುಷ್ತಾಕ್ ಅವರಿಂದ
# ಇಂದು ದಸರಾಗೆ ಚಾಲನೆ

- ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಗಣ್ಯರು ಭಾಗಿ
- ಚಾಮುಂಡಿಬೆಟ್ಟದಲ್ಲಿ ಬೆಳಗ್ಗೆ 10.10ರಿಂದ 10.40ರೊಳಗೆ ವೃಶ್ಚಿಕ ಲಗ್ನದಲ್ಲಿ ನಾಡದೇವಿಗೆ ಪುಷ್ಪಾರ್ಚನೆ


**ಮೈಸೂರು, ಸೆ.21(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವಕ್ಕೆ ಸಾಂಸ್ಕೃತಿಕ ನಗರಿ ಮೈಸೂರು ಮದುವಣಗಿತ್ತಿಯಂತೆ ಶೃಂಗಾರಗೊಂಡಿದ್ದು, ಸೋಮವಾರ(ಸೆ.22) ಬೆಳಗ್ಗೆ 10.10ರಿಂದ 10.40ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಚಾಮುಂಡಿಬೆಟ್ಟದಲ್ಲಿ ಸಾಹಿತಿ ಬಾನು ಮುಷ್ತಾಕ್ ಅವರು ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ 2025ನೇ ಸಾಲಿನ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.**

ಅರಮನೆಗಳ ನಗರಿ ಮೈಸೂರು 415ನೇ ದಸರಾ ಮಹೋತ್ಸವಕ್ಕೆ ಸಾಕ್ಷಿಯಾಗಲು ಕ್ಷಣಗಣನೆ ಆರಂಭವಾಗಿದ್ದು, ಅದಕ್ಕಾಗಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಲಾಗಿದ್ದು, ಸೋಮವಾರ ಚಾಮುಂಡಿ ಬೆಟ್ಟದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ನಾಡದೇವಿ ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ದಸರಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ದೊರೆಯಲಿದೆ.



ಬಾನು ಮುಷ್ತಾಕ್

ದಸರಾ ಉದ್ಘಾಟಕರಾದ ಸಾಹಿತಿ ಬಾನು ಮುಷ್ತಾಕ್ ಅವರು ಕುಟುಂಬದ ಸದಸ್ಯರೊಂದಿಗೆ ಭಾನುವಾರ ಮಧ್ಯಾಹ್ನವೇ ಮೈಸೂರಿಗೆ ಆಗಮಿಸಿದ್ದು, ಜಿಲ್ಲಾಡಳಿತದ ವತಿಯಿಂದ ಆತಿಥ್ಯ ನೀಡಿದೆ. ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ರಾತ್ರಿಯೇ ಮೈಸೂರಿಗೆ ಆಗಮಿಸಿ, ವಾಸ್ತವ್ಯ ಹೂಡಿದ್ದಾರೆ.



ದಸರಾ ಮಹೋತ್ಸವದ ಉದ್ಘಾಟನೆಗೆ ಚಾಮುಂಡಿಬೆಟ್ಟದಲ್ಲಿ ವೇದಿಕೆ ನಿರ್ಮಿಸುತ್ತಿರುವುದು.

**ವೃಶ್ಚಿಕ ಲಗ್ನದಲ್ಲಿ ಚಾಲನೆ:** ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭಕ್ಕೆ ಚಾಮುಂಡಿಬೆಟ್ಟದಲ್ಲಿ ಜಿಲ್ಲಾಡಳಿತ ಹಾಗೂ ಚಾಮುಂಡಿಬೆಟ್ಟ ಗ್ರಾ.ಪಂ ವತಿಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸೋಮವಾರ ಬೆಳಗ್ಗೆ ದಸರಾ ಉದ್ಘಾಟಕರಾದ ಸಾಹಿತಿ ಬಾನು ಮುಷ್ತಾಕ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಸೇರಿದಂತೆ ಇನ್ನಿತರರು ಚಾಮುಂಡಿಬೆಟ್ಟಕ್ಕೆ ಬಂದು ದೇವಿಯ ದರ್ಶನ ಪಡೆಯಲಿದ್ದಾರೆ. ನಂತರ ದೇವಾಲಯದ ಪಕ್ಕದ ಸ್ಥಳದಲ್ಲಿ ■ 2ನೇ ಪುಟಕ್ಕೆ

## ಇಂದಿನಿಂದ ಅರಮನೆಯಲ್ಲಿ ಯದುವೀರ್ ಖಾಸಗಿ ದರ್ಬಾರ್

ಮೈಸೂರು, ಸೆ.21(ಎಂಟಿವೈ)– ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಸೋಮವಾರ(ಸೆ.22)ದಿಂದ ಅರಮನೆಯಲ್ಲಿ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರತ್ನಖಚಿತ ಸಿಂಹಾಸನವೇರಿ ಖಾಸಗಿ ದರ್ಬಾರ್ ನಡೆಸಿ ವಿವಿಧ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ.

ನವರಾತ್ರಿ ವೇಳೆ ರಾಜವಂಶಸ್ಥರು ನಡೆಸುವ ಖಾಸಗಿ ದರ್ಬಾರ್ ಗತ ಕಾಲದ ವೈಭವವನ್ನು ಪ್ರತಿಬಿಂಬಿಸಲಿದ್ದು, ಅದಕ್ಕಾಗಿ ಮೈಸೂರು ಅರಮನೆ ಸಜ್ಜಾಗಿದೆ. ಸೆ.22ರಿಂದ ಅ.1ರವರೆಗೂ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಖಾಸಗಿ ದರ್ಬಾರ್ ಜರುಗಲಿದೆ. ಮೊದಲ ದಿನ ಬೆಳಗ್ಗೆ ಖಾಸಗಿ ದರ್ಬಾರ್ ನಡೆದರೆ, ಉಳಿದ ದಿನ ಸಂಜೆ ವೇಳೆ ಖಾಸಗಿ ದರ್ಬಾರ್ ಜರುಗಲಿದೆ.



ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಸೆ.15ರಂದು ಅರಮನೆಯ ಸ್ಟ್ರಾಂಗ್‌ರೂಮ್‌ನಿಂದ ಸಿಂಹಾಸನದ ಬಿಡಿಭಾಗಗಳನ್ನು ತಂದು ದರ್ಬಾರ್ ಹಾಲ್‌ನಲ್ಲಿ ಹಾಗೂ ಬೆಳ್ಳಿ ಭದ್ರಾಸನದ ಬಿಡಿಭಾಗಗಳನ್ನು ತಂದು ಕನ್ನಡಿತೊಟ್ಟಿಯಲ್ಲಿ ಜೋಡಣೆ ಮಾಡಲಾಗಿತ್ತು.

ಖಾಸಗಿ ದರ್ಬಾರ್ ಹಿನ್ನೆಲೆಯಲ್ಲಿ ನಾಳೆ (ಸೆ.22ರಂದು) ಮುಂಜಾನೆ ರಾಜ ವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಎಣ್ಣೆ ಶಾಸ್ತ್ರ ನೆರವೇರಿಸಲಾಗುತ್ತದೆ. ಬೆಳಗ್ಗೆ 5.30ರಿಂದ 5.45ರೊಳಗೆ ದರ್ಬಾರ್ ಹಾಲ್‌ನಲ್ಲಿ ಜೋಡಣೆ ಮಾಡಿರುವ ಸಿಂಹಾಸನಕ್ಕೆ 'ಸಿಂಹ'(ಸಿಂಹದ ತಲೆ) ಜೋಡಣೆ ಮಾಡಲಾಗುತ್ತದೆ. ಅಂದು 9.55ರಿಂದ 10.15ರೊಳಗೆ ಚಾಮುಂಡಿ ತೊಟ್ಟಿಯಲ್ಲಿ ಯದುವೀರ್ ಅವರಿಗೂ ವಾಣಿವಿಲಾಸ ದೇವರ ಮನೆಯಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಅವರಿಗೆ ಕಂಕಣಧಾರಣೆ ಮಾಡಲಾಗುತ್ತದೆ.

ಖಾಸಗಿ ದರ್ಬಾರ್ ಧಾರ್ಮಿಕ ಕಾರ್ಯದ ಅಂಗವಾಗಿ ಅಂದು ಬೆಳಗ್ಗೆ 11.45ಕ್ಕೆ ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ಹಾಗೂ ಕೋಡಿ ಭೈರವೇಶ್ವರಸ್ವಾಮಿ ದೇವಾಲಯದ ಬಳಿಯಿಂದ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು, ಒಂಟೆಯೊಂದಿಗೆ ಕಳಸ ಹೊತ್ತ ಮಹಿಳೆಯರು, ಮಂಗಳವಾದ್ಯದವರು ಆಗಮಿಸಲಿದ್ದಾರೆ. ನಂತರ ಸಿಂಹಾಸನಾರೋಹಣಕ್ಕೆ ಸಂಬಂಧಿಸಿದ ಕೈಂಕರ್ಯಗಳು ನೆರವೇರಲಿವೆ. ವಿವಿಧ ಹೋಮ, ಪೂಜೆ ನೆರವೇರಿದ ಬಳಿಕ ಮಧ್ಯಾಹ್ನ 12.42ರಿಂದ 12.58ರೊಳಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಿಂಹಾಸನಾರೋಹಣ ಮಾಡಲಿದ್ದಾರೆ. ಮಧ್ಯಾಹ್ನ 2.05ರಿಂದ 2.15ರೊಳಗೆ ಚಾಮುಂಡೇಶ್ವರಿ ಅಮ್ಮನವರನ್ನು ಚಾಮುಂಡಿತೊಟ್ಟಿಯಿಂದ ಕನ್ನಡಿ ತೊಟ್ಟಿಗೆ ಬಿಜಯ ಮಾಡಲಾಗುತ್ತದೆ.

# ದಸರಾ ಉದ್ಘಾಟನೆ, ನವರಾತ್ರಿ ಉತ್ಸವಕ್ಕೆ ಚಾಮುಂಡಿಬೆಟ್ಟದಲ್ಲಿ ಸಿದ್ಧತೆ





ಭಾನುವಾರ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಅಣಿಗೊಳಿಸುತ್ತಿರುವುದು.

ಮೈಸೂರು, ಸೆ.21(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟನೆ ಹಾಗೂ ದೇವಾಲಯದಲ್ಲಿ ನಡೆಯಲಿರುವ ನವರಾತ್ರಿ ಧಾರ್ಮಿಕ ಕಾರ್ಯಕ್ರಮಕ್ಕೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ.

ನವರಾತ್ರಿ ವೇಳೆ ಬೆಟ್ಟದ ದೇವಾಲಯದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಉದ್ಘಾಟನಾ ಕಾರ್ಯಕ್ರಮಕ್ಕೆ ಬೆಳ್ಳಿ ರಥ ಸ್ವಚ್ಛಗೊಳಿಸಲಾಗಿದೆ. ಅಲ್ಲದೆ, ಚಾಮುಂಡೇಶ್ವರಿಯ ಉತ್ಸವ ಮೂರ್ತಿಯನ್ನೂ ಸನ್ನದ್ಧಗೊಳಿಸಲಾಗಿದೆ. ನವರಾತ್ರಿ ಹಿನ್ನೆಲೆಯಲ್ಲಿ ಬೆಟ್ಟದ ನಿವಾಸಿಗಳು ವಿಶೇಷ ಪೂಜಾ ಮಹೋತ್ಸವದಲ್ಲಿ ಭಾಗಿಯಾಗಲು ಸಜ್ಜಾಗಿದ್ದು, ನವರಾತ್ರಿ ಆಚರಣೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ.

**ಬೆಳ್ಳಿಯ ರಥದಲ್ಲಿ ನಾಡದೇವಿ ಪ್ರತಿಷ್ಠಾಪನೆ:** ದಸರಾ ಮಹೋತ್ಸವದ ಉದ್ಘಾಟನೆಯನ್ನು ಪ್ರತಿ ವರ್ಷದಂತೆ ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಾಗುತ್ತದೆ. ಇದಕ್ಕಾಗಿ ದೇವಾಲಯದ ಬೆಳ್ಳಿ ರಥವನ್ನು ವೇದಿಕೆಯ ಬಳಿ ನಿಲ್ಲಿಸಲಾಗಿದೆ. ಚಿಕ್ಕ ಬೆಳ್ಳಿ ರಥದಲ್ಲಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನಿಟ್ಟು ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಿರುವ ಹಿನ್ನೆಲೆಯಲ್ಲಿ ರಥವನ್ನು ಇಂದು ಮಧ್ಯಾಹ್ನವೇ ವೇದಿಕೆಯ ಬಳಿ ತಂದು ನಿಲ್ಲಿಸಲಾಗಿದೆ.

### ವಿಶಿಷ್ಟ ಮೂರ್ತಿ...

**ಅರಸರ ಆಳ್ವಿಕೆ ಅಂತ್ಯದಲ್ಲಿ ಜಯಚಾಮರಾಜ ಒಡೆಯರ್ ಅವರು ಚಿನ್ನದ ಅಂಬಾರಿಯಲ್ಲಿ ಕುಳಿತು ಜಂಬೂಸವಾರಿಯಲ್ಲಿ ಸಾಗುತ್ತಿದ್ದರು. ನಂತರ ಅಂಬಾರಿಯಲ್ಲಿ ಭಾರತಾಂಬೆ ಚಿತ್ರ, ನಂತರ ಭುವನೇಶ್ವರಿ ವಿಗ್ರಹವನ್ನಿಟ್ಟು ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತಿತ್ತು. 1990ರಲ್ಲಿ ಜಂಬೂಸವಾರಿ ಮೆರವಣಿಗೆಯಲ್ಲಿ ಕೊಂಡೊಯ್ಯಲು ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಸಿದ್ಧಪಡಿಸಲಾಯಿತು. ಎರಡೂವರೆ ಅಡಿ ಎತ್ತರವಿರುವ ಈ ಮೂರ್ತಿಗೆ 8 ಕೈಗಳಿವೆ. ಪ್ರತಿಯೊಂದು ಕೈಯ್ಯಲ್ಲೂ ಆಯುಧವಿದ್ದು, ಮಹಿಷಾಸುರ ಮರ್ಧಿನಿಯಂತೆ ಅವತಾರದಲ್ಲಿ ಅಣಿಗೊಳಿಸಲಾಗಿದೆ. ದೇವಿಯ ಪಾದದಡಿ ಮಹಿಷಾಸುರ ಬಿದ್ದಿದ್ದು, ಈ ಉತ್ಸವ ಮೂರ್ತಿ ವಿಶಿಷ್ಟ ಹಾಗೂ ಶಕ್ತಿ ಸ್ವರೂಪಿಣಿ ಮೂರ್ತಿಯಾಗಿದೆ. ನಾಳೆಯಿಂದ ಅ.2ರವರೆಗೂ ವಿಶೇಷ ಪೂಜೆ ಮಾಡಲಾಗುತ್ತದೆ. ಜಂಬೂಸವಾರಿ ದಿನ ಬೆಳಗ್ಗೆ ಅರಮನೆಗೆ ಕೊಂಡೊಯ್ಯಲಾಗುತ್ತದೆ.**


-ಡಾ.ಎನ್.ಶಶಿಶೇಖರ್ ದೀಕ್ಷಿತ್, ಪ್ರಧಾನ ಆಗಮಿಕ

**ದೇವಾಲಯದಲ್ಲಿ ಪೂಜೆ:** ನವರಾತ್ರಿಯ ಆರಂಭದ ದಿನವಾದ ಸೋಮವಾರ (ಸೆ.22) ಮುಂಜಾನೆ 4.30ರಿಂದಲೇ ಚಾಮುಂಡೇಶ್ವರಿ ದೇವಾಲಯದಲ್ಲಿ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿವೆ. ಬೆಳಗ್ಗಿನಿಂದಲೇ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನಡೆಯುತ್ತವೆ. ಪ್ರತಿ ದಿನ ಸಂಜೆ 4.30ರಿಂದ 5.30ರವರೆಗೆ ಮಹಾಬಲೇಶ್ವರ ದೇವಾಲಯ ಮುಂಭಾಗ ಇರುವ ದರ್ಬಾರ್ ಮಂಟಪದಲ್ಲಿ ಚಾಮುಂಡೇಶ್ವರಿ ದೇವಿಗೆ ದರ್ಬಾರ್ ಉತ್ಸವ ನೆರವೇರಲಿದೆ.

**ವಿವಿಧ ಅಲಂಕಾರ:** ದಸರಾ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಿಗೆ ಸೆ.22ರಿಂದ ಅ.2ರವರೆಗೆ ■ 2ನೇ ಪುಟಕ್ಕೆ



## ಇಂದು ಉದ್ಘಾಟನೆಗೊಳ್ಳಲಿರುವ ದಸರಾ ವಿವಿಧ ಕಾರ್ಯಕ್ರಮಗಳು



| | | |
|---|---|---|
| ಬೆಳಗ್ಗೆ | 10.10ಕ್ಕೆ | **ದಸರಾ ಮಹೋತ್ಸವ ಉದ್ಘಾಟನೆ** ಚಾಮುಂಡಿಬೆಟ್ಟ |
| ಮಧ್ಯಾಹ್ನ | 12.30ಕ್ಕೆ | **ಫಲಪುಷ್ಪ ಪ್ರದರ್ಶನ** ಕುಪ್ಪಣ್ಣ ಪಾರ್ಕ್(ನಿಶಾದ್ ಬಾಗ್) |
| ಮಧ್ಯಾಹ್ನ | 1.00ಕ್ಕೆ | **ಆಹಾರ ಮೇಳ** ಮಹಾರಾಜ ಕಾಲೇಜು ಮೈದಾನ |
| ಸಂಜೆ | 4.00ಕ್ಕೆ | **ದಸರಾ ಕುಸ್ತಿ ಪಂದ್ಯಾವಳಿ** ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣ |
| ಸಂಜೆ | 4.00ಕ್ಕೆ | **ಚಿತ್ರಕಲಾ ಶಿಬಿರ** ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು |
| ಸಂಜೆ | 5.00ಕ್ಕೆ | **ಪುಸ್ತಕ ಮೇಳ** ಭಾರತ್ ಸ್ಕೌಟ್ ಮತ್ತು ಗೈಡ್ಸ್ ಮೈದಾನ |
| ಸಂಜೆ | 5.00ಕ್ಕೆ | **ಯೋಗ ದಸರಾ** ಜೆ.ಕೆ.ಮೈದಾನ |
| ಸಂಜೆ | 5.00ಕ್ಕೆ | **ದಸರಾ ಸಾಂಸ್ಕೃತಿಕ ಕಾರ್ಯಕ್ರಮ** ಅರಮನೆ ಆವರಣ |
| ಸಂಜೆ | 5.30ಕ್ಕೆ | **ರಾಜ್ಯ ದಸರಾ ಸಿಎಂ ಕಪ್** ಚಾಮುಂಡಿ ವಿಹಾರ್ ಕ್ರೀಡಾಂಗಣ |
| ಸಂಜೆ | 6.30ಕ್ಕೆ | **ವಿದ್ಯುತ್ ದೀಪಾಲಂಕಾರ** ಸಯ್ಯಾಜಿರಾವ್ ರಸ್ತೆ, ಕೆಆರ್ ಆಸ್ಪತ್ರೆ ಬಳಿ |
| ರಾತ್ರಿ | 7.30ಕ್ಕೆ | **ದಸರಾ ವಸ್ತು ಪ್ರದರ್ಶನ** ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ |

## 'ಅಂಬಾರಿ ಕಪ್' ವಿಜೇತರಿಗೆ ಬಹುಮಾನ



ರೋಟರಿ ಮೈಸೂರು ಅಂಬಾರಿ ವತಿಯಿಂದ ಹೆಬ್ಬಾಳದಲ್ಲಿರುವ ಎಆರ್‌ಸಿ ಸ್ಪೋರ್ಟ್ಸ್ ಜೋನ್‌ನಲ್ಲಿ ಆಯೋಜಿಸಿದ್ದ 'ಅಂಬಾರಿ ಕಪ್–2025 ಬ್ಯಾಡ್ಮಿಂಟನ್ ಹಾಗೂ ಕೇರಂ ಟೂರ್ನಿಮೆಂಟ್'ನ ವಿಜೇತ ರೋಟರಿ ಕ್ಲಬ್ ಮೈಸೂರ್ ಸೌತ್ ಈಸ್ಟ್, ರೋಟರಿ ಕ್ಲಬ್ ಮೈಸೂರು ಉತ್ತರ, ರೋಟರಿ ಕ್ಲಬ್ ಮೈಸೂರು, ರೋಟರಿ ಕ್ಲಬ್ ವಿಜಯನಗರ, ರೋಟರಿ ಕ್ಲಬ್ ಬೃಂದಾವನ್, ರೋಟರಿ ಕ್ಲಬ್ ಸ್ಟಾರ್ಸ್, ರೋಟರಿ ಕ್ಲಬ್ ಮೈಸೂರು ಜೆಪಿ ನಗರ, ರೋಟರಿ ಕ್ಲಬ್ ಮೈಸೂರು ಹೆರಿಟೇಜ್, ರೋಟರಿ ಕ್ಲಬ್ ಮೈಸೂರು ಅಂಬಾರಿ ಸಂಸ್ಥೆಗಳಿಗೆ ಬಹುಮಾನ ವಿತರಿಸಲಾಯಿತು. ಅಸಿಸ್ಟೆಂಟ್ ಗೌವರ್ನರ್ ಎಸ್.ಹೆಚ್.ಜಗದೀಶ್, ವಲಯ ಸೇನಾನಿ ಶಿವಕುಮಾರ್, ರೋಟರಿ ಮೈಸೂರ್ ಅಂಬಾರಿ ಅಧ್ಯಕ್ಷ ಹರೀಶ್, ಕಾರ್ಯದರ್ಶಿ ಮಂಜುನಾಥ್, ಅಂಬಾರಿ ಕಪ್ ಚೇರ್ಮನ್ ಎಲ್.ಜಗದೀಶ್, ಮಾಜಿ ಅಧ್ಯಕ್ಷರಾದ ಜಗದೀಶ್, ಕಿರಣ್ ಕುಮಾರ್, ಭರತ್, ಯದು ಕೃಷ್ಣನ್, ಉಪಾಧ್ಯಕ್ಷ ವಿನೋದ್‌ಕುಮಾರ್, ನಿರ್ದೇಶಕರಾದ ಡಾ.ಲಕ್ಷ್ಮೀಶ್, ಲೋಕೇಶ್, ಮನು, ರವಿಚಂದ್ರ ಉಪಸ್ಥಿತರಿದ್ದರು. ಟೂರ್ನಿಮೆಂಟ್‌ಗೆ ಚುನಾಯಿತ ರೋಟರಿ ಜಿಲ್ಲೆ 3181ರ ಗವರ್ನರ್ ಯಶಸ್ವಿನಿ ಸೋಮಶೇಖರ್ ಚಾಲನೆ ನೀಡಿದ್ದರು.

## ಪ್ರಧಾನಿ ಮೋದಿ ಹುಟ್ಟುಹಬ್ಬ ಆಚರಣೆ



ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ವತಿಯಿಂದ ಬೀರಿಹುಂಡಿ ಗ್ರಾಮದಲ್ಲಿ ಶಾಲಾ ಮಕ್ಕಳಿಗೆ ಆಯೋಜಿಸಿದ್ದ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದವರು ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಯಿತು. ಈ ವೇಳೆ ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಪೈ.ಟಿ.ರವಿ, ನಗರ ಮಂಡಲದ ರಾಕೇಶ್ ಭಟ್, ನಗರ ಜಿಲ್ಲಾ ಪ್ರದಾನ ಕಾರ್ಯದರ್ಶಿ ಬಿ.ಎಂ.ರಘು, ಕ್ಷೇತ್ರ ಪ್ರಧಾನ ಕಾರ್ಯದರ್ಶಿಗಳಾದ ಹೇಮಂತ್‌ಕುಮಾರ್, ಶಿವಕುಮಾರ್ ಚಿಕ್ಕಾನ್ಯ, ಹಿರಿಯ ಮುಖಂಡರಾದ ಗೋಪಾಲ್ ರಾವ್, ಕೂರ್ಗಳ್ಳಿ ರೇವಣ್ಣ, ಕಾಮನಕೆರೆಹುಂಡಿ ನಾರಾಯಣ್, ಸುನಿಲ್, ನಂಜುಂಡಸ್ವಾಮಿ, ರಾಘವೇಂದ್ರ, ಲೋಕೇಶ್, ಮಹದೇವಸ್ವಾಮಿ, ನಂದೀಶ್, ವಿಜಯ್ ಕುಮಾರ್ ಶಾದನಹಳ್ಳಿ, ಮೋಹನ್, ಪರಶಿವ ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

## ಇಂದು ದಸರಾಗೆ ಚಾಲನೆ



ದಸರಾ ಉದ್ಘಾಟನೆ ಹಿನ್ನೆಲೆಯಲ್ಲಿ ಬೆಟ್ಟದಲ್ಲಿ ಗ್ರಾ.ಪಂ ವತಿಯಿಂದ ಅಳವಡಿಸಿರುವ ಸ್ವಾಗತ ಕಮಾನು.

ಮಹಿಷಾಸುರ ಪ್ರತಿಮೆ ಬಳಿಯಿಂದ ಕಂಸಾಳೆ, ಡೊಳ್ಳು ಕುಣಿತ, ವೀರಗಾಸೆ ಕುಣಿತ ಸೇರಿದಂತೆ ವಿವಿಧ ಜಾನ ಪದ ಕಲಾತಂಡಗಳನ್ನು ನಿಯೋಜಿಸಲಾಗಿದೆ. ಅಲ್ಲದೆ, ಕಳಸ ಹೊತ್ತ ಯುವತಿಯರು, ಹೆಣ್ಣು ಮಕ್ಕಳು ದಸರಾ ಉದ್ಘಾಟನಾ ಕಾರ್ಯಕ್ರಮಕ್ಕೆ ಮೆರಗು ತುಂಬಲಿದ್ದಾರೆ.

**ಬಿಗಿ ಬಂದೋಬಸ್ತ್:** ದಸರಾ ಉದ್ಘಾಟನಾ ಕಾರ್ಯಕ್ರಮದ ವೇಳೆ ಯಾವುದೆ ಗೊಂದಲ ಉಂಟಾಗದಂತೆ ಕಟ್ಟೆಚ್ಚರ ವಹಿಸಲು ಚಾಮುಂಡಿ ಬೆಟ್ಟದಲ್ಲಿ ಬಿಗಿ ಪೊಲೀಸ್ ಭದ್ರತೆ

ನಿರ್ಮಿಸಿರುವ ವಾಟರ್ ಪ್ರೂಫ್ ವೇದಿಕೆಯಲ್ಲಿ ಬೆಳಗ್ಗೆ 10.10ರಿಂದ 10.45ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ವೇದಿಕೆ ಎಡಭಾಗದಲ್ಲಿ ಬೆಳ್ಳಿಯ ಚಿಕ್ಕ ರಥದಲ್ಲಿ ಪ್ರತಿಷ್ಠಾಪಿಸಿರುವ ಚಾಮುಂಡೇಶ್ವರಿಯ ಉತ್ಸವ ಮೂರ್ತಿಗೆ ಸಾಹಿತಿ ಬಾನು ಮುಷ್ತಾಕ್, ಸಿಎಂ ಸಿದ್ಧರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಗಣ್ಯರು ಪುಷ್ಪಾರ್ಚನೆ ಮಾಡಲಿದ್ದಾರೆ.

ದಸರಾ ಉತ್ಸವ ಉದ್ಘಾಟನಾ ಸಮಾರಂಭಕ್ಕಾಗಿ ವೇದಿಕೆ ನಿರ್ಮಿಸಲಾಗಿದೆ. 30ರಿಂದ 40 ಮಂದಿ ಗಣ್ಯರು ಆಸೀನರಾಗಲು ವೇದಿಕೆಯಲ್ಲಿ ಆಸನದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಸಮಾರಂಭ ವೀಕ್ಷಿಸಲು 800 ಮಂದಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ಭದ್ರತೆಗಾಗಿ ನಿಯೋಜಿಸಲಾಗಿರುವ ಪೊಲೀಸರು ಭಾನುವಾರವೇ ಚಾಮುಂಡಿಬೆಟ್ಟದಲ್ಲಿ ಬೀಡು ಬಿಟ್ಟಿದ್ದಾರೆ.

**ಜಾನಪದ ತಂಡಗಳಿಂದ ಸ್ವಾಗತ:** ದಸರಾ ಉದ್ಘಾಟನೆಗೆ ಬರುವ ಗಣ್ಯರನ್ನು ಸ್ವಾಗತಿಸಲು ಬೆಟ್ಟದಲ್ಲಿರುವ

ಏರ್ಪಡಿಸಲಾಗಿದೆ. ಚಾಮುಂಡಿಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ತಾವರೆಕಟ್ಟೆ ಹಾಗೂ ಉತ್ತನಹಳ್ಳಿ ಕಡೆಯಿಂದ ಇರುವ ರಸ್ತೆಯಲ್ಲಿ ಬೆಟ್ಟಕ್ಕೆ ಬರುವವರನ್ನು ತಪಾಸಣೆ ಮಾಡಲು ಪೊಲೀಸರನ್ನು ನಿಯೋಜಿಸಲಾಗಿದೆ. ಅನುಮಾನಾಸ್ಪದ ವ್ಯಕ್ತಿಗಳನ್ನು ಕೂಲಂಕುಶವಾಗಿ ಪರಿಶೀಲಿಸುತ್ತಿದ್ದಾರೆ. ಅಲ್ಲದೆ, ಬೆಟ್ಟಕ್ಕೆ ಬರುವ ವಾಹನ ತಡೆದು ತಪಾಸಣೆ ಮಾಡಿದ ನಂತರವಷ್ಟೆ ಬೆಟ್ಟಕ್ಕೆ ಬಿಡಲಾಗುತ್ತಿದೆ. ದೇವಾಲಯದ ಬಳಿ, ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ಮಹಿಷಾಸುರ ಪ್ರತಿಮೆ ಬಳಿ ಬಂದೋಬಸ್ತ್ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ.

**ಸಾರ್ವಜನಿಕರ ಪ್ರವೇಶ ನಿರ್ಬಂಧ ಸಾಧ್ಯತೆ:** ದಸರಾ ಉದ್ಘಾಟನಾ ಸಮಾರಂಭದಲ್ಲಿ ಗೊಂದಲ ಉಂಟಾಗಬಾರದೆಂಬ ಉದ್ದೇಶದಿಂದ ಸೋಮವಾರ(ಸೆ.22) ಬೆಳಗ್ಗಿನಿಂದ ಮಧ್ಯಾಹ್ನ 12 ಗಂಟೆವರೆಗೆ ಚಾಮುಂಡಿಬೆಟ್ಟಕ್ಕೆ ಸಾರ್ವಜನಿಕರು ಹಾಗೂ ಪ್ರವಾಸಿಗರ ಪ್ರವೇಶ ನಿರ್ಬಂಧಿಸುವ ಸಾಧ್ಯತೆಯಿದೆ.

## ಮೈಸೂರಿಗೆ ಬಾನು ಮುಷ್ತಾಕ್ ಆಗಮನ

ಮೈಸೂರು, ಸೆ.21 (ಬಿಎಲ್‌ಯು)– ಈ ಬಾರಿಯ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟಕರಾದ ಸಾಹಿತಿ ಬಾನು ಮುಷ್ತಾಕ್ ಅವರು ಕುಟುಂಬ ಸಮೇತರಾಗಿ ಭಾನುವಾರ ಮೈಸೂರಿಗೆ ಆಗಮಿಸಿದರು.

ಇಂದು ಮಧ್ಯಾಹ್ನ ನಗರದ ಎಂ.ಜಿ.ರಸ್ತೆಯಲ್ಲಿರುವ ರ್ಯಾಡಿಸನ್ ಬ್ಲ್ಯೂ ಹೋಟೆಲ್‌ಗೆ ಆಗಮಿಸಿ, ಅಲ್ಲೆ ವಾಸ್ತವ್ಯ ಹೂಡಿದ್ದಾರೆ. ದಸರಾ ಉದ್ಘಾಟನೆ ಮಾಡಲು ಕೆಲವರಿಂದ ವಿರೋಧ ವ್ಯಕ್ತವಾಗಿರುವ ಹಿನ್ನೆಲೆ ಬಾನು ಮುಷ್ತಾಕ್ ಅವರಿಗೆ ಪೊಲೀಸ್ ಭದ್ರತೆ ನೀಡಲಾಗಿದೆ ನಾಳೆ ರ್ಯಾಡಿಸನ್ ಬ್ಲ್ಯೂ ಹೋಟೆಲ್‌ನಿಂದ ಚಾಮುಂಡಿಬೆಟ್ಟಕ್ಕೆ ತೆರಳುವ ಸಂದರ್ಭದಲ್ಲಿ ಕೂಡ ಪೊಲೀಸ್ ಎಸ್ಕಾರ್ಟ್ ವ್ಯವಸ್ಥೆ ಮಾಡಲಾಗಿದೆ.



ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟಕರಾದ ಸಾಹಿತಿ ಬಾನು ಮುಷ್ತಾಕ್ ಅವರು ಮೈಸೂರಿಗೆ ಆಗಮಿಸಿದ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಹೂಗುಚ್ಛ ನೀಡಿ, ಸ್ವಾಗತಿಸಿದರು.

## ನವರಾತ್ರಿ ಉತ್ಸವಕ್ಕೆ ಚಾಮುಂಡಿಬೆಟ್ಟದಲ್ಲಿ ಸಿದ್ಧತೆ

ಪ್ರತಿದಿನವೂ ಬೇರೆ ಬೇರೆ ಅಲಂಕಾರ ಮಾಡಲಾಗುತ್ತದೆ ಮೊದಲ ದಿನವಾದ ನಾಳೆ(ಸೆ.22) ಚಾಮುಂಡೇಶ್ವರಿಗೆ ಬ್ರಾಹ್ಮೀ ಅಲಂಕಾರ, ಸೆ.23ರಂದು ಮಹೇಶ್ವರಿ ಅಲಂಕಾರ, ಸೆ.24ರಂದು ಕೌಮಾರಿ, ಸೆ.25ರಂದು ವೈಷ್ಣವಿ, ಸೆ.26ರಂದು ವಾರಾಹಿ, ಸೆ.27ರಂದು ಇಂದ್ರಾಣಿ ಅಲಂಕಾರ, ಸೆ28ರಂದು ಚಾಮುಂಡಿ ಅಲಂಕಾರ, ಸೆ.29ರಂದು ಸರಸ್ವತಿ ಅಲಂಕಾರ, ಅಂದು ರಾತ್ರಿ ಕಾಳರಾತ್ರಿ ನೆರವೇರಲಿದೆ. ಸೆ.30ರಂದು ದುರ್ಗಾ ಅಲಂಕಾರ, ಅ.1 ಮಹಾಲಕ್ಷ್ಮೀ ಅಲಂಕಾರ, ಅ.2ರಂದು ಚಾಮುಂಡೇಶ್ವರಿ ಅಲಂಕಾರ ಮಾಡಿ ಉತ್ಸವ ಮೂರ್ತಿಗೆ ವಿಶೇಷ ಪೂಜೆ ನೆರವೇರಿಸಲಾಗುತ್ತದೆ.

**ಚಿನ್ನದ ಅಂಬಾರಿಯಲ್ಲಿ ಸಾಗುವ ಉತ್ಸವ ಮೂರ್ತಿ:** ಚಾಮುಂಡಿಬೆಟ್ಟದಲ್ಲಿ ನಾಳೆ ಗಣ್ಯರು ಪುಷ್ಪಾರ್ಚನೆ



ದಸರಾ ಉದ್ಘಾಟನಾ ಕಾರ್ಯಕ್ರಮಕ್ಕೆ ಬೆಳ್ಳಿ ರಥ ಸಿದ್ಧಪಡಿಸಿರುವುದು.

ಮಾಡಲಿರುವ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಅರಮನೆಯಿಂದ ಕಳೆದ ಒಂದು ವಾರದ ಹಿಂದೆಯೇ ತಂದು, ಚಾಮುಂಡಿಬೆಟ್ಟದ ದೇವಾಲಯದಲ್ಲಿಡಲಾಗಿದೆ. ಉತ್ಸವ ಮೂರ್ತಿಯನ್ನು ಸ್ವಚ್ಛಗೊಳಿಸಿ ನೈವೇದ್ಯ ಮಾಡಿ, ಪೂಜೆ ಸಲ್ಲಿಸುವ ಮೂಲಕ ಶಕ್ತಿ ತುಂಬಲಾಗುತ್ತದೆ. ನಾಳೆಯಿಂದ ಅ.2ರವರೆಗೂ ಚಾಮುಂಡಿಬೆಟ್ಟದ ದೇವಾಲಯ ದಲ್ಲೇ ಪೂಜಿಸಲಾಗುತ್ತದೆ. ಜಂಬೂ ಸವಾರಿಯ ದಿನ ಬೆಳಗ್ಗೆ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ಅರಮನೆಗೆ ತಂದು ಒಪ್ಪಿಸಲಾಗುತ್ತದೆ. ನಂತರ ಚಿನ್ನದ ಅಂಬಾರಿಯಲ್ಲಿಟ್ಟು ಜಂಬೂ ಸವಾರಿಯಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಜಂಬೂಸವಾರಿಯ ನಂತರ ಉತ್ಸವ ಮೂರ್ತಿಯನ್ನು ಅರಮನೆಯಲ್ಲಿಟ್ಟು, ವರ್ಷವಿಡೀ ಪೂಜಿಸಲಾಗುತ್ತದೆ.

## ಆಹಾರ ಮೇಳದಲ್ಲಿ ಬುಡಕಟ್ಟು ಸಮುದಾಯದ ರುಚಿಕರ ಆಹಾರ

ಮೈಸೂರು,ಸೆ.21(ಜಿಎ)–ಆಹಾರ ಪ್ರಿಯರ ನೆಚ್ಚಿನ ಬೊಂಬು ಬಿರಿಯಾನಿ ಸೇರಿದಂತೆ ಬುಡಕಟ್ಟು ಸಮುದಾಯದ ಆಹಾರ ಉಣಬಡಿಸಲು ಸಕಲ ಸಿದ್ಧತೆ ಮಾಡಲಾಗಿದೆ ಎಂದು ಪ್ರಕೃತಿ ಆದಿವಾಸಿ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ಎಂ.ಕೃಷ್ಣಯ್ಯ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಆಹಾರ ಮೇಳದಲ್ಲಿ ರಾಜ್ಯದ ವಿವಿಧ ಬುಡಕಟ್ಟುಗಳ ಪಾರಂಪರಿಕ ಆಹಾರ ಪದ್ಧತಿ ಬುಡಕಟ್ಟು ಶೈಲಿಯ ಕುಟೀರಗಳನ್ನು ನಿರ್ಮಿಸಲಾಗಿದೆ. ಮೈಸೂರು ದಸರಾದ ಪ್ರಮುಖ ಆಕರ್ಷಣೆಯಾದ ಆಹಾರ ಮೇಳದಲ್ಲಿ ಬುಡಕಟ್ಟು ಜನಾಂಗದವರು ಕಾಡಿನ ಮಸಾಲೆ ಪದಾರ್ಥಗಳನ್ನು ಬಳಸಿ ತಯಾರಿಸುವ ಮತ್ತು ಕೆಂಡದಲ್ಲಿ ಬೇಯಿಸುವ ಬಂಬೂ ಬಿರಿಯಾನಿ ರುಚಿ ಸವಿಯುವ ಸದಾವಕಾಶ ಸೆ.22ರಿಂದ ಅ.5ರವರೆಗೆ ಪ್ರವಾಸಿಗರು ಮತ್ತು ಮೈಸೂರಿಗರಿಗೆ ಲಭಿಸಿದೆ ಎಂದರು.

ಇಲ್ಲಿ ನಾವು ನೀಡುವ ಪ್ರತಿಯೊಂದು ಆಹಾರ ಪದಾರ್ಥವು ಆರೋಗ್ಯಕರವಾಗಿದ್ದು, ಶುಚಿತ್ವವನ್ನು ಕಾಪಾಡಿಕೊಳ್ಳಲಾಗುವುದು. ಆಹಾರ ಮೇಳಕ್ಕೆ ಮೆರುಗನ್ನು ತಂದು ಕೊಡುವ ನಿಟ್ಟಿನಲ್ಲಿ ಆಹಾರ ಮೇಳದಲ್ಲಿ ಆದಿವಾಸಿ ಬುಡಕಟ್ಟು ಶೈಲಿಯ ಆಹಾರಗಳಾದ ಬೆಂಕಿಯಿಂದ ಬೇಯಿಸಿದ ಬೊಂಬಿನ ಬಿರಿಯಾನಿ, ಬಿದರಕ್ಕಿ ಪಾಯಸ, ಮಾಕಳಿ ಬೇರಿನ ಟೀ, ಕಾಡುಗೆಣಸು, ಜೇನುತುಪ್ಪದ ಮಿಶ್ರಣ, ನಳ್ಳಿ ಸಾಂಬಾರು ಮುದ್ದೆ, ಕಾಡು ನಲ್ಲಿ ಕಾಯಿ ವಿವಿಧ ಬಗೆಯ ಕಾಡು ಸೊಪ್ಪುಗಳಾದ, ಆಲೆಸೊಪ್ಪು, ಮಾಡಲೇ ಸೊಪ್ಪು, ತುಂಬೆ ಸೊಪ್ಪು, ಅಣ್ಣೆಸೊಪ್ಪು, ಇಂಡಿ ಸೊಪ್ಪು ಮುಂತಾದ ಸೊಪ್ಪಿನ ಪಲ್ಯಗಳನ್ನು ತಯಾರು ಮಾಡಲಾಗುವುದು ಎಂದರು. ಕಾಡುಕೊತ್ತಂಬರಿ ಸೊಪ್ಪು, ಕಾಡು ಶುಂಠಿ, ಕಾಡು ಅರಿಸಿನ ಮಿಶ್ರಿತ ಮಸಾಲೆಯೊಟ್ಟಿಗೆ ವಿವಿಧ ಬಗೆಯ ನೈಸರ್ಗಿಕವಾದಂತಹ ಆರೋಗ್ಯ ಪೂರಕವಾದ ಅಂತಹ ಔಷಧಿ ಗುಣವುಳ್ಳ ಆಹಾರಗಳನ್ನು ಸವಿಯಲು ಆಹಾರ ಪ್ರಿಯರು ಆದಿವಾಸಿ ಕುಟೀರಕ್ಕೆ ಭೇಟಿ ನೀಡಿ ಆದಿವಾಸಿ ಬುಡಕಟ್ಟು, ಆಹಾರಗಳನ್ನು ಪ್ರೋತ್ಸಾಹಿಸುವಂತೆ ಮನವಿ ಮಾಡಿದ್ದಾರೆ. ಆದಿವಾಸಿ ಕುಟೀರದಲ್ಲಿ ಕೊಡಗು ಜಿಲ್ಲೆ ಜಾನಪದ ಅಕಾಡೆಮಿ ಪುರಸ್ಕೃತರು ಹಾಗೂ ಗಿಡಮೂಲಿಕೆ ತಜ್ಞರಾದ ನಾಗಮ್ಮ ಅವರು ಸಹ ಆಹಾರ ಮೇಳದಲ್ಲಿ ಭಾಗವಹಿಸುತ್ತಿದ್ದು, ಅನೇಕ ಕಾಯಿಲೆಗಳನ್ನು ಗಿಡಮೂಲಿಕೆ ಔಷಧಿಗಳಿಂದ ಗುಣಪಡಿಸಲಿದ್ದು ಇದರ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿ.ಸ್ವಾಮಿ, ಮಂಗಳಮ್ಮ, ಸೋಮಯ್ಯ ಮಲಿಯೂರು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಕೃತಿ ಆದಿವಾಸಿ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ಎಂ.ಕೃಷ್ಣಯ್ಯ ಮಾತನಾಡಿದರು.

### ದರ ಪಟ್ಟಿ

ಬೊಂಬು ಬಿರಿಯಾನಿ (200 ರೂ), ನಾಟಿ ಕೋಳಿ ಬೊಂಬು ಬಿರಿಯಾನಿ (250 ರೂ), ಮಟನ್ ಬಿರಿಯಾನಿ (300 ರೂ.) ಮಾಕಳಿ ಬೇರಿನ ಟೀ (20 ರೂ.), ಕಾಡುಗೆಣಸು ಜೇನು ತುಪ್ಪ ಮಿಶ್ರಣ (50 ರೂ,) ನಳ್ಳಿ (ಕ್ರಾಬ್) ಸಾರು ಮುದ್ದೆ (150 ರೂ.) ವಿವಿಧ ಕಾಡು ಸೊಪ್ಪು ಗಳ ಪಲ್ಯ (50 ರೂ.), ಬಿದರಕ್ಕಿ ಪಾಯಸ (50 ರೂ.)

## ದಸರಾ ಬಳಿಕ ಕಲಾಮಂದಿರದ ಸಮಗ್ರ ಅಭಿವೃದ್ಧಿ ಕಾಮಗಾರಿ ಆರಂಭ

- ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾಹಿತಿ
- ಫೋಟೋ ಜರ್ನಲಿಸ್ಟ್ ದಸರಾ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ



ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ ದಸರಾ ಛಾಯಾಚಿತ್ರ ಪ್ರದರ್ಶನ–2025 ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ವೀಕ್ಷಿಸಿದರು.

ಮೈಸೂರು, ಸೆ.21(ಎಸ್‌ಪಿಎನ್)– ಮೈಸೂರಿನ ಕಲಾಮಂದಿರವನ್ನು 16 ಕೋಟಿ ರೂ. ವೆಚ್ಚದಲ್ಲಿ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಅನುಮತಿ ನೀಡಿದ್ದು, ದಸರಾ ಮುಗಿದ ತಕ್ಷಣ ಕಾಮಗಾರಿಗೆ ಚಾಲನೆ ದೊರಕಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರು ಕಲಾಮಂದಿರ ಆವರಣದ ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಆರಂಭಗೊಂಡ ದಸರಾ ಛಾಯಾಚಿತ್ರ ಪ್ರದರ್ಶನ–2025ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದಸರಾ ಮಹೋತ್ಸವ ಮುಗಿದ ತಕ್ಷಣ ಕಲಾಮಂದಿರ ನವೀಕರಣ ಕಾಮಗಾರಿ ಆರಂಭಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಇಲ್ಲಿ ನಡೆಯುವ ಕಾರ್ಯಕ್ರಮಗಳ ಬದಲಿ ಜಾಗದಲ್ಲಿ ನಡೆಸಲು ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.

ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಮೈಸೂರಿನ ಪತ್ರಿಕಾ ಛಾಯಾಗ್ರಾಹಕರ ಕ್ಯಾಮರಾ ಕಣ್ಣಲ್ಲಿ ಸೆರೆಯಾದ ಛಾಯಾಚಿತ್ರಗಳ ಪ್ರದರ್ಶನ ಆರಂಭಗೊಂಡಿದ್ದು, ಆಸಕ್ತರು ಭೇಟಿ ನೀಡಿ ಕಣ್ತುಂಬಿಕೊಳ್ಳಬಹುದು. ಛಾಯಾಚಿತ್ರಗಳಿಂದ ಮಾತ್ರ ಚರಿತ್ರೆಯನ್ನು ಶೋಧಿಸಲು ಸಾಧ್ಯವಾಗಲಿದ್ದು, ಸಾವಿರ ಪದಗಳು ಹೇಳದ ಕಥೆಯನ್ನು ಕೇವಲ ಒಂದು ಛಾಯಾಚಿತ್ರಕ್ಕೆ ಹೇಳುವ ಶಕ್ತಿ ಇದೆ.ಅಲ್ಲದೆ, ಪ್ರದರ್ಶನದಲ್ಲಿರುವ ಛಾಯಾಚಿತ್ರಗಳು ಸಾಮಾಜಿಕ ಮತ್ತು ಸೌಹಾರ್ದತೆಯ ಸಂದೇಶವನ್ನು ನೀಡುವ ಮೂಲಕ ಗಮನ ಸೆಳೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಛಾಯಾಚಿತ್ರ ಪತ್ರಿಕೋದ್ಯಮಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ರಾಜ್ಯ ಸರಕಾರ ಫೋಟೋಗ್ರಫಿ ಅಕಾಡೆಮಿ ಸ್ಥಾಪಿಸಿದರೆ ಪತ್ರಿಕಾ ಛಾಯಾಗ್ರಾಹಕರೊಂದಿಗೆ ಹೊಸ ಛಾಯಾಗ್ರಾಹಕರಿಗೆ ಪ್ರೋತ್ಸಾಹ ನೀಡಲು ವೇದಿಕೆ ಸಿಗಲಿದೆ ಎಂದು ಸಲಹೆ ನೀಡಿದರು.

ಪ್ರದರ್ಶನದಲ್ಲಿ ಮೈಸೂರು ನಗರದ ಪತ್ರಿಕಾ ಛಾಯಾಗ್ರಾಹಕರೂ ಆದ ಅಸೋಸಿಯೇಷನ್ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ, ಪ್ರಧಾನ ಕಾರ್ಯದರ್ಶಿಯಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಛಾಯಾಗ್ರಾಹಕ ಲಕ್ಷ್ಮೀನಾರಾಯಣ್ ಯಾದವ್, ಪತ್ರಿಕಾ ಛಾಯಾಗ್ರಾಹಕರಾದ ಗವಿಮಠ ರವಿ, ಕೃಷ್ಣೋಜಿರಾವ್, ನಾಗೇಶ್ ಪಾಣತ್ತಲೆ, ಉದಯ ಶಂಕರ್, ಅನುರಾಗ್ ಬಸವಣ್ಣ, ಕೆ.ಎಚ್. ಚಂದ್ರು, ಎಸ್.ಆರ್.ಮಧುಸೂದನ್ ಸೇರಿದಂತೆ ಇತರರು ಕಳೆದ ಒಂದು ವರ್ಷದ ಅವಧಿಯಲ್ಲಿ ಮೈಸೂರು ಸೇರಿದಂತೆ ನಾನಾ ಕಡೆ ತೆರಳಿ ತಮ್ಮ ಕ್ಯಾಮರಾ ಕಣ್ಣಲ್ಲಿ ಸೆರೆ ಹಿಡಿದ 70ಕ್ಕೂ ಹೆಚ್ಚು ಛಾಯಾಚಿತ್ರಗಳನ್ನು ಗ್ಯಾಲರಿಯಲ್ಲಿ ಪ್ರವಾಸಿಗರ ವೀಕ್ಷಣೆಗಿಟ್ಟಿದ್ದಾರೆ. ಅ.3ರವರೆಗೆ ಬೆಳಗ್ಗೆ 9ರಿಂದ ರಾತ್ರಿ 9 ಗಂಟೆಯವರೆಗೆ ಪ್ರದರ್ಶನ ಇರಲಿದೆ. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್‌ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇದ್ದರು.

## ದಸರಾ ವೇಳೆ ಪಾಲಿಕೆಯಿಂದ ಸ್ವಚ್ಛತಾ ಜಾಗೃತಿ ಅಭಿಯಾನ

ಮೈಸೂರು, ಸೆ.21(ಎಂಕೆ)– ನಾಡ ಹಬ್ಬ ಮೈಸೂರು ದಸರಾ ಮಹೋತ್ಸವದ ಜನಪ್ರಿಯ ಕಾರ್ಯಕ್ರಮಗಳ ನಡುವೆ ಸಾರ್ವಜನಿಕರಲ್ಲಿ ಸ್ವಚ್ಛತಾ ಜಾಗೃತಿ ಮೂಡಿಸಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿದೆ...!

ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ದಸರಾ ವಸ್ತುಪ್ರದರ್ಶನ ಸೇರಿದಂತೆ ಜನಸಂದಣಿ ಹೆಚ್ಚಾಗಿ ಸೇರುವ ಸ್ಥಳಗಳಲ್ಲಿ ಹಾಗೂ ನಗರದ ಪ್ರಮುಖ ವೃತ್ತಗಳಲ್ಲಿ ಎಲ್‌ಇಡಿ ಪರದೆ ಮೂಲಕ ಸ್ವಚ್ಛತಾ ಜಾಗೃತಿ ಮೂಡಿಸಲು ನಗರಪಾಲಿಕೆ ನಿರ್ಧರಿಸಿದೆ.

ವಿಶ್ವದ ಸ್ವಚ್ಛ ನಗರ ಖ್ಯಾತಿ ಪಡೆದಿರುವ ಮೈಸೂರಿನ ಸ್ವಚ್ಛತಾ ನಿರ್ವಹಣೆ ಹಾಗೂ ಸಾರ್ವಜನಿಕರಲ್ಲಿ ಕಸ ವಿಲೇವಾರಿ ಕುರಿತು ಅರಿವು ಮೂಡಿಸುವ ಹಿನ್ನೆಲೆಯಲ್ಲಿ ದಸರಾ ಕಾರ್ಯಕ್ರಮಗಳಲ್ಲಿಯೇ ಜಾಗೃತಿ ಅಭಿಯಾನ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈಗಾಗಲೇ ಮೈಸೂರಿನ ಪ್ರಮುಖ ವೃತ್ತಗಳಲ್ಲಿ ಎಲ್‌ಇಡಿ ಪರದೆಗಳ ಮೂಲಕ ಸ್ವಚ್ಛತಾ ಜಾಗೃತಿ ಮಾಹಿತಿಯುಳ್ಳ ವಿಡಿಯೋ ತುಣುಕುಗಳನ್ನು ಪ್ರಸಾರ ಮಾಡಲಾಗುತ್ತಿದೆ. ಅದೇ ರೀತಿ ಹೆಚ್ಚು ಜನರು ಸೇರುವ ದಸರಾ ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ವಸ್ತು ಪ್ರದರ್ಶನ, ಮಹಿಳಾ ಮತ್ತು ಮಕ್ಕಳ ದಸರಾ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆಗಳ ಸಮೀಪದಲ್ಲಿ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಿ ಕಸ ವಿಲೇವಾರಿ ಕುರಿತ ವಿಡಿಯೋ ಸಂದೇಶಗಳನ್ನು ಪ್ರಸಾರ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ದಸರಾ ಮುಕ್ತಾಯದವರೆಗೂ ಎಲ್ಲೆಂದರಲ್ಲಿ ಕಸ ಬಿಸಾಡುವುದನ್ನು ನಿಯಂತ್ರಿಸಲು ಹಾಗೂ ವಿಂಗಡಣೆ ಮತ್ತು ವಿಲೇವಾರಿ ಕುರಿತು ಮೈಸೂರಿಗರು, ಪ್ರವಾಸಿಗರಿಗೆ ಮನದಟ್ಟು ಮಾಡಿಕೊಡುವ ದೃಷ್ಟಿಯಿಂದ ಪಾಲಿಕೆಯಿಂದಲೇ ಈ ವರ್ಷ ಜಾಗೃತಿಗಾಗಿ ಯೋಜನೆ ರೂಪಿಸಲಾಗಿದೆ ಎಂದರು.




ಮೈಸೂರು ತಾಲೂಕು ಜಯಪುರದ ರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳು, ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜಯಂತಿ ಆಚರಿಸಲಾಯಿತು. ಸಮಾಜ ಸೇವಕ ಎಸ್.ಶ್ರೀಕಾಂತ್, ಬಿಇಓ ಪ್ರಕಾಶ್, ಉಪತಹಸೀಲ್ದಾರ್ ಮಂಜುನಾಥ್, ನಿವೃತ್ತ ಮುಖ್ಯಶಿಕ್ಷಕ ಎಸ್.ವೈದ್ಯನಾಥನ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಡಿ.ಮಾಲೇಗೌಡ, ಶಾಲೆಯ ಮುಖ್ಯಶಿಕ್ಷಕ ಸಿದ್ದರಾಮು, ಸಹಶಿಕ್ಷಕ ಕೆ.ಎನ್.ಸಿದ್ದೇಗೌಡ, ಸಿಆರ್‌ಪಿ ಮಹೇಶ್‌ಕುಮಾರ್, ಇಸಿಓ ಮಂಜು, ಜಯಪುರ ಪೊಲೀಸ್ ಠಾಣೆ ಎಎಸ್‌ಐ ಪುಟ್ಟಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷರು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ಬದ್ಧ ವೈರಿಗಳ ಕದನದಲ್ಲಿ ಗೆದ್ದು ಬೀಗಿದ ಟೀಂ ಇಂಡಿಯಾ

## ಪ್ರಸಕ್ತ ಟೂರ್ನಿಯಲ್ಲಿ ಪಾಕ್ ವಿರುದ್ಧ ಭಾರತಕ್ಕೆ 2ನೇ ಗೆಲುವು



ಶುಭ್‌ಮನ್ ಗಿಲ್ ಮತ್ತು ಅಭಿಷೇಕ್ ಶರ್ಮಾ ಸಂಭ್ರಮ

ದುಬೈ, ಸೆ.21(ವಿವಿಹೆಚ್)– ಆರಂಭಿಕರಾದ ಅಭಿಷೇಕ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಅವರ ಬಿರುಸಿನ ಶತಕದ ಜೊತೆಯಾಟದ ನೆರವಿನಿಂದ ಭಾರತ ಬದ್ಧವೈರಿ ಪಾಕಿಸ್ತಾನದ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಭಾರತ ಪ್ರಸಕ್ತ ಟೂರ್ನಿಯಲ್ಲಿ 2ನೇ ಬಾರಿಗೆ ಪಾಕ್ ವಿರುದ್ಧ ಅಧಿಕಾರಯುತ ಜಯ ದಾಖಲಿಸಿದೆ.

ದುಬೈನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಏಷ್ಯಾಕಪ್ ಸೂಪರ್–4 ಹಂತದ ಹೈವೋಲ್ಟೇಜ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ಭಾರತದ ಮಿಸ್ ಫೀಲ್ಡಿಂಗ್ ಮತ್ತು ಕ್ಯಾಚ್ ಡ್ರಾಪ್‌ಗಳ ಭರಪೂರ ಲಾಭ ಪಡೆದು ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿತು. ಬಳಿಕ 172 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 18.5 ಓವರ್‌ಗಳಲ್ಲಿ ಇನ್ನೂ 7 ಎಸೆತಗಳು ಬಾಕಿ ಇರುವಂತೆಯೇ 174 ರನ್ ಗಳಿಸುವ ಮೂಲಕ ವಿಜಯದ ನಗೆ ಬೀರಿತು.

ಭಾರತದ ಆರಂಭಿಕ ಆಟಗಾರರಾದ ಅಭಿಷೇಕ್ ಶರ್ಮಾ ಮತ್ತು ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 105 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಭರ್ಜರಿ ಆರಂಭ ಒದಗಿಸಿದರು. ಕಳೆದ ಪಂದ್ಯದಲ್ಲಿ ಶಾಹಿನ್ ಶಾ ಅಫ್ರಿದಿ ಅವರ ಮೊದಲ ಎಸೆತವನ್ನು ಬೌಂಡರಿಗಟ್ಟಿದ್ದ ಅಭಿಷೇಕ್ ಶರ್ಮಾ ಈ ಬಾರಿ ಬೌನ್ಸರ್ ಆಗಿ ಬಂದ ಪ್ರಥಮ ಎಸೆತವನ್ನು ಲೆಗ್ ಲಾಂಗ್ ಕಡೆಗೆ ಸಿಕ್ಸರ್‌ಗೆತ್ತಿ ಅಚ್ಚರಿ ಮೂಡಿಸಿದರು. ಬಳಿಕ ಮಿಂಚಿನ ಬ್ಯಾಟಿಂಗ್ ನಡೆಸಿದ ಈ ಜೋಡಿ 4.4 ಓವರ್‌ಗಳಲ್ಲಿ 50 ರನ್ ಗಳಿಸಿದರು. ಅಲ್ಲದೇ 8.4 ಓವರ್‌ಗಳಲ್ಲಿ ತಂಡದ ಮೊತ್ತವನ್ನು ನೂರರ ಗಡಿ ದಾಟಿಸಿದರು. ಸ್ಫೋಟಕ ಆಟವಾಡಿದ ಅಭಿಷೇಕ್ ಶರ್ಮಾ ಕೇವಲ 24 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಮಿಂಚಿದರೇ, ಮೈದಾನದ ಮೂಲೆಮೂಲೆಗೂ ಚೆಂಡನ್ನಟ್ಟಿ ಪಾಕಿಸ್ತಾನದ ಫೀಲ್ಡರ್‌ಗಳ ಬೆವರಿಳಿಸಿದ ಶುಭ್‌ಮನ್ ಗಿಲ್ ಅರ್ಧಶತಕದ ಅಂಚಿನಲ್ಲಿ ಔಟಾಗುವ ಮೂಲಕ ಅರ್ಧಶತಕದಿಂದ ವಂಚಿತರಾದರು. ಇವರು 28 ಎಸೆತಗಳಲ್ಲಿ 8 ಬೌಂಡರಿ ಒಳಗೊಂಡ 47 ರನ್ ಗಳಿಸಿ ಫಹೀಮ್ ಅಶ್ರಫ್ ಅವರ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆಗಿ ನಿರ್ಗಮಿಸಿದರು. ನಂತರ ಬಂದ ಸೂರ್ಯ ಕುಮಾರ್ ಯಾದವ್ ಬಂದಷ್ಟೇ ವೇಗವಾಗಿ ಹ್ಯಾರಿಸ್ ರೌಫ್ ಬೌಲಿಂಗ್‌ನಲ್ಲಿ ಔಟಾಗುವ ಮೂಲಕ ಸೊನ್ನೆ ಸುತ್ತಿದರು.

ಮತ್ತೊಂದೆಡೆ ಅಬ್ಬರಿಸಿದ ಅಭಿಷೇಕ್ ಶರ್ಮಾ 39 ಎಸೆತಗಳಲ್ಲಿ 5 ಸಿಕ್ಸರ್, 6 ಬೌಂಡರಿ ಒಳಗೊಂಡ 74 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸಂಜು ಸ್ಯಾಮ್ಸನ್ 1 ಬೌಂಡರಿ ಒಳಗೊಂಡ 13 ರನ್ ಗಳಿಸಿ ಔಟಾದರು. ಆದರೆ ಈ ವೇಳೆ ಜೊತೆಗೂಡಿದ ತಿಲಕ್ ವರ್ಮಾ ಹಾಗೂ ಹಾರ್ದಿಕ್ ಪಾಂಡ್ಯ ತಂಡಕ್ಕೆ ಜಯ ತಂದು ಕೊಟ್ಟರು. ತಿಲಕ್ ವರ್ಮಾ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ ಅಜೇಯ 30 ರನ್ ಗಳಿಸಿದರೇ, ಪಾಂಡ್ಯ 7 ರನ್ ಗಳಿಸಿದರು. ಪಾಕಿಸ್ತಾನದ ಪರ ಹ್ಯಾರೀಸ್ ರೌಫ್ 2, ಅಬ್ರಾರ್ ಅಹಮ್ಮದ್, ಫಹೀಮ್ ಅಶ್ರಫ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ, ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 15 ರನ್ ಗಳಿಸಿದ್ದ ಫಖರ್ ಝಮಾನ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 2ನೇ ವಿಕೆಟ್‌ಗೆ ಜೊತೆಗೂಡಿದ ಸಾಹಿಬ್‌ಜಾದಾ ಫರ್ಹಾನ್ ಹಾಗೂ ಸೈಮ್ ಅಯೂಬ್ 72 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಅಯೂಬ್ 21 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ನಡೆಸಿದ ಫರ್ಹಾನ್ 45 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ 58 ರನ್ ಗಳಿಸಿದರು. ಉಳಿದಂತೆ ಮೊಹಮ್ಮದ್ ನವಾಜ್ 21, ಸಲ್ಮಾನ್ ಆಘಾ 17, ಫಾಹೀಮ್ ಅಶ್ರಫ್ 20 ರನ್ ಗಳಿಸಿದರು.

ಭಾರತದ ಪರ ಶಿವಂ ದುಬೆ 2, ಕುಲ್ದೀಪ್ ಯಾದವ್ ಮತ್ತು ಹಾರ್ದಿಕ್ ಪಾಂಡ್ಯ ತಲಾ ಒಂದೊಂದು ವಿಕೆಟ್ ಪಡೆದರು. ಅಭಿಷೇಕ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

# ‘ರೋಟರಿ ಕ್ಲಬ್ ಆಫ್ ಸೇವಾ ಮೈಸೂರು’ ಉದ್ಘಾಟನೆ



ನೂತನ ‘ರೋಟರಿ ಕ್ಲಬ್ ಆಫ್ ಸೇವಾ ಮೈಸೂರು’ ಅನುಸ್ಥಾಪಿತ ಕಾರ್ಯಕ್ರಮದಲ್ಲಿ ಅಧ್ಯಕ್ಷರಿಗೆ ಪ್ರಮಾಣ ಪತ್ರ ನೀಡಲಾಯಿತು.

ಮೈಸೂರು, ಸೆ.21– ನೂತನ ‘ರೋಟರಿ ಕ್ಲಬ್ ಆಫ್ ಸೇವಾ ಮೈಸೂರು’ ಇತ್ತೀಚೆಗೆ ಉದ್ಘಾಟನೆಗೊಂಡಿತು.

ನಗರದ ಹೋಟೆಲ್ ಸಿಪಾಯಿ ಗ್ರಾಂಡೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಗವರ್ನರ್ ರೊ.ರಾಮಕೃಷ್ಣ ಪಿ.ಕೆ. ಅವರು ‘ರೋಟರಿ ಕ್ಲಬ್ ಆಫ್ ಸೇವಾ ಮೈಸೂರು’ ಸಂಸ್ಥಾಪಕ ಅಧ್ಯಕ್ಷರಾಗಿ ಆಯ್ಕೆಯಾಗಿರುವ ರೊ.ಡಾ.ಎಂ.ಪಿ. ವರ್ಷ ಅವರಿಗೆ ಅಧ್ಯಕ್ಷರ ಕೊರಳ ಪಟ್ಟಿ ಧರಿಸಿ, ಪ್ರಮಾಣಪತ್ರ ನೀಡುವ ಮೂಲಕ ನೂತನ ಕ್ಲಬ್ ಅನ್ನು ಅನುಸ್ಥಾಪಿಸಿದರು.

ರೋಟರಿ ಪಂಚಶೀಲ್ ಕ್ಲಬ್ ಪ್ರಾಯೋಜಕತ್ವದ ನೂತನ ಕ್ಲಬ್‌ನ ಚೊಚ್ಚಲ ಸೇವಾ ಚಟುವಟಿಕೆಯಾಗಿ ಮಂಡ್ಯದ ಪಿಇಎಸ್ ಕಾಲೇಜಿನ ಮೊದಲನೇ ವರ್ಷದ ಬಿಇ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿನಿ ಹೆಚ್.ಸಿ.ಐಶ್ವರ್ಯಗೆ ಸುಮಾರು 50 ಸಾವಿರ ಮೌಲ್ಯದ ಲ್ಯಾಪ್‌ಟಾಪ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಾಮನಿರ್ದೇಶಿತ ಜಿಲ್ಲಾ ಗವರ್ನರ್ ಯಶಸ್ವಿ ಎಸ್. ಸೋಮಶೇಖರ್, ಸಹಾಯಕ ಗವರ್ನರ್ ಬಿ.ಹರೀಶ್, ರೊಟೇರಿಯನ್‌ಗಳಾದ ರಚನಾ ನಾಗೇಶ್, ರಾಜೇಂದ್ರ ಹುಬ್ಬಳ್ಳಿ, ಎನ್.ಎಸ್.ಆನಂದ್, ರೋಟರಿ ಪಂಚಶೀಲ್ ಕ್ಲಬ್‌ನ ಅಧ್ಯಕ್ಷ ಎ.ಎಸ್. ಸೋಮೇಶ್, ನೂತನ ಸೇವಾ ಕ್ಲಬ್‌ನ ಕಾರ್ಯದರ್ಶಿ ಪಿ.ಗೌರಿಶಂಕರಸ್ವಾಮಿ, ಬೆಂಗಳೂರು ರೋಟರಿ ಮೆಟ್ರೊ ಕ್ಲಬ್‌ನ ಡಾ.ಸಿ.ಎನ್.ಎನ್. ರಾಜು, ಡಾ.ಶಾನಭಾಗ್, ಕೋಲಾರ ಲೇಕ್ ಸೈಡ್‌ನ ಮಾಜಿ ಅಧ್ಯಕ್ಷ ರಾಮಕೃಷ್ಣಗೌಡ, ರೋಟರಿ ಜಿಲ್ಲೆ 3181ರ ವಿವಿಧ ರೋಟರಿ ಕ್ಲಬ್‌ಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

# ರಾಹುಲ್ ಕುಂಬರಹಳ್ಳಿಯ ‘ಕ್ಯಾತಯ್ಯನ ಕವನಗಳು’ ಕೃತಿ ಬಿಡುಗಡೆ

## ಕೇಳುವ ಕಿವಿಗಳಿಗಿಂತ ವೇದಿಕೆ ಏರುವ ಕವಿಗಳ ಸಂಖ್ಯೆ ಅಧಿಕವಿದೆ: ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ.ಪ್ರಸನ್ನಕುಮಾರ್ ಕೆರೆಗೋಡು ವಿಡಂಬನೆ



‘ಕ್ಯಾತಯ್ಯನ ಕವನಗಳು’ ಕೃತಿಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಬಿಡುಗಡೆ ಮಾಡಿದರು. ಮೈವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಧ್ಯಾಪಕರಾದ ಕೆ.ಎಂ.ಪ್ರಸನ್ನಕುಮಾರ್ ಕೆರೆಗೋಡು, ಕೆ.ಸೌಭಾಗ್ಯವತಿ, ಪಿ.ಚಂದ್ರಶೇಖರ್, ನಿವೃತ್ತ ಅಧಿಕಾರಿ ಸಿ.ರಂಗಯ್ಯ ಮತ್ತಿತರರಿದ್ದರು.

ಮೈಸೂರು, ಸೆ.21– ಸಾಹಿತ್ಯ ಚಳವಳಿ ರೂಪದಲ್ಲಿ ಸಮಾಜವನ್ನು ತಿದ್ದುವ ಪ್ರಯತ್ನ ಮಾಡಿದೆ ಎಂದು ಮಂಡ್ಯ ಸರ್ಕಾರಿ ಪದವಿ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ.ಕೆ.ಎಂ.ಪ್ರಸನ್ನಕುಮಾರ್ ಕೆರೆಗೋಡು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಹಿರಿಯ ವಿದ್ಯಾರ್ಥಿಗಳ ಒಕ್ಕೂಟ ಹಾಗೂ ಪ್ರಸಾರಾಂಗದ ಸಹಯೋಗದಲ್ಲಿ ಇಲ್ಲಿನ ಕುವೆಂಪು ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ರಾಹುಲ್ ಕುಂಬರಹಳ್ಳಿ ಅವರ ‘ಕ್ಯಾತಯ್ಯನ ಕವನಗಳು’ ಕೃತಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ವಚನ, ದಾಸ, ಪ್ರಗತಿಪರ, ದಲಿತ, ಬಂಡಾಯ, ನವ್ಯ, ನವೋದಯ ಇನ್ನಿತರ ಸಾಹಿತ್ಯ ಪ್ರಕಾರಗಳು ಚಳವಳಿ ರೂಪದಲ್ಲಿ ಸಮಾಜವನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಿವೆ. ಹಾಗಾಗಿ ಬರಹಗಾರರದ್ದೂ ಸಮಾಜವನ್ನು ತಿದ್ದುವ ಕೆಲಸವಾಗಿದೆ. ಸಾಹಿತ್ಯ ಒಂದು ಕಲಾ ಪ್ರಕಾರವಾಗಿದ್ದು, ಬರವಣಿಗೆ ಹಾಕಿಕೊಟ್ಟಿರುವ ಚೌಕಟ್ಟಿನಲ್ಲೇ ಸಾಹಿತ್ಯ ರಚನೆ ಮಾಡುವುದು ಸೂಕ್ತ. ಪ್ರಸ್ತುತ ಕೇಳುವ ಕಿವಿಗಳಿಗಿಂತ ವೇದಿಕೆಯಲ್ಲಿನ ಕವಿಗಳೇ ಹೆಚ್ಚಿದ್ದಾರೆಂಬ ಮಾತುಗಳು ಕೇಳಿ ಬರುತ್ತಿವೆ. ಆದರೆ ಸಂಸ್ಕೃತಿ, ಸಾಹಿತ್ಯದಿಂದ ಯುವಕರು ದೂರವಾಗುತ್ತಿದ್ದಾರೆ ಎನ್ನುವ ಪರಿಸ್ಥಿತಿಯಲ್ಲಿ ಇದು ಉತ್ತಮ ಬೆಳವಣಿಗೆ ಎನ್ನಬಹುದು ಎಂದರು.

ಜಾನಪದ ಕಲಾವಿದರಾದ ಕ್ಯಾತಯ್ಯನವರ ಕುಟುಂಬಕ್ಕೆ ಸೇರಿದ ರಾಹುಲ್, ಸರಳ ಶೈಲಿಯಲ್ಲಿ ವಿಮರ್ಶಾತ್ಮಕ ಹಾಗೂ ವಿಡಂಬನಾತ್ಮಕವಾಗಿ ಕವಿತೆಗಳನ್ನು ರಚಿಸಿದ್ದಾರೆ. ಸಮಾಜ, ಪರಿಸರ, ಪ್ರೀತಿ ಸೇರಿದಂತೆ ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ವಾಸ್ತವಕ್ಕೆ ಕನ್ನಡಿ ಹಿಡಿದಂತೆ ಕವಿತೆಗಳ ಮೂಲಕ ಸಾಮಾಜಿಕವಾಗಿ ಸ್ಪಂದಿಸಿರುವ ರೀತಿ ಆಕರ್ಷಕವಾಗಿದೆ. ಮನುಷ್ಯನ ಅಂತರಂಗ ಸಂಘರ್ಷಕ್ಕೆ ತಮ್ಮ ಬರಹದಲ್ಲಿ ತಾತ್ವಿಕ ರೂಪ ನೀಡಿದ್ದಾರೆ ಎಂದು ಶ್ಲಾಘಿಸಿದರು.

**ಹಣವಿದ್ದವರಿಗೆ ಅವಕಾಶ:** ಪುಸ್ತಕ ಬಿಡುಗಡೆಗೊಳಿಸಿದ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ರಾಜಕೀಯ ವ್ಯವಸ್ಥೆ ಸರಿಪಡಿಸಲಾಗದಷ್ಟು ಕಲುಷಿತವಾಗಿದೆ. ರಾಜಕಾರಣದಲ್ಲಿ ಆಸಕ್ತಿ ಹೊಂದಿರುವ ಯುವ ಜನತೆ ಎಚ್ಚರಿಕೆಯಿಂದ ಮುಂದುವರೆಯಬೇಕು. ಉನ್ನತ ಶಿಕ್ಷಣ ಪಡೆದ ಯುವಕರಿಗೆ ಅವಕಾಶಗಳೇ ಸಿಗುತ್ತಿಲ್ಲ. ಹಣ ಇರುವವರಿಗೆ ಎಲ್ಲವು ಸುಲಭವಾಗಿ ಲಭಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ಸಾಹಿತ್ಯ ಓದುವವರ ಸಂಖ್ಯೆ ಕಡಿಮೆಯಾಗಿದೆ. ಯುವ ಪೀಳಿಗೆಯಲ್ಲಿ ಓದಿನ ಅಭಿರುಚಿಯೇ ಇಲ್ಲವಾಗುತ್ತಿದೆ. ಜಾಗತೀಕರಣದಿಂದಾಗಿ ಒತ್ತಡಕ್ಕೆ ಸಿಲುಕಿ ಸಾಹಿತ್ಯ, ಸಂಗೀತ, ಕಲೆ, ರಂಗಭೂಮಿಯಿಂದ ದೂರ ಉಳಿಯುತ್ತಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಸಾಹಿತ್ಯದ ಮುಖೇನವೇ ಹೋರಾಟ ರೂಪಿಸಲಾಗಿತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರು ಜಾತೀಯತೆ ಹೋಗಲಾಡಿಸಲು ಸಾಹಿತ್ಯವನ್ನು ಅಸ್ತ್ರವಾಗಿ ಬಳಸಿಕೊಂಡಿದ್ದರು. ಸಾಮಾಜಿಕ ಹೊಣೆಗಾರಿಕೆಯುಳ್ಳ ಯಾವುದೇ ಬರವಣಿಗೆ ಉತ್ತಮ ಸಾಹಿತ್ಯವಾಗುತ್ತದೆ. ಈ ಮೂಲಕ ರಾಜಕಾರಣವನ್ನೂ ಸರಿದಾರಿಗೆ ತರಬಹುದು ಎಂದು ಅಭಿಪ್ರಾಯಿಸಿದರು.

**ಸನ್ಮಾನ:** ಇದೇ ವೇಳೆ ಗೀತಾ ಶಿಶು ಶಿಕ್ಷಾ ಸಂಸ್ಥೆಯ ಶಿಕ್ಷಕಿ ಶೀಲಾ, ಯೋಗೇಶ್ ಆರ್.ಶಂಬಹಳ್ಳಿ, ಸಂಶೋಧನಾ ವಿದ್ಯಾರ್ಥಿಗಳಾದ ಮಹದೇವಸ್ವಾಮಿ ಎಂ.ಚೋರನಹಳ್ಳಿ, ಹೆಚ್.ಆರ್.ಸಂತೋಷ್‌ಕುಮಾರ್, ಮಹಾಂತಪ್ಪ ನವಲಕಲ್, ಎಸ್‌ಎಂಪಿ ಪ್ರಕಾಶನದ ಡಾ.ಎಸ್.ಪಿ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ವಿವಿ ಸಂಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ.ಕೆ.ಸೌಭಾಗ್ಯವತಿ, ಕನ್ನಡ ಸಹ ಪ್ರಾಧ್ಯಾಪಕ ಡಾ.ಪಿ. ಚಂದ್ರಶೇಖರ್, ರಾಹುಲ್ ಕುಂಬರಹಳ್ಳಿ, ನಿವೃತ್ತ ಅಧಿಕಾರಿ ಸಿ.ರಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.

# ಎಲ್ಲ ಕಾಲದಲ್ಲೂ ಮೈಸೂರಲ್ಲಿ ಕಣ್ಣಿಗೆ ಬೀಳುವುದು ಆಕಾಶವಾಣಿ!

## ಮೈಸೂರು ಆಕಾಶವಾಣಿ ಕೇಳುಗರ ಬಳಗದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಾಚಾರಿ ಅಭಿಪ್ರಾಯ



ಮೈಸೂರು, ಸೆ. 21– ಆಕಾಶವಾಣಿ ಮತ್ತು ಕೇಳುಗರ ನಡುವೆ ಭಾವ ಸೇತುವಾಗಿರುವ ಸಮುದ್ಯತಾ ಶ್ರೋತೃ ಬಳಗವು ಮೈಸೂರು ಆಕಾಶವಾಣಿಯಲ್ಲಿ ಕಳೆದ ತಿಂಗಳು ನಿವೃತ್ತರಾದ ಉಪನಿರ್ದೇಶಕ ಎಸ್.ಎಸ್.ಉಮೇಶ್ ಅವರಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಇತ್ತೀಚೆಗೆ ಮೈಸೂರಿನ ವಿಜಯ ವಿಠಲ ಶಿಕ್ಷಣ ಸಂಸ್ಥೆಯ ಆವರಣದ ಸಭಾಂಗಣದಲ್ಲಿ ಆಯೋಜಿಸಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಳಗದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಾಚಾರಿ ವಹಿಸಿ ಮಾತನಾಡಿ, ಕನ್ನಡ ವರ್ಣಮಾಲೆಯ ಮೊದಲ ಹಾಗೂ ಎರಡನೆಯ ಅಕ್ಷರಗಳಾದ ಅ, ಆ ದ ಬಗ್ಗೆ ಅರ್ಥಪೂರ್ಣವಾಗಿ ವಿಶ್ಲೇಷಿಸಿದರು. "ಅ"–ಅಂದರೆ ಅಮ್ಮನೂ ಹೌದು ಅರಮನೆಯು ಹೌದು, "ಆ"–ಎಂದರೆ ಆಕಾಶವಾಣಿ ಆಗುತ್ತದೆ. ಏಕೆಂದರೆ ನಮ್ಮ ಕಣ್ಣಿಗೆ ಮತ್ತು ಕಿವಿಗಳಿಗೆ ಗೋಚರಿಸುವುದು, ಮೈಸೂರಿಗರಷ್ಟೇ ಅಲ್ಲದೆ ವಿಶ್ವದೆಲ್ಲೆಡೆ ಮೈಸೂರು ಅರಮನೆ ಮತ್ತು ಮೈಸೂರು ಆಕಾಶವಾಣಿ ಇವೆರಡೂ ಎಲ್ಲರಿಗೂ ಇಷ್ಟವಾದಂತದ್ದು. ಮೈಸೂರಿನ ಜೊತೆ ಇವೆರಡೂ ಕೂಡ ಸೇರಿಕೊಂಡು ಹಲವು ಪ್ರಥಮಗಳಿಗೆ ನಾಂದಿಯಾಗಿವೆ.

ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಆಕಾಶವಾಣಿಗೆ ಆಶ್ರಯದಾತರಾಗಿದ್ದರು. ಎಂ.ವಿ.ಗೋಪಾಲ ಸ್ವಾಮಿ ಅವರ ಕೊಡುಗೆಯನ್ನು ಪ್ರತಿಯೊಬ್ಬರೂ ನೆನಪಿಸಿಕೊಳ್ಳಲೇಬೇಕು ಎಂದರು.

ಸನ್ಮಾನ ಸ್ವೀಕರಿಸಿದ ಉಮೇಶ್ ಎಸ್.ಎಸ್ ಮಾತನಾಡಿ, ನಾನು ಆಕಾಶವಾಣಿಗೆ ಸೇರುವ ಮುಂಚೆ ನಾಟಕ ವಿಭಾಗದಲ್ಲಿ ಕೆಲಸ ಮಾಡಿದ ಅನುಭವ ಇತ್ತು. ಕಲಬುರ್ಗಿ ಆಕಾಶವಾಣಿ ಕೇಂದ್ರಕ್ಕೆ ಕೆಲಸಕ್ಕೆ ಸೇರಿದ ನಂತರ ನಾಟಕದ ಹಲವಾರು ಮಜಲುಗಳ ದರ್ಶನವಾಯಿತು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಆಕಾಶವಾಣಿಯ ಸಂಸ್ಥಾಪಕರಾದ ಡಾ.ಎಂ.ವಿ. ಗೋಪಾಲಸ್ವಾಮಿ ಅವರ ಮೊಮ್ಮಗಳು ಭಾರತಿ ಘನ ಶ್ಯಾಂ ಉಪಸ್ಥಿತರಿದ್ದರು. ವೇದಿಕೆಯಲ್ಲಿ ಕೇಳುಗರ ಬಳಗದ ಹಿರಿಯ ಸದಸ್ಯೆ ಸುಧಾರಾಜ್ ಮತ್ತು ಉಮೇಶ್ ಎಸ್.ಎಸ್ ಅವರ ಪತ್ನಿ ರಾಜೇಶ್ವರಿ ಹಾಜರಿದ್ದರು.

# ಸಮೀಕ್ಷೆಯಲ್ಲಿ ತೊಡಗುವ ಶಿಕ್ಷಕರ ಸಮಸ್ಯೆ ನಿವಾರಿಸಲು ಒತ್ತಾಯ



ಮೈಸೂರು ಜಿಲ್ಲಾ ಡಿಡಿಪಿಐ ಎಸ್.ಟಿ.ಜವರೇಗೌಡ ಮತ್ತು ಸಮಾಜ ಕಲ್ಯಾಣ ಉಪನಿರ್ದೇಶಕ ರಾಘವೇಂದ್ರ ಅವರೊಂದಿಗೆ ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಚರ್ಚೆ ನಡೆಸಿದರು.

ಮೈಸೂರು, ಸೆ.21(ಎಸ್‌ಪಿಎನ್)– ಮೈಸೂರು ನಗರದಲ್ಲಿ ಜಾತಿಗಣತಿ ಸಮೀಕ್ಷೆಗೆ ವಿವಿಧ ತಾಲೂಕಿನ ಸಾವಿರಕ್ಕೂ ಅಧಿಕ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಜಿಲ್ಲಾಡಳಿತ ನೇಮಿಸಿದೆ. ಆದರೆ, ಈ ಶಿಕ್ಷಕರು ಹಲವು ವರ್ಷಗಳಿಂದ ಗ್ರಾಮೀಣ ಪ್ರದೇಶ ದಲ್ಲಿ ಕೆಲಸ ಮಾಡುತ್ತಿರುವುದರಿಂದ ಇವರಿಗೆ ಸಮೀಕ್ಷೆ ವೇಳೆ ಉದ್ಭವಿಸುವ ಸಮಸ್ಯೆಗಳನ್ನು ಬಗೆಹರಿಸುವಂತೆ ಮೈಸೂರು ಜಿಲ್ಲಾ ಡಿಡಿಪಿಐ ಎಸ್.ಟಿ.ಜವರೇಗೌಡ ಅವರಲ್ಲಿ ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಒತ್ತಾಯಿಸಿದೆ.

ಶಾಲಾ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಡಿಡಿಪಿಐ ಕಚೇರಿಯಲ್ಲಿ ನಡೆದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳೊಂದಿಗಿನ ಸಭೆಯಲ್ಲಿ ಸಮೀಕ್ಷೆ ವೇಳೆ ಸಂಭವಿಸುವ ಸಮಸ್ಯೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು. ಈ ವೇಳೆ ಶಿಕ್ಷಕರ ಸಂಘದ ಅಧ್ಯಕ್ಷ ಸೋಮೇಗೌಡ ಮಾಹಿತಿ ನೀಡಿ, ಹಲವು ವರ್ಷಗಳಿಂದ ಶಿಕ್ಷಕರು ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಇದೀಗ ದಿಢೀರ್ ಆಗಿ ನಗರ ಪ್ರದೇಶದ ಸಮೀಕ್ಷೆಗೆ ನಿಯೋಜಿಸಿರುವುದು ಸರಿಯಷ್ಟೇ. ಆದರೆ, ಗ್ರಾಮೀಣ ಪ್ರದೇಶದ ಎಲ್ಲಾ ಶಿಕ್ಷಕರನ್ನು ನಗರ ಪ್ರದೇಶಕ್ಕೆ ನಿಯೋಜಿಸದಂತೆ ಮನವಿ ಮಾಡಿದರು.

ನಗರ ಪ್ರದೇಶದಲ್ಲಿ ವಾಸವಿದ್ದು, ದಿನನಿತ್ಯ ಗ್ರಾಮೀಣ ಪ್ರದೇಶದ ಶಾಲೆಗಳಿಗೆ ತೆರಳಿ ಕರ್ತವ್ಯ ನಿರ್ವಹಿಸುತ್ತಾರೋ ಅಂತಹ ಶಿಕ್ಷಕರಿಗೆ, ಅವರು ವಾಸ ಮಾಡುವ ವಾರ್ಡ್‌ಗಳಲ್ಲಿ ಅಥವಾ ಅಕ್ಕ–ಪಕ್ಕದ ವಾರ್ಡ್‌ಗಳಲ್ಲಿ ಸಮೀಕ್ಷೆಗೆ ನಿಯೋಜಿಸುವಂತೆ ಮನವಿ ಮಾಡಿದರಲ್ಲದೆ, ತೀವ್ರತರಹ ಕಾಯಿಲೆಯಿಂದ ಬಳಲುತ್ತಿರುವವರು, ಗರ್ಭಿಣಿಯರು, ಚಿಕ್ಕಮಕ್ಕಳ ಆರೈಕೆಯಲ್ಲಿರುವ ಶಿಕ್ಷಕರು, ಅಂಗವಿಕಲರು, 58 ವರ್ಷ ಮೇಲ್ಪಟ್ಟ ಶಿಕ್ಷಕರನ್ನು ಸಮೀಕ್ಷಾ ಕಾರ್ಯದಿಂದ ಹೊರಗಿಟ್ಟು ಉಳಿದ ಶಿಕ್ಷಕರನ್ನು ನಿಯೋಜಿಸುವಂತೆ ಮಾಡಿದ್ದ ಮನವಿಗೆ, ಶಿಕ್ಷಣಾ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಒಪ್ಪಿಗೆ ಸೂಚಿಸಿದ್ದಾರೆ.

ಆದರೆ, ನಗರ ಪ್ರದೇಶಕ್ಕೆ ನಿಯೋಜನೆಗೊಂಡ ಶಿಕ್ಷಕರನ್ನು ಅವರು ವಾಸಿಸುವ ಆಯಾಯ ವಾರ್ಡ್‌ಗಳಲ್ಲಿ ಅಥವಾ ಅಕ್ಕ–ಪಕ್ಕದ ವಾರ್ಡ್‌ಗಳಲ್ಲಿ ನಿಯೋಜಿಸುವಂತೆ ಸಂಘದ ಪದಾಧಿಕಾರಿಗಳು ಮಾಡಿರುವ ಮನವಿಗೆ ಜಿಲ್ಲಾಧಿಕಾರಿಗಳೊಂದಿಗೆ ಈ ವಿಷಯ ಪ್ರಸ್ತಾಪಿಸಿ ಅಂತಿಮಗೊಳಿಸಲಾಗುವುದು ಎಂದು ಡಿಡಿಪಿಐ ಹಾಗೂ ಸಮಾಜ ಕಲ್ಯಾಣ ಉಪನಿರ್ದೇಶಕ ರಾಘವೇಂದ್ರ ಅವರು, ಶಿಕ್ಷಕರ ಸಂಘಟನೆಯ ಪದಾಧಿಕಾರಿಗಳಿಗೆ ಭರವಸೆ ನೀಡಿದ್ದಾರೆ.

ಸಭೆಯಲ್ಲಿ ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ಬಿಇಓಗಳು, ಪ್ರಾಥಮಿಕ ಶಾಲಾ ಶಿಕ್ಷರ ಸಂಘದ ಉಪಾಧ್ಯಕ್ಷೆ ಮಮತಾ, ಜಿಲ್ಲಾ ಖಜಾಂಚಿ ಮಹದೇವ, ಸಹ ಕಾರ್ಯದರ್ಶಿ ಮಲ್ಲಣ್ಣ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಪಿ.ಶಾಂತರಾಜು ಹಾಗೂ ಈ ವಿಷಯಕ್ಕೆ ಸಂಬಂಧಿಸಿದ ಇತರೆ ಅನುಪಾಲನಾಧಿಕಾರಿಗಳು ಹಾಜರಿದ್ದರು.





## ಅರಮನೆಯಲ್ಲಿ ಮೋಹಿನಿ ಅಲಂಕಾರದೊಂದಿಗೆ ಕೃಷ್ಣನ ಮೂರ್ತಿ ಮೆರವಣಿಗೆ...



ಮೈಸೂರು ಅರಮನೆ ಆವರಣದಲ್ಲಿರುವ ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದ ವತಿಯಿಂದ ಕೃಷ್ಣಜನ್ಮಾಷ್ಟಮಿ ಪ್ರಯುಕ್ತ ಸೆ.16ರಿಂದ 23ರವರೆಗೆ ಶ್ರೀಕೃಷ್ಣನ ಉತ್ಸವ ಮೂರ್ತಿಗೆ ಅಲಂಕಾರ ಉತ್ಸವ ಹಮ್ಮಿಕೊಂಡಿದ್ದು, ಇದರ ಪ್ರಯುಕ್ತ ಭಾನುವಾರ ಉತ್ಸವ ಮೂರ್ತಿಯನ್ನು ಮೋಹಿನಿ ಅಲಂಕಾರದೊಂದಿಗೆ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಅರಮನೆ ಪೊಲೀಸ್ ಬ್ಯಾಂಡ್, ಅರಮನೆಯ ಪಟ್ಟದ ಆನೆಗಳಾದ ಪ್ರೀತಿ ಮತ್ತು ಚಂಚಲೆ ಸಾಗಿದವು. ದೇವಸ್ಥಾನದಿಂದ ಹೊರಟು, ಅರಮನೆ ಆವರಣದ ರಾಜವಂಶಸ್ಥರ ನಿವಾಸದ ಬಳಿ ತಲುಪಿ ಮೆರವಣಿಗೆ ಮುಕ್ತಾಯಗೊಂಡಿತು. ಇದೇ ವೇಳೆ ಪಟ್ಟದ ಆನೆಗಳು ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಿದವು. ರಾಜವಂಶಸ್ಥರೂ ಆದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಇವರ ತಾಯಿ ಪ್ರಮೋದಾದೇವಿ ಒಡೆಯರ್ ಉತ್ಸವ ಮೂರ್ತಿ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಇನ್ನಿತರ ಗಣ್ಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

## ನಕ್ಕರೆ ಅದೇ ಸ್ವರ್ಗ

ಹೆಂಡತಿ : ನಿಮ್ಮನ್ನು ನೋಡೋಕೆ ಡಾಕ್ಟರ್ ಬಂದಿದ್ದಾರೆ

ಗಂಡ : ನನಗೆ ಹುಷಾರಿಲ್ಲ... ಅವರನ್ನು ನಾಳೆ ಬರೋಕೆ ಹೇಳು

**ಮೈಸೂರು ಮಿತ್ರ**

**ಸೋಮವಾರ, 22 ಸೆಪ್ಟೆಂಬರ್ 2025**

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

## ಅಮೃತ ವಾಹಿನಿ......


ಮೊದಲೆಲ್ಲಾ ಮೋಸ ಮಾಡದೇ ಬದುಕಬೇಕು ಅಂತ ಇತ್ತು ಮನಸ್ಥಿತಿ. ಈಗ ಮೋಸ ಹೋಗದೇ ಬದುಕಬೇಕು ಎಂಬ ಪರಿಸ್ಥಿತಿ ಇದೆ...

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { 'ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರಂತೆ'

## ನಿಮ್ಮ ಪತ್ರಗಳು

### ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಅವರಿಗೂ ಭಾರತ ರತ್ನ ನೀಡುವಂತೆ ಶಿಫಾರಸ್ಸು ಮಾಡಿ

ಮಾನ್ಯರೆ,




ಮನುಜ ಮತ ವಿಶ್ವಪಥ ಎಂದು ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತ ರತ್ನ ನೀಡುವಂತೆ ರಾಜ್ಯ ಸರ್ಕಾರದ ಸಚಿವ ಸಂಪುಟದ ಸಭೆಯು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವುದು ಸ್ವಾಗತಾರ್ಹ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿ ರಾಜ್ಯಕ್ಕೆ ಕನ್ನಡದ ಕಂಪನ್ನು ಪಸರಿಸಿದ ನಾಡಿನ ಹೆಮ್ಮೆಯ ಶ್ರೀ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ಕುವೆಂಪು ಎಂಬ ಕಾವ್ಯನಾಮದಿಂದ ವಿಶ್ವ ಪ್ರಸಿದ್ಧಿಯನ್ನು ಹೊಂದಿದ್ದು, ಕನ್ನಡಿಗರಾದ ಮತ್ತು ಮೈಸೂರಿಗರಾದ ನಮಗೆ ಹೆಮ್ಮೆಯ ಸಂಗತಿ. ಕನ್ನಡ ಭಾಷೆಯ ಹಿರಿಮೆಯನ್ನು ಪಸರಿಸಿದ ಹಿರಿಯ ಚೇತನ ರಾಷ್ಟ್ರಕವಿ ಕುವೆಂಪು ಅವರಿಗೆ ಕೇಂದ್ರ ಸರ್ಕಾರವು ತಕ್ಷಣ ರಾಜ್ಯ ಸರ್ಕಾರದ ಶಿಫಾರಸ್ಸನ್ನು ಅಂಗೀಕರಿಸಿ ಭಾರತ ರತ್ನವನ್ನು ಘೋಷಿಸಬೇಕೆಂದು ಈ ಮೂಲಕ ಆಗ್ರಹಿಸುತ್ತೇನೆ.

ಇದೇ ರೀತಿ ಅಪ್ರತಿಮ ದೇಶಭಕ್ತ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರಿಗೂ ಭಾರತ ರತ್ನ ನೀಡುವಂತೆ ರಾಜ್ಯ ಸರ್ಕಾರವು ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಮೂಲಕ ಕರುನಾಡಿನ ಹೆಮ್ಮೆಯ ಅಪ್ರತಿಮ ದೇಶಭಕ್ತನಿಗೆ ಗೌರವ ನೀಡುವುದು ಸೂಕ್ತವೆಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಮ್ ಆದ್ಮಿ ಪಕ್ಷ ಆಗ್ರಹಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಕೂಡಲೇ ರಾಜ್ಯ ಸರ್ಕಾರದ ಶಿಫಾರಸ್ಸನ್ನು ಪರಿಗಣಿಸಿ ನಾಡಿನ ಹೆಮ್ಮೆಯ ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತರತ್ನವನ್ನು ಘೋಷಿಸಬೇಕೆಂದು ಕೋರುತ್ತೇನೆ. **–ಸೋಮಶೇಖರ್, ನಗರಾಧ್ಯಕ್ಷ, ಆಮ್ ಆದ್ಮಿ ಪಕ್ಷ, ಮೈಸೂರು.**

### ಹಳೇ ಬಡಾವಣೆಗಳಿಗೂ ದೀಪಾಲಂಕಾರ ಮಾಡಿ

ಮಾನ್ಯರೆ,



ವಿಶ್ವವಿಖ್ಯಾತ ಮೈಸೂರು ದಸರಾ ಬಹಳ ಇಂದಿನಿಂದ ಪ್ರಾರಂಭಗೊಂಡು ರಾಜ್ಯದ ಜನಮನದಲ್ಲಿದೆ. ಪ್ರತಿನಿತ್ಯ ನಡೆಯುವ ದಸರಾ ಕಾರ್ಯಕ್ರಮಗಳು ಶ್ಲಾಘನೀಯ ಹಾಗೂ ಪ್ರಮುಖ ರಸ್ತೆಗಳ ದೀಪಾಲಂಕಾರ, ಮುಖ್ಯ ರಸ್ತೆಗಳ ದೀಪಾಲಂಕಾರ ಎಲ್ಲವೂ ಸರಿ. ಯದುಕುಲ ವಂಶಸ್ಥರ ಮಹಾರಾಜರು ಎಂದರೆ ತಮ್ಮ ಮನಸ್ಸಿನಲ್ಲಿ ಪೂಜಿಸುವ ಜನರು ಇರುವುದುಂಟು. ಅರಮನೆ ಎಂದರೆ ನಗರದ ಕೆಲವು ಬಡಾವಣೆಗಳಿಗೆ ಇಂದಿಗೂ ಅವಿನಾಭಾವ ಸಂಬಂಧ ಮತ್ತು ಅರಮನೆಗೆ ಕಿಂಚಿತ್ತು ಧಕ್ಕೆ ಬಂದರು ಮರಗುವ ಮನಸ್ಸುಗಳು ಇವೆ ಹಾಗೂ ಪೂಜ್ಯ ಭಾವನೆಯಿಂದ ನೋಡುವವರು ಇದ್ದಾರೆ. ದಸರಾ ಹಬ್ಬ ಎಂದರೆ ಮನೆತನದ ದೊಡ್ಡ ಹಬ್ಬವಾಗಿ ಆಚರಿಸುವ ಈ ಬಡಾವಣೆಗಳ ರಸ್ತೆಗಳಿಗೆ ವಿದ್ಯುತ್ ದೀಪಾಲಂಕಾರ ಮಾಡದೆ ಇರುವುದು ಬೇಸರದ ಸಂಗತಿ. ಈ ಬಾರಿಯಾದರೂ ದಸರಾ ಹಬ್ಬಕ್ಕೆ ಮೈಸೂರಿನ ಹಳೆ ಬಡಾವಣೆಗಳಿಗೂ ದೀಪಾಲಂಕಾರ ಮಾಡಿ.

**–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು.**

### ಜಾತಿಗಣತಿ ಬದಲು ಬಡವರ, ನಿರ್ಗತಿಕರ ಗಣತಿ ನಡೆಯಲಿ

ಮಾನ್ಯರೆ,

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಲ ಸಚಿವರು ಬಹಳ ಧೈರ್ಯ ಮಾಡಿ ಸಮಾಜದಲ್ಲಿ ಗೊಂದಲ ಮೂಡಿಸಲಿರುವ ಈ ಜಾತಿ ಸಮೀಕ್ಷೆಗಳು ಬೇಡವೇ ಬೇಡ ಎಂದು ಮನವಿ ಮಾಡಿದ್ದಾರೆ. ಭೇಷ್ ಸಚಿವರೇ. ಸಮಾಜದಲ್ಲಿ ಬಲಾಬಲ ಪ್ರದರ್ಶಿಸುವ, ನಾವು ಹೆಚ್ಚು ಇವರು ಕಡಿಮೆ, ಅಲ್ಲಿ ಕೆಳ ಜಾತಿಯವರು ಹೆಚ್ಚಿರುವುದರಿಂದ ಪ್ರಾಬಲ್ಯವಿದೆ, ಇಲ್ಲಿ ಮೇಲು ಜಾತಿಯವರು ಕಡಿಮೆ ಇದ್ದು ಏನೂ ಬಾಲ ಬಿಚ್ಚಲಾಗುವುದಿಲ್ಲ, ನಮ್ಮ ಜಾತಿಯವರು ಇಷ್ಟಿದ್ದಾರೆ, ಈ ಬಾರಿ ಚುನಾವಣೆಯಲ್ಲಿ ನಮ್ಮವರೇ ಗೆಲ್ಲುವುದು ಎಂದು ಸದ್ದು ಮಾಡುವ ಜಾತಿವಾದಿಗಳಿಗೆ ನಿಮ್ಮ ಈ ಮನವಿ ತಿರುಗೇಟು ಕೊಟ್ಟಂತೆ ಇದೆ. ದೇಶವನ್ನಾಳುವ ಎಲ್ಲಾ ನಾಯಕ ಮಹಾ ಮಂತ್ರಿಗಳಿಗೆ ಯಾವಾಗ ಅರ್ಥವಾಗುವುದೋ ನಮ್ಮ ಕುವೆಂಪು ಅವರ, ನೂರು ಮತದ ಹೊಟ್ಟ ತೂರಿ.. ಎಲ್ಲ ತತ್ವದೆಲ್ಲೆ ಮೀರಿ.. ನಿರ್ದಿಗಂತವಾಗಿ ಏರಿ.. ಓ ನನ್ನ ಚೇತನ, ಆಗು ನೀ ಅನಿಕೇತನ ಎಂಬ ಅದ್ಭುತ ಸಾಲುಗಳು. ಮನುಜ ಮತ–ವಿಶ್ವ ಪಥ ಒಂದೇ ಎಂದು ಸಾರಿದ ಈ ಮಹಾ ಚೇತನವನ್ನು ಗೌರವಿಸಲು ಈ ಜಾತಿ ಸಮೀಕ್ಷೆಯನ್ನು ಕೈಬಿಡಿ. ಅದರ ಬದಲು ಕಡುಬಡವರ ಸಮೀಕ್ಷೆಗಳು, ನಿರ್ಗತಿಕರ ಸಮೀಕ್ಷೆಗಳು, ರೈತರ ಆರ್ಥಿಕ ಸ್ಥಿತಿಗತಿ ಸಮೀಕ್ಷೆಗಳು, ಅನ್ಯ ಭಾಷೆ ಬಿಟ್ಟು ಬರೀ ಕನ್ನಡ ಮಾತನಾಡುವ ಜನರ ಸಮೀಕ್ಷೆಗಳು ನಡೆಯಬೇಕು ಅಲ್ಲವೇ? ಇಂದು ಒಂದು ಕೋಟಿ ಜನಸಂಖ್ಯೆ ಇರುವ ಬೆಂಗಳೂರಿನಲ್ಲಿ ಬರೀ ಕನ್ನಡ ಮಾತನಾಡುವ ಜನರು ಎಷ್ಟಿದ್ದಾರೆಂದು ಗೊತ್ತೆ? ಅಲ್ಲಿ ಕನ್ನಡಿಗರೇ ಕನ್ನಡ ಮಾತನಾಡುತ್ತಿಲ್ಲ. ಅನ್ಯ ಭಾಷಿಕರ ಜೊತೆ ಅವರದೇ ಭಾಷೆಯಲ್ಲಿ ಸಂಭಾಷಿಸುತ್ತಾರೆ. ಹೀಗೆ ಆದರೆ ಮುಂದೆ ಬೆಂಗಳೂರು 'ಭಿನ್ನ ಭಾಷಿಕರೂರು' ಆಗಲಿದೆ.

**–ಸೋಮಶೇಖರ್, ಇಲವಾಲ.**

### ಕಿರುಚಿತ್ರಗಳ ಪ್ರೋತ್ಸಾಹಿಸಲು ಮನವಿ

ಮಾನ್ಯರೆ,

2025ರ ದಸರಾ ಚಲನಚಿತ್ರೋತ್ಸವ ಪ್ರಯುಕ್ತ ವಿಶೇಷವಾಗಿ 10 ಕಿರು ಚಿತ್ರಗಳನ್ನು ಆಯ್ಕೆ ಮಾಡಲಾಗಿದೆ. ಪ್ರತಿಯೊಂದು ಚಿತ್ರವು ಒಂದೊಂದು ಬಗೆಯ ವಿಷಯವನ್ನು ಪ್ರೇಕ್ಷಕರ ಮುಂದಿಟ್ಟು ಚಿತ್ರ ನಿರ್ಮಿಸಿದ್ದಾರೆ. ಮಧ್ಯಾಹ್ನ 03:45ರ ಸಮಯದಲ್ಲಿ ಮೈಸೂರಿನ ಮಾಲ್ ಆಫ್ ಮೈಸೂರಿನ ಸ್ಕ್ರೀನ್ 04ರಲ್ಲಿ ತೆರೆಕಂಡ 'ಹಬ್ಬದ ಹಸಿವು' ಕಿರುಚಿತ್ರವು 21ನೇ ಶತಮಾನದಲ್ಲಿಯೂ ಹಲವಾರು ಗ್ರಾಮಗಳಲ್ಲಿ ಇಂದಿಗೂ ಜಾತಿ, ಧರ್ಮ, ಭಾಷೆಗಳನ್ನಾಧರಿತ, ಭೇದ ಭಾವ ಮಾಡುತ್ತಾ ವಿವಿಧ ರೀತಿಯಲ್ಲಿ ಶೋಷಣೆ ಮಾಡುತ್ತಿರುತ್ತಾರೆ, ಇಂತಹ ಮನಸ್ಥಿತಿಗಳನ್ನು ಹೋಗಲಾಡಿಸಲು 'ಹಬ್ಬದ ಹಸಿವು'ನಂತಹ ಕಿರುಚಿತ್ರವು ಜಾತಿಯ ಹೆಸರಿನಲ್ಲಿ ಶೋಷಣೆ ಮಾಡುವುದನ್ನು ನಿಲ್ಲಿಸಲು ಸಣ್ಣದೊಂದು ಪ್ರಯತ್ನ ಮಾಡಲಾಗಿದೆ. ಸಾರ್ವಜನಿಕರಿಗೆ 'ಉತ್ತಮ ಸಂದೇಶ' ನೀಡುವ ಪ್ರಯತ್ನ ಮಾಡಿರುವ ಈ ಕಿರುಚಿತ್ರ ತಂಡದ ನಿರ್ದೇಶಕರು, ಕಲಾವಿದರಿಗೂ ಸೇರಿ ತಂಡದ ಎಲ್ಲರಿಗೂ ಅಭಿನಂದನೆಗಳು. ಈ ತರ ಕಿರುಚಿತ್ರಗಳನ್ನು ರಾಜ್ಯಾದ್ಯಂತ ಎಲ್ಲಾ ಚಿತ್ರಮಂದಿರಗಳಲ್ಲಿ 10 ನಿಮಿಷ ಪ್ರದರ್ಶಿಸುವ ಮೂಲಕ ಯುವ ಕಲಾವಿದರನ್ನು ಪ್ರೋತ್ಸಾಹಿಸಬೇಕಾಗಿ ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರು, ಸದಸ್ಯರಲ್ಲಿ ಈ ಮೂಲಕ ಮನವಿ. **–ನಾಗೇಶ್, ಮಾನಸಗಂಗೋತ್ರಿ, ಮೈಸೂರು.**



ಜಿ. ಎಲ್. ತ್ರಿಪುರಾಂತಕ

ಮೊ: 96866–77284

ಅರಿವು

# ಬೈದವರ ಬಂಧುಗಳೆಂದು ಭಾವಿಸೋಣ...!

ಹಿತೈಷಿಗಳ ಹಿತನುಡಿಯಿಂದ ಸಾಧಿಸಿದವರಿಗಿಂತ ಹಿತಶತ್ರುಗಳ ಕಿಡಿನುಡಿಗೆ ಸಾಧಿಸಿದವರೆ ಹೆಚ್ಚು. ನಮ್ಮ ಬಂಧುಗಳಿಗಿಂತ ನಮ್ಮನ್ನು ಕಂಡರೆ ಆಗದವರೇ ಸಾಧನೆಗೆ ಕಿಚ್ಚು ಹಚ್ಚುತ್ತಾರೆ. ಅಸಾಧ್ಯವಾದುದನ್ನು ಸಾಧಿಸಿ ತೋರಲು, ಸತತ ಪ್ರಯತ್ನ ಮಾಡಲು, ಆತ್ಮಸ್ಥೈರ್ಯ ಮೂಡಲು, ನಿದ್ರಿಸದೆ ಕನಸನ್ನು ನನಸು ಮಾಡಿಕೊಳ್ಳಲು ಶತ್ರುಗಳ ಕೊಂಕು ನುಡಿಯೊಂದು ಕಾರಣವಾಗಬಹುದು. ಆತ್ಮಬಂಧುಗಳು ಎಷ್ಟೇ ಸಲಹೆ, ಸೂಚನೆ, ಪ್ರೋತ್ಸಾಹ ನೀಡಿದರೂ ಸಾಧಿಸಬೇಕೆಂಬ ಹಠ ಹುಟ್ಟುವುದು ಹೊಟ್ಟೆಕಿಚ್ಚಿನಿಂದಲೋ, ಸೇಡಿನಿಂದಲೋ ಸಿಡಿಸಿದ ಶತ್ರುಗಳ ನುಡಿಯಿಂದ. ಅವರ ಹೀಯಾಳಿಸುವ ಮಾತುಗಳು, ಅಪನಂಬಿಕೆಗಳು ಸಾಧಕರಿಗೆ ಸಾಧನೆಗೆ ಮೆಟ್ಟಿಲುಗಳೇ ಆಗುತ್ತವೆ. ಮೂರನೇ ವ್ಯಕ್ತಿಯೊಂದಿಗೆ ಅವರು ಹೇಳುವ ಮಾತುಗಳು ಎಂತವರನ್ನು ಪುಟಿದೇಳುವಂತೆ ಮಾಡುತ್ತದೆ.

ಶರಣರಾದ ಬಸವಣ್ಣನವರು
ಹೊಯಿದವರೆನ್ನ ಹೊರೆದವರೆಂಬೆ,
ಬಯಿದವರೆನ್ನ ಬಂಧುಗಳೆಂಬೆ,
ನಿಂದಿಸಿದವರೆನ್ನ ತಂದೆತಾಯಿಗಳೆಂಬೆ,
ಆಳಿಗೊಂಡವರೆನ್ನ ಆಳ್ದವರೆಂಬೆ,
ಜರಿದವರೆನ್ನ ಜನ್ಮಬಂಧುಗಳೆಂಬೆ,
ಹೊಗಳಿದವರೆನ್ನ ಹೊನ್ನಶೂಲದಲ್ಲಿಕ್ಕಿದರೆಂಬೆ
ಕೂಡಲ ಸಂಗಮದೇವಾ?

ಎಂದು ವಚನವೊಂದರಲ್ಲಿ ಹೇಳಿರುವುದು ಅಕ್ಷರಶಃ ಸತ್ಯವಾಗಿದೆ. ಅವರ ಈ ಒಂದು ವಚನ ಒಂದು ದೊಡ್ಡ ಜೀವನಪಾಠವಾಗಿದೆ. ಜರಿದವರನ್ನು ತನ್ನ ಜನ್ಮಬಂಧುಗಳೆಂದೂ, ಹೊಗಳಿದವರು ಚಿನ್ನದ ಶೂಲಕ್ಕೆ ಏರಿಸಿದವರು ಎಂದು ಭಾವಿಸುತ್ತೇನೆ ಎಂದರೆ ಜನರ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಅರಿತಿದ್ದಾರೆ ಎಂದೇ ಅರ್ಥ.

ಅನೇಕರಿಗೆ ಹೊಗಳಿಕೆಯು ಬಹಳ ಇಷ್ಟವಾಗುತ್ತದೆ. ಸಾರ್ವಜನಿಕವಾಗಿ ಜನರೆದುರು ಇಲ್ಲದ ಸಂಗತಿಗಳನ್ನು ಸೇರಿ ಹೊಗಳಿದರೆ, ಭಾಷಣಗಳಲ್ಲಿ, ಪುಸ್ತಕಗಳಲ್ಲಿ ಅವರನ್ನು ಅನವಶ್ಯಕವಾಗಿ ಹೊಗಳಿದರೆ, ಬಹುಪರಾಕ್ ಹೇಳಿದವರಿಗೆ ಏನು ಬಹುಮಾನ ಬೇಕಾದರೂ ಕೊಡುವ ಮನಸ್ಥಿತಿ ಉಳ್ಳವರಾಗಿರುತ್ತಾರೆ. ರಾಜಮಹಾರಾಜರು ಹೊಗಳುಭಟ್ಟರನ್ನು ನೇಮಿಸಿಕೊಳ್ಳುತ್ತಿದ್ದಾರೆ ಎಂದರೆ ಮುಖಸ್ತುತಿ ಎಂಬುದಕ್ಕೆ ಎಷ್ಟು ಮಾನ್ಯತೆ ಇದೆ ಎಂದು ತಿಳಿಯಬಹುದು. ವಾಸ್ತವವನ್ನು ನೇರವಾಗಿ ಹೇಳಿದರೆ, ಅವರು ಎಷ್ಟೇ ಹತ್ತಿರದವರಾದರೂ ಅವರ ಮಾತಿಗೆ ಮನ್ನಣೆ ನೀಡದೆ ಹೊಗಳುಭಟ್ಟರ ಭ್ರಮಾಲೋಕದಲ್ಲಿಯೇ ತೇಲುವ ಮಂದಿ ಅನೇಕರಿದ್ದಾರೆ.

ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳ ಹಿಂಬಾಲಕರು ಜೈಕಾರ ಹಾಕಿ, ಅತಿಶಯೋಕ್ತಿಯಾದ ಲೆಕ್ಕಾಚಾರ ನೀಡಿ ಅಭ್ಯರ್ಥಿಯಿಂದ ನೀರಿನಂತೆ ಹಣ ಪೀಕಿಸುತ್ತಾರೆ. ಚುನಾವಣೆಯಲ್ಲಿ ಗೆದ್ದರೆ ಅವರ ಜೊತೆ ಇರುತ್ತಾರೆ. ಅವರು ಸೋತರು ಎಂದಾದರೆ ಕೆಲವೇ ನಿಮಿಷಗಳಲ್ಲಿ ಅವರಿಂದ ಅಂತರ ಕಾಪಾಡಿಕೊಳ್ಳುತ್ತಾರೆ. ಹಾಗಾಗಿ ನಮಗೆ ವಾಸ್ತವವನ್ನು ತಿಳಿಸಿದವರು ನಮ್ಮ ಬಂಧುಗಳೇ ಆಗಲಿ ನಮ್ಮ ಶತ್ರುಗಳೇ ಆಗಲಿ ಅವರ ಮಾತಿಗೆ ಮನ್ನಣೆ ಕೊಡಬೇಕು. ನಮ್ಮ ಒಳಿತಿಗಾಗಿ ಒಂದು ಎಚ್ಚರಿಕೆ ನೀಡುತ್ತಿದ್ದಾರೆ ಎಂದು ಎಚ್ಚೆತ್ತುಕೊಳ್ಳಬೇಕು. ಆಕಾಶದಲ್ಲಿ ಭ್ರಮೆಯಿಂದ ತೇಲುತ್ತಾ ಇದ್ದರೆ ಪಾತಾಳ ಮುಟ್ಟಲು ಬಹಳ ಕಾಲ ಬೇಕಾಗುವುದಿಲ್ಲ.

ಅನೇಕ ಸಾಧಕರ ಜೀವನ ಚರಿತ್ರೆಯನ್ನು ತಿಳಿದರೆ ಅವರಿಗೆ ಬಾಲ್ಯದಲ್ಲಿ ಬಡತನ ಅಥವಾ ಇನ್ನಿತರ ಕಾರಣಕ್ಕೆ ಆದ ಅವಮಾನಗಳೇ ಅವರಿಗೆ ಏನಾದರೂ ಸಾಧಿಸಿ ತೋರಬೇಕು ಎಂಬ ಮನೋಸ್ಥೈರ್ಯವನ್ನು ಉಂಟುಮಾಡಿರುತ್ತದೆ. ಮನುಷ್ಯನಿಗೆ ಅಭಿಮಾನದಿಂದ ಆಗುವ ಲಾಭಕ್ಕಿಂತ ಅವಮಾನದಿಂದ ಆಗುವ ಲಾಭವೇ ಹೆಚ್ಚು. ಅವಮಾನ ಆದಾಗ ಎರಡು ರೀತಿ ಅದನ್ನು ಸ್ವೀಕರಿಸಬಹುದು. ಸ್ವಾಭಿಮಾನಿಗಳು ಅದನ್ನು ಧನಾತ್ಮಕವಾಗಿ ತೆಗೆದುಕೊಂಡು, ತನ್ನನ್ನು ತೆಗಳಿ ತಲೆತಗ್ಗಿಸಿ ನಡೆಯುವಂತೆ ಮಾಡಿದವರ ಮುಂದೆ ತಲೆ ಎತ್ತಿ ನಡೆಯಬೇಕು ಎಂದು ಭಾವಿಸಿ, ಜೀವನದಲ್ಲಿ ಒಂದು ಗುರಿಯನ್ನು ಇರಿಸಿಕೊಂಡು, ಅದನ್ನು ಸಾಧಿಸುವ ಛಲವನ್ನು ಸ್ಥಾಪಿಸಿಕೊಳ್ಳುತ್ತಾರೆ. ಅವರಿಗೆ ಅವಮಾನದ ನುಡಿಗಳು ಮತ್ತೆ ಮತ್ತೆ ಕೆರಳುವಂತೆ ಮಾಡಿ ಅವರು ಸಾಧನೆ ಮಾಡುವವರೆವಿಗೆ ನೆಮ್ಮದಿಯಿಂದ ನಿದ್ರಿಸಲು ಬಿಡುವುದಿಲ್ಲ. ಕೆಲವರು ಅವಮಾನದ ನುಡಿಗಳಿಗೆ ಕುಗ್ಗಿ ಹೋಗುತ್ತಾರೆ. ಅವರ ಮನೋಸ್ಥೈರ್ಯ ಕಡಿಮೆಯಾಗಿ ಮಾಡುವ ಕೆಲಸವನ್ನು ಸರಿಯಾಗಿ ಮಾಡಲು ಆಗುವುದಿಲ್ಲ. ಹಾಗೆಯೇ ಯಾರೋ ಹಿತೈಷಿಗಳು ಮನನೋಯಿಸಬಾರದು ಎಂದು ಸಣ್ಣ ಸಾಧನೆಗೆ ಬೆನ್ನುತಟ್ಟಿ ಅಭಿಮಾನದ ನುಡಿಗಳನ್ನಾಡಿದರೆ, ಅದರಿಂದ ಮೈಮರೆತು ದೊಡ್ಡ ಸಾಧನೆಯ ಕನಸನ್ನೇ ಮರೆತುಬಿಡಬಹುದು. ಹಾಗಾಗಿ ಅವಮಾನವನ್ನು ಋಣಾತ್ಮಕವಾಗಿ ತೆಗೆದುಕೊಂಡು ಕುಗ್ಗಿ ಹೋಗದೆ, ಧನಾತ್ಮವಾಗಿ ತೆಗೆದುಕೊಂಡು ಜೀವನದಲ್ಲಿ ಮೇಲೆ ಬರುವುದು ಜಾಣತನ.



> “ತಮ್ಮ ಮೇಲೆ ತಮಗೆ ನಂಬಿಕೆ ಇರಬೇಕು. ತಮಗಿರುವ ದೌರ್ಬಲ್ಯಗಳ ಅರಿವಿದ್ದಂತೆ ಸಾಮರ್ಥ್ಯಗಳ ಅರಿವು ಸಹ ಇರಬೇಕು. ಯಾರೋ ಏನೋ ಅಂದರು ಎಂದ ಕಾರಣಕ್ಕೆ ಸಾಧನೆಯ ಪಥದಿಂದ ಹಿಂದೆ ಸರಿಯಬಾರದು. ಕಂಫರ್ಟ್ ಜೋನ್‌ನಿಂದ ರಿಸ್ಕ್ ಜೋನ್‌ಗೆ ಬಂದರೆ ಮಾತ್ರ ಸಾಧನೆ ಸಾಧ್ಯ. ಹಗಲುಗನಸು ಕಾಣುವ ಬದಲು ಹಗಲು ರಾತ್ರಿ ಎನ್ನದೆ ಬದುಕಿನ ದೊಡ್ಡ ಕನಸನ್ನು ನನಸು ಮಾಡಿಕೊಳ್ಳಲು ಶ್ರಮಿಸಬೇಕು. ತಮ್ಮ ಹೆತ್ತವರ ಕೊಂಕು ನುಡಿಗಳನ್ನು ಸಹಿಸಿಕೊಳ್ಳಲಾಗದೆ ಮನೆ ಬಿಟ್ಟು ಹೋಗಿ, ಪಡಬಾರದ ಕಷ್ಟ ಅನುಭವಿಸಿ ತಮ್ಮ ಕನಸನ್ನು ನನಸು ಮಾಡಿಕೊಂಡ ಅನೇಕ ಸಾಧಕರ ಉದಾಹರಣೆಗಳು ಇವೆ. ಯಾವ ಕೆಲಸಕ್ಕೂ ಬಾರದೇ ಇರುವವನು ಎಂದು ಜರಿದ ಊರಿನವರೇ ಮೆರವಣಿಗೆ ಮಾಡಿದ ಉದಾಹರಣೆಗಳು ಇವೆ.

ಅವಮಾನದಷ್ಟೇ ಅನುಮಾನವೂ ಮನುಷ್ಯನ ಬದುಕಿನಲ್ಲಿ ಚೈತನ್ಯವನ್ನು ನೀಡಬಲ್ಲದು. ಎಷ್ಟೋ ಸಾಧಕರಿಗೆ ತಮ್ಮ ಮೇಲೆ ನಂಬಿಕೆ ಬಲವಾಗಿ ಇರುತ್ತದೆ. ಆದರೆ ಅವರು ಸಾಧನೆಯ ಹಾದಿಯಲ್ಲಿದ್ದಾಗ ಬಹಳ ಕಾಲದಿಂದ ಬಲ್ಲವರು ಅವರನ್ನು ಕಂಡು ಅನುಮಾನ ವ್ಯಕ್ತಪಡಿಸುತ್ತಾರೆ. ಆಗ ಸ್ವಾಭಿಮಾನಕ್ಕೆ ಪೆಟ್ಟು ಬೀಳುತ್ತದೆ. ಆ ಪೆಟ್ಟು ಅವಿಶ್ರಾಂತವಾಗಿ ಪರಿಶ್ರಮ ಹಾಕುವಂತೆ ಮಾಡುತ್ತದೆ. ಅದರಿಂದ ಸಾಧನೆ ಇನ್ನೂ ಹತ್ತಿರವಾಗುತ್ತದೆ, ಹಾಗೆಯೇ ಬೇಗ ಆಗುತ್ತದೆ.

ಸಾಧನೆ ಮಾಡಿದ ಮೇಲೆ ನಮಗೆ ಬೆನ್ನುತಟ್ಟಿ ಪ್ರೋತ್ಸಾಹಿಸದವರಿಗೆ ಕೃತಜ್ಞತೆ ಸಲ್ಲಿಸುವಷ್ಟೆ ನಮ್ಮ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಅವಮಾನಿಸಿದ ಜನರಿಗೂ ಕೃತಜ್ಞತೆ ಸಲ್ಲಿಸಬೇಕು. ಏಕೆಂದರೆ ನಮಗೆ ಪ್ರೋತ್ಸಾಹಿಸಿದವರ ಮಾತಿನಷ್ಟೇ ಅವಮಾನಿಸಿದವರ ಮಾತುಗಳು ಸಹ ಪ್ರೇರಣೆ ನೀಡಿರುತ್ತವೆ. ಅವರ ಮಾತುಗಳು ಒಂದು ಪ್ರೇರಕ ಶಕ್ತಿಯಾಗಿ, ಮಾನಸಿಕ ದೃಢತೆ ಉಂಟಾಗಿ ಸಾಧನೆ ಸುಲಭವಾಗುತ್ತದೆ.

ಅವಮಾನ ಎದುರಿಸಿದವರಿಗೆ ಮುಂದೆ ಎದುರಾಗುವ ಕಷ್ಟಗಳು ಕಷ್ಟಗಳೆನಿಸುವುದಿಲ್ಲ. ಅವರಿಗೆ ಅವರ ಧ್ಯೇಯ ಸ್ಪಷ್ಟವಾಗಿರುತ್ತದೆ. ಅದನ್ನು ಸಾಧಿಸುವ ಹಾದಿಯಲ್ಲಿ ಎಂತಹುದೇ ಕಷ್ಟ ಬಂದರೂ ಸಹಿಸಿಕೊಳ್ಳುವ ಶಕ್ತಿ ಇರುತ್ತದೆ. ಎಷ್ಟೋ ಜನ ಸಿರಿವಂತರ ಮಕ್ಕಳು ಸಾಧಿಸಲು ಸಾಧ್ಯವಾಗದೇ ಇದ್ದುದ್ದನ್ನು ಬಡವರ ಮನೆಯ ಮಕ್ಕಳು ಸಾಧಿಸಿರುತ್ತಾರೆ. ಅವರಿಗೆ ಸೌಲಭ್ಯ ಹಾಗೂ ಸವಲತ್ತುಗಳು ಕಡಿಮೆ ಇದ್ದರೂ ಆತ್ಮವಿಶ್ವಾಸ ಹಾಗೂ ಸಾಧಿಸಬೇಕೆಂಬ ಛಲ ಹೆಚ್ಚಾಗಿರುತ್ತದೆ.

ನಿಷಾದ ಕುಲದ ಏಕಲವ್ಯನು ಬಿಲ್ವಿದ್ಯೆಯನ್ನು ಸಾಧಿಸಿಕೊಳ್ಳುವ ಹಂಬಲದಿಂದ ದ್ರೋಣಾಚಾರ್ಯರ ಬಳಿಗೆ ಬರುತ್ತಾನೆ. ಆದರೆ ತಮ್ಮ ಮೆಚ್ಚಿನ ಶಿಷ್ಯ ಅರ್ಜುನನನ್ನು ಜಗತ್ತಿನ ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡಲು ಪಣ ತೊಟ್ಟಿದ್ದ ದ್ರೋಣಾಚಾರ್ಯರು, ಕ್ಷತ್ರಿಯನಲ್ಲದವನಿಗೆ ಬಿಲ್ವಿದ್ಯೆ ಹೇಳಿಕೊಡಲು ಇಚ್ಚಿಸದೆ, ಏಕಲವ್ಯನನ್ನು ಶಿಷ್ಯನಾಗಿ ಸ್ವೀಕರಿಸಲು ನಿರಾಕರಿಸುತ್ತಾರೆ. ಆದರೆ ನಿರಾಶನಾಗದ ಏಕಲವ್ಯನು ದೂರದಿಂದ ನಿಂತು ದ್ರೋಣಾಚಾರ್ಯರು ಪಾಂಡವರು ಹಾಗೂ ಕೌರವರಿಗೆ ಹೇಳಿಕೊಡುತ್ತಿದ್ದ ವಿದ್ಯೆಯನ್ನು ಮನನ ಮಾಡಿಕೊಂಡು ಕಾಡಿಗೆ ಮರಳಿ ದ್ರೋಣಾಚಾರ್ಯರ ಮಣ್ಣಿನ ಮೂರ್ತಿಯನ್ನು ಮಾಡಿ ಅವರನ್ನೇ ತನ್ನ ಮಾನಸ ಗುರುವೆಂದು ನಂಬಿ ಬಿಲ್ವಿದ್ಯೆಯನ್ನು ಸ್ವತಃ ಸಾಧಿಸಿಕೊಳ್ಳುತ್ತಾನೆ.

ಮುಂದೊಂದು ದಿನ ಅವನ ಶಬ್ದವೇದಿ ವಿದ್ಯೆಯಿಂದ ಬೊಗಳುತ್ತಿದ್ದ ನಾಯಿಯ ಬಾಯಿಗೆ ಬಾಣ ಬಿಟ್ಟದ್ದನ್ನು ಕಂಡ ದ್ರೋಣಾಚಾರ್ಯರು, ಅವನು ಬಿಲ್ವಿದ್ಯೆ ಮುಂದುವರಿಸಬಾರದು ಎಂದು ಸ್ವಾರ್ಥದಿಂದ ಅವನಿಂದ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ಪಡೆಯುತ್ತಾರೆ. ಅಷ್ಟಾದರೂ ಏಕಲವ್ಯನು ಮುಂದೆಯೂ ಬಿಲ್ವಿದ್ಯೆಯಲ್ಲಿ ಸಾಧನೆ ಮಾಡಿ ಮಹಾಭಾರತ ಯುದ್ಧದಲ್ಲಿ ಕೌರವರ ಪರ ಹೋರಾಡುತ್ತಾನೆ.

ಇದರಿಂದ ತಿಳಿಯಬಹುದಾದ ನೀತಿ ಏನೆಂದರೆ ನಿರಾಕರಣೆಯು ಸಹ ದೊಡ್ಡ ಮಟ್ಟದ ಸಾಧನೆಗೆ ಏಣಿಯಾಗುತ್ತದೆ. ಅಡಚಣೆಗಳು ಅವಕಾಶಗಳಾಗಿ ಕಾಣಲು ಪ್ರಾರಂಭವಾಗುತ್ತದೆ. ಏಕಲವ್ಯನು ದ್ರೋಣಾಚಾರ್ಯರ ನಿರಾಕರಣೆಗೆ ನಿರಾಸೆ ಹೊಂದಿ ಬಿಲ್ವಿದ್ಯೆಯ ಅಭ್ಯಾಸವನ್ನು ಬಿಟ್ಟಿದ್ದರೆ ಅವನು ದೊಡ್ಡ ಸಾಧಕನಾಗುತ್ತಿರಲಿಲ್ಲ. ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ. ಸಾಧಿಸಬೇಕೆಂದವನಿಗೆ ದಾರಿಗಳು ಗೋಚರವಾಗುತ್ತವೆ. ಅದರಲ್ಲೂ ಅವಮಾನ ಅನುಭವಿಸಿದವರಿಗೆ ಹಠ ಹೆಚ್ಚಾಗಿರುತ್ತದೆ. ಇನ್ಫೋಸಿಸ್‌ನ ನಾರಾಯಣಮೂರ್ತಿಯವರನ್ನು ವಿಪ್ರೋ ಕಂಪನಿಯು ಕೆಲಸಕ್ಕೆ ತೆಗೆದುಕೊಳ್ಳಲು ನಿರಾಕರಿಸುತ್ತದೆ. ಆದರೆ ನಂತರ ಅವರೇ ಒಂದು ದೊಡ್ಡ ಸಾಫ್ಟ್‌ವೇರ್ ಕಂಪನಿ ಕಟ್ಟಿದ್ದು ಇತಿಹಾಸ.

ತಮ್ಮ ಮೇಲೆ ತಮಗೆ ನಂಬಿಕೆ ಇರಬೇಕು. ತಮಗಿರುವ ದೌರ್ಬಲ್ಯಗಳ ಅರಿವಿದ್ದಂತೆ ಸಾಮರ್ಥ್ಯಗಳ ಅರಿವು ಸಹ ಇರಬೇಕು. ಯಾರೋ ಏನೋ ಅಂದರು ಎಂದ ಕಾರಣಕ್ಕೆ ಸಾಧನೆಯ ಪಥದಿಂದ ಹಿಂದೆ ಸರಿಯಬಾರದು. ಕಂಫರ್ಟ್ ಜೋನ್‌ನಿಂದ ರಿಸ್ಕ್ ಜೋನ್‌ಗೆ ಬಂದರೆ ಮಾತ್ರ ಸಾಧನೆ ಸಾಧ್ಯ. ಹಗಲುಗನಸು ಕಾಣುವ ಬದಲು ಹಗಲು ರಾತ್ರಿ ಎನ್ನದೆ ಬದುಕಿನ ದೊಡ್ಡ ಕನಸನ್ನು ನನಸು ಮಾಡಿಕೊಳ್ಳಲು ಶ್ರಮಿಸಬೇಕು. ತಮ್ಮ ಹೆತ್ತವರ ಕೊಂಕು ನುಡಿಗಳನ್ನು ಸಹಿಸಿಕೊಳ್ಳಲಾಗದೆ ಮನೆ ಬಿಟ್ಟು ಹೋಗಿ, ಪಡಬಾರದ ಕಷ್ಟ ಅನುಭವಿಸಿ ತಮ್ಮ ಕನಸನ್ನು ನನಸು ಮಾಡಿಕೊಂಡ ಅನೇಕ ಸಾಧಕರ ಉದಾಹರಣೆಗಳು ಇವೆ. ಯಾವ ಕೆಲಸಕ್ಕೂ ಬಾರದೇ ಇರುವವನು ಎಂದು ಜರಿದ ಊರಿನವರೇ ಮೆರವಣಿಗೆ ಮಾಡಿದ ಉದಾಹರಣೆಗಳು ಇವೆ. ಅದಕ್ಕೆ ಬೇಕಿರುವುದು ಸತತ ಪ್ರಯತ್ನ, ಎಷ್ಟೇ ತೊಡಕಾದರೂ ಗುರಿಯಿಂದ ವಿಚಲಿತರಾಗದೆ ಮುಂದುವರಿಯುವುದು. ಅವಮಾನವಾದಾಗ ಅವರಿಗೆ ಮಾತಿನಿಂದ ಪ್ರತಿಕ್ರಿಯೆ ನೀಡುವ ಬದಲು ಕೃತಿಯಿಂದ ಉತ್ತರ ಕೊಡಬೇಕು. ಸಾಧನೆ ಮಾತನಾಡಬೇಕೇ ಹೊರತು ಮಾತನಾಡುವುದೇ ಸಾಧನೆ ಆಗಬಾರದು.

ಕೆಲವರಿಗೆ ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಲ್ಲದ ಕಾರಣಕ್ಕೆ ಜಗತ್ತಿನ ಜನಕ್ಕೆಲ್ಲಾ ಹೀಗೆಯೇ ಎಂದು ಭಾವಿಸಿರುತ್ತಾರೆ. ಪ್ರತಿಯೊಬ್ಬ ಮನುಷ್ಯನಿಗೂ ಅವನದೇ ಆದ ಧ್ಯೇಯ, ಗುರಿ, ಕನಸು ಇರುತ್ತದೆ. ಯಾರೋ ಅಸಮರ್ಥರು ಏನೋ ಅಂದರು ಎಂದ ಕಾರಣಕ್ಕೆ ಕನಸುಗಳಿಗೆ ಎಳ್ಳು ನೀರು ಬಿಡಬಾರದು. ಬದಲಿಗೆ ಗೊಬ್ಬರ ನೀರು ಹಾಕಿ ಬೆಳೆಸಬೇಕು. ಇಂದು ಅವಮಾನಿಸಿದವರೇ ನಾಳೆ ಸನ್ಮಾನಿಸುತ್ತಾರೆ ಎಂಬುದು ನೆನಪಿರಲಿ.

**ಹೂರಣ: ಅಭಿಮಾನ ತೋರಿದ್ದರಿಂದ ಸಾಧಿಸಿದ್ದಕ್ಕಿಂತ ಅವಮಾನ ಆದ ಕಾರಣಕ್ಕೆ ಸಾಧನೆ ಆಗಿದ್ದೇ ಹೆಚ್ಚು.**

## ಮೈಸೂರು ರಿಂಗ್ ರಸ್ತೆ ಸ್ವಚ್ಛತಾ ಕಾರ್ಯ ಬಿರುಸು

### ನಗರಪಾಲಿಕೆ ಆಯುಕ್ತರಿಂದ ಪರಿಶೀಲನೆ



ದಸರಾ ಹಿನ್ನೆಲೆ ರಿಂಗ್ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ನಡೆಯುತ್ತಿರುವುದು.

ಮೈಸೂರು, ಸೆ.21(ಎಂಕೆ)– ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಮೈಸೂರು ಸಜ್ಜುಗೊಂಡಿದ್ದು, ನಗರವನ್ನು ಸುತ್ತುವರೆದಿರುವ ರಿಂಗ್ ರಸ್ತೆಯಲ್ಲಿಯೂ ಸ್ವಚ್ಛತಾ ಕಾರ್ಯ ಭರದಿಂದ ಸಾಗಿದೆ.

ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಿಂದ ಕೆಆರ್‌ಎಸ್ ರಸ್ತೆ ಕಡೆಗೆ ಹಾಗೂ ಹೆಚ್.ಡಿ.ದೇವೇಗೌಡ ವೃತ್ತದ ಕಡೆಗಿನ ರಿಂಗ್‌ರಸ್ತೆಯ ಡಿವೈಡರ್ ಹಾಗೂ ರಸ್ತೆ ಬದಿಯಲ್ಲಿ ಸ್ವಚ್ಛತಾ ಕಾರ್ಯ ಬಿರುಸಿನಿಂದ ನಡೆಸಲಾಯಿತು.

ಭಾನುವಾರ ಬೆಳಗ್ಗೆ ರಾಜೀವ್‌ನಗರ ಸಮೀಪ ರಿಂಗ್ ರಸ್ತೆ ಸ್ವಚ್ಛತೆ ಪರಿಶೀಲನೆ ನಡೆಸಿದ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಸಂಜೆ ವೇಳೆಗೆ ಇಡೀ ರಿಂಗ್ ರಸ್ತೆ ಸ್ವಚ್ಛತೆ ಮುಕ್ತಾಯವಾಗಬೇಕು. ಹಾಗೆಯೇ ಪ್ರತಿನಿತ್ಯ ನಿರ್ವಹಣೆ ನಡೆಯಬೇಕು ಎಂದು ಪಾಲಿಕೆ ಪರಿಸರ ಇಂಜಿನಿಯರ್‌ಗಳಿಗೆ ಸೂಚಿಸಿದರು.

**ಚಾಮುಂಡಿಬೆಟ್ಟಕ್ಕೆ 200 ಮಂದಿ ಪೌರಕಾರ್ಮಿಕರ ನಿಯೋಜನೆ...!**

> “ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟನೆ ಕಾರ್ಯಕ್ರಮದ ಸ್ವಚ್ಛತಾ ನಿರ್ವಹಣೆ ಹಿನ್ನೆಲೆಯಲ್ಲಿ ನಾಳೆ(ಸೆ.22) ಚಾಮುಂಡಿ ಬೆಟ್ಟಕ್ಕೆ 200 ಮಂದಿ ಪೌರಕಾರ್ಮಿಕರನ್ನು ನಿಯೋಜನೆ ಮಾಡಲಾಗಿದೆ. ಸ್ವಚ್ಛತೆಯಲ್ಲಿ ಯಾವುದೇ ಲೋಪ ಅಥವಾ ವಿಳಂಬವಾಗದಂತೆ ಮುಂಜಾಗ್ರತೆ ವಹಿಸಲಾಗಿದೆ.
>
> **–ಡಾ.ವೆಂಕಟೇಶ್, ಆರೋಗ್ಯಾಧಿಕಾರಿ, ಮೈಸೂರು ಮಹಾನಗರಪಾಲಿಕೆ**

**ಸ್ವಚ್ಛತೆಗೆ ಹೆಚ್ಚುವರಿ 500 ಪೌರಕಾರ್ಮಿಕರು:** ದಸರಾ ಹಿನ್ನೆಲೆಯಲ್ಲಿ ಪಾಲಿಕೆ ಹಾಲಿ ಇರುವ ಪೌರಕಾರ್ಮಿಕರ ಜೊತೆಗೆ ಹೆಚ್ಚುವರಿಯಾಗಿ 500 ಮಂದಿ ಪೌರಕಾರ್ಮಿಕರನ್ನು 15 ದಿನಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿದ್ದು, 4 ತಂಡಗಳಾಗಿ ವಿಂಗಡಣೆ ಮಾಡಲಾಗಿದೆ. ಆಹಾರ ಮೇಳ, ಯುವ ದಸರಾ, ಫಲ ಪುಷ್ಪ ಪ್ರದರ್ಶನ ಸೇರಿದಂತೆ ದಸರಾ ಕಾರ್ಯಕ್ರಮಗಳ ಸ್ವಚ್ಛತಾ ಜವಾಬ್ದಾರಿಯನ್ನು ಆಯಾ ತಂಡಕ್ಕೆ ವಹಿಸಲಾಗಿದೆ ಎಂದು ಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

## ದಸರಾ ಚುಟುಕು ಕವಿಗೋಷ್ಠಿಗೆ ಚಾಲನೆ



ದಸರಾ ಚುಟುಕು ಕವಿಗೋಷ್ಠಿ ಉದ್ಘಾಟನಾ ಸಂದರ್ಭ.

ಮೈಸೂರು,ಸೆ.21(ಎಂಕೆ)–ಚುಟುಕು ಸಾಹಿತ್ಯ ಬದುಕಿನ ಲಾಲಿತ್ಯ ಮಾತ್ರವಲ್ಲದೆ ಭಾವನೆಗಳ ಸಾಂಗತ್ಯವಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ ಹೇಳಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಸಾಹಿತ್ಯ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ ಹಾಗೂ ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 'ದಸರಾ ಚುಟುಕು ಕವಿಗೋಷ್ಠಿ'ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಚುಟುಕು ಸಾಹಿತ್ಯವು ಪಂಚಿಂಗ್ ಮೂಲಕ ಮಿಂಚಿನ ರೀತಿಯಲ್ಲಿ ಕೇಳುಗರ ಆಕರ್ಷಿಸಲಿದೆ ಎಂದರು.

ಮೈಸೂರು ದಸರಾ ಎಂಬ ಹೆಸರು ಕೇಳಿದರೆ ಸಾಕು ಮನಸ್ಸಿನಲ್ಲಿ ಅಕ್ಷರಗಳ ಪುಂಜವೇ ಮೂಡಲಿದ್ದು, ಓಡುವ ಕಾಲದಲ್ಲಿ ಎಲ್ಲಿಯಾದರೂ ಮನಸ್ಸಿಗೆ ಮುದ ನೀಡಲು ಚುಟುಕು ಸಾಹಿತ್ಯ ಬೇಕು. ಮಹಾಕಾವ್ಯಗಳೂ ಚುಟುಕು ಸಾಹಿತ್ಯದಷ್ಟು ವೇಗವಾಗಿ ಜನಪ್ರಿಯತೆ ಪಡೆಯುವುದಿಲ್ಲ. ನಾಲ್ಕೇ ಸಾಲುಗಳಿದ್ದರೂ ಸೆಳೆತ ಗಟ್ಟಿಯಾಗಿರುತ್ತದೆ ಎಂದರು.

ಡಿವಿಜಿಯವರಿಗೆ ಹೆಸರು ತಂದುಕೊಟ್ಟ 'ಮಂಕುತಿಮ್ಮನ ಕಗ್ಗ' ಚುಟುಕು ಸಾಹಿತ್ಯದ ಸಂಗ್ರಹವಾಗಿದ್ದು, ಬದುಕಿನ ಸಾರವನ್ನೇ ಅಡಗಿಸಿಟ್ಟುಕೊಂಡಿದೆ. ನಮ್ಮ ಬದುಕು ಹೇಗಿರಬೇಕು. ಯಾವುದಕ್ಕೆ ಮಾನ್ಯತೆ ನೀಡಬೇಕು ಎಂಬುದಕ್ಕೆ ಮಂಕುತಿಮ್ಮನ ಕಗ್ಗ ದಾರಿದೀಪವಾಗಿದೆ. ಬದುಕನ್ನು ಗಟ್ಟಿಗೊಳಿಸಿದ ವಚನ ಸಾಹಿತ್ಯವೆಲ್ಲವೂ ಚುಟುಕುಗಳೇ. ಚುಟುಕು ಸಾಹಿತ್ಯವನ್ನು ಗುಟುಕಾಗಿ ಸ್ವೀಕರಿಸಿ, ಬದುಕನ್ನು ಗಟ್ಟಿಯಾಗಿ ಕಟ್ಟಬೇಕಿದೆ ಎಂದು ಅಭಿಪ್ರಾಯಪಟ್ಟರಲ್ಲದೆ ತಾವು ರಚಿಸಿದ ಎರಡು ಚುಟುಕು ಕವಿತೆಗಳನ್ನು ವಾಚಿಸಿದರು. ಬಳಿಕ ಕವಿಗಳು, ಬರಹಗಾರರು ಮೈಸೂರು ದಸರಾ, ಕನ್ನಡ ನಾಡು–ನುಡಿ ಕುರಿತ ಚುಟುಕು ಕವನಗಳನ್ನು ವಾಚಿಸಿ ಗಮನಸೆಳೆದರು. ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ಅಧ್ಯಕ್ಷ ತೋಂಟದಾರ್ಯ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಅಂಚೆ ಇಲಾಖೆ ವಿಶ್ರಾಂತ ಹಿರಿಯ ಅಧೀಕ್ಷಕ ಕೆ.ಓಬಯ್ಯ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷೆ ರತ್ನ ಹಾಲಪ್ಪ, ಚುಟುಕು ಸಾಹಿತಿ ಡಾ.ಎಂ.ಜಿ.ಆರ್.ಅರಸ್ ಮತ್ತಿತರರಿದ್ದರು.

> “ಕನ್ನಡಕ್ಕೆ ಬೂಕರ್ ಪ್ರಶಸ್ತಿ ಬಂದಿದ್ದು, ಸಾಹಿತಿ ಬಾನು ಮುಷ್ತಾಕ್ ಅವರ ಕೃತಿಯನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡಿದ್ದರಿಂದ. ಅದೇ ರೀತಿ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸೇರಿದಂತೆ ಹಿರಿಯ ಸಾಹಿತಿಗಳ ಸುಪ್ರಸಿದ್ಧ ಗ್ರಂಥಗಳನ್ನು ಭಾಷಾಂತರ ಮಾಡಿದ್ದರೆ, ಕನ್ನಡಕ್ಕೆ ನೊಬೆಲ್ ಪ್ರಶಸ್ತಿಯೂ ಬರುತ್ತಿತ್ತು.
>
> **–ಮಾನಸ**

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಅರಮನೆ ಆವರಣದಲ್ಲಿ ದೇಶ-ವಿದೇಶದ ಪ್ರವಾಸಿಗರಿಗೆ ಸಾಂಪ್ರದಾಯಕ ಸ್ವಾಗತ



**ದಸರಾಗೆ ಆಗಮಿಸಿದ ದೇಶ-ವಿದೇಶದ ಪ್ರವಾಸಿಗರನ್ನು ಅರಮನೆ ಆವರಣದಲ್ಲಿ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.**


ಮೈಸೂರು,ಸೆ.21(ಜಿಎ)–ವಿಶ್ವವಿಖ್ಯಾತ ದಸರಾಗೆ ಆಗಮಿಸಿರುವ ದೇಶ-ವಿದೇಶದ ಪ್ರವಾಸಿಗರನ್ನು ಅರಮನೆ ಆವರಣದಲ್ಲಿ ಸಾಂಪ್ರದಾಯಕವಾಗಿ ಭಾನುವಾರ ಸ್ವಾಗತಿಸಲಾಯಿತು.

ಮೈಸೂರಿನ ಜನನಿ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅರಮನೆಯ ವರಾಹ ದ್ವಾರದಿಂದ ಟಿಕೆಟ್ ಪಡೆದು, ಅರಮನೆಗೆ ಹೊರಟಿದ್ದ ದೇಶ-ವಿದೇಶದ ಪ್ರವಾಸಿಗರನ್ನು ಟ್ರಸ್ಟ್ ಪದಾಧಿಕಾರಿಗಳು ಆತ್ಮೀಯವಾಗಿ ಸ್ವಾಗತಿಸಿ, ಅಲ್ಲಿ ಹಾಕಿದ್ದ ಕುರ್ಚಿಗಳ ಮೇಲೆ ಕೂರುವಂತೆ ಕೋರಿದಾಗ ಅವರಿಗೆ ಆಶ್ಚರ್ಯವಾಯಿತು. ಆಗ ಅವರಿಗೆ ಮೈಸೂರು ದಸರೆ ಆರಂಭವಾಗುವ ಮುನ್ನಾ ಪ್ರತಿ ವರ್ಷ ಈ ರೀತಿಯ ಸಾಂಪ್ರದಾಯಿಕ ಸ್ವಾಗತ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದಾಗ ಸಂತಸ ವ್ಯಕ್ತಪಡಿಸಿದರು.

ಪ್ರವಾಸಿಗರಿಗೆ ಮೈಸೂರು ಪೇಟ ತೊಡಿಸಿ ನಂಜನಗೂಡು ರಸಬಾಳೆ, ಮೈಸೂರು ಚಿಗುರು ವಿಳ್ಳೆದೆಲೆ, ಮೈಸೂರು ಪಾಕ್, ಮೈಸೂರು ಮಲ್ಲಿಗೆ ಹೂವು ನೀಡಿ, ಮಹಿಳೆಯರಿಗೆ ಬಳೆ ತೊಡಿಸಿ, ಸುಗಂಧದ್ರವ್ಯ ಸಿಂಪಡಿಸಿ, ಆರತಿ ಮಾಡಿ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು. ಈ ವೇಳೆ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಂಬಾರಿ ಆನೆ ಅಭಿಮನ್ಯು ಮಾವುತ ವಸಂತ, ಜನನಿ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ಕೆ.ಅಶೋಕ್, ಉಪಾಧ್ಯಕ್ಷ ಸದಾಶಿವಣ್ಣ ಪ್ರಧಾನ ಕಾರ್ಯದರ್ಶಿ ಆರ್.ಸೌಮ್ಯ, ಕಾಂಗ್ರೆಸ್ ಮುಖಂಡರಾದ ಸಿ.ಎಸ್. ರಘು, ದೇವರಾಜ ಮೊಹಲ್ಲಾ ಹರೀಶ್ ಗೌಡ, ಸಮಾಜ ಸೇವಕ ವಿಕ್ರಂ ಅಯ್ಯಂಗಾರ್ ಮತ್ತಿತರರು ಉಪಸ್ಥಿತರಿದ್ದರು.

## ರೈಲ್ವೆ ಮ್ಯೂಸಿಯಂನಲ್ಲಿ ದೀಪಾಲಂಕಾರ; ಭೇಟಿ ಸಮಯ ವಿಸ್ತರಣೆ

**ಮೈಸೂರು:** ದಸರಾ ಮಹೋತ್ಸವದ ಪ್ರಯುಕ್ತ ನಗರದ ರೈಲು ಸಂಗ್ರಹಾಲಯ(ಮ್ಯೂಸಿಯಂ)ದಲ್ಲಿ ಸೆ.22ರಿಂದ ಅ.2ರವರೆಗೆ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಹಳೆಯ ಆವಿಯ ಎಂಜಿನ್‌ಗಳು, ಪರಿಶೀಲನಾ ಬೋಗಿಗಳು, ರೈಲು ಬಸ್, ಆವಿಯ ಅಗ್ನಿಶಾಮಕ ಪಂಪು, ಕೈಚಾಲಿತ ಕ್ರೇನ್ ಸೇರಿದಂತೆ ಹೊರಾಂಗಣ ಪ್ರದರ್ಶನ ವಸ್ತುಗಳು ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಭೇಟಿ ಸಮಯವನ್ನು ರಾತ್ರಿ 8ರವರೆಗೂ ವಿಸ್ತರಿಸಲಾಗಿದೆ. ರಜಾ ದಿನಗಳಾಗಿರುವ ಸೆ.23, 30ರಂದೂ ರೈಲು ಸಂಗ್ರಹಾಲಯ ತೆರೆದಿರಲಿದೆ. ಛಾಯಾಗ್ರಹಣಕ್ಕೆ ಪ್ರತ್ಯೇಕ ಶುಲ್ಕ ನಿಗದಿಗೊಳಿಸಲಾಗಿದೆ ಎಂದು ಮೈಸೂರು ವಿಭಾಗೀಯ ರೈಲ್ವೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.




## ಮೈಸೂರು ಬಿವಿಬಿಯಲ್ಲಿ ಮನಮೋಹಕ ಭರತನಾಟ್ಯ

### ಶಮಾ ಕೃಷ್ಣಾ, ಶಿಷ್ಯ ವೃಂದದಿಂದ ಪ್ರದರ್ಶನ



**ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಬಿವಿಬಿ ಸಭಾಂಗಣದಲ್ಲಿ ಶಮಾ ಕೃಷ್ಣಾ ಮತ್ತು ಅವರ ಶಿಷ್ಯ ವೃಂದ ಭರತನಾಟ್ಯ ಪ್ರದರ್ಶನ ನೀಡಿತು.**

ಮೈಸೂರು,ಸೆ.21(ಪಿಎಂ)–ಕೃಷ್ಣನ ತುಂಟಾಟ ಮತ್ತು ಗೋಪಿಕೆಯರ ಭಾವ ಭಂಗಿಯು ಭರತನಾಟ್ಯದಲ್ಲಿ ಅನಾವರಣಗೊಂಡು ದೃಶ್ಯಕಾವ್ಯ ಮೂಡಿಸಿತು. ಇಂತಹ ಸೊಗಸಿಗೆ ಪ್ರೇಕ್ಷಕರು ಸಂಭ್ರಮಿಸಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಬಿವಿಬಿ (ಭಾರತೀಯ ವಿದ್ಯಾ ಭವನ) ಸಭಾಂಗಣದಲ್ಲಿ ಶನಿವಾರ ಸಂಜೆ ಇಂತಹ ಸೊಗಸು ಸೂಸಿ ಸಭಿಕರು ಮನಸೋತರು. 'ನೃತ್ಯ ವೈಭವ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಭರತನಾಟ್ಯ ಕಾರ್ಯಕ್ರಮದಲ್ಲಿ ಶ್ರದ್ಧಾ ನೃತ್ಯತಂಡದ ವತಿಯಿಂದ ಶಮಾ ಕೃಷ್ಣಾ ಮತ್ತು ಅವರ ಶಿಷ್ಯ ವೃಂದವು ಹೀಗೆ ನಾಟ್ಯದ ಮೂಲಕ ಪ್ರೇಕ್ಷಕರಲ್ಲಿ ಉಲ್ಲಾಸವನ್ನುಂಟು ಮಾಡುವಲ್ಲಿ ಯಶಸ್ವಿಯಾಯಿತು.

ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಘಟಕಗಳ ಸಂಯುಕ್ತಾಶ್ರಯದಲ್ಲಿ 151ನೇ ಸಾಂಸ್ಕೃತಿಕ ಕಾರ್ಯಕ್ರಮವಾಗಿ ನಡೆದ ಈ ಭರತನಾಟ್ಯದಲ್ಲಿ ಮನಮೋಹಕ ನೃತ್ಯ ಪ್ರದರ್ಶನ ಕಂಡು ಪ್ರೇಕ್ಷಕರು ಬೆರಗಾದರು.

ಪುರಾತನ ಕಾಲದಿಂದಲೂ ನಮ್ಮ ಶಾಸ್ತ್ರೀಯ ನೃತ್ಯ ಶೈಲಿಗಳು ದೇವರಿಗೆ ಅರ್ಪಿಸಿರುವ ಕಲೆಗಳಾಗಿವೆ. ಜೊತೆಗೆ ಜೀವನ ಮೌಲ್ಯಗಳನ್ನು ಅನಾವರಣಗೊಳಿಸುತ್ತವೆ ಎಂದು ತಿಳಿಸಿದ ಶಮಾ ಕೃಷ್ಣಾ, ಅಂತೆಯೇ ಕೃಷ್ಣನ ಕುರಿತು 'ಸ್ವಾಗತಂ ಕೃಷ್ಣ' ಕೃತಿಯನ್ನು ಮಹಾಕವಿ ಊತುಕಾಡು ವೆಂಕಟಸುಬ್ಬಯ್ಯ ಅಯ್ಯರ್ ರಚಿಸಿದ್ದಾರೆ. ಶ್ರೀಕೃಷ್ಣನನ್ನು ಬರಮಾಡಿಕೊಳ್ಳುವ ಗೋಪಿಕೆಯರ ಭಾವನೆಗಳು ಈ ಕೃತಿಯಲ್ಲಿ ಅನಾವರಣಗೊಂಡಿವೆ. ಹಾಗೆಯೇ ಕೃಷ್ಣನ ಲೀಲೆಗಳು ಹಾಗೂ ಅವನ ಮಹತ್ವವನ್ನು ಈ ಕೃತಿಯಲ್ಲಿ ಕಾಣಬಹುದು ಎಂದು ತಿಳಿಸಿ, ತಮ್ಮ ಸಂಗಡಿಗರೊಡನೆ ನೃತ್ಯ ಪ್ರದರ್ಶಿಸಿದರು. ಇಡೀ ತಂಡವು 'ಸ್ವಾಗತಂ ಕೃಷ್ಣ' ಮೂಲಕ ಸಭಿಕರ ಮನಕ್ಕೆ ಲಗ್ಗೆಯಿಟ್ಟಿತು.

ಅಲ್ಲದೆ, ಇದೇ ತಂಡವು 'ಜತಿಸ್ವರ' ನೃತ್ಯ ಶೈಲಿಯಲ್ಲಿ ಸಭಿಕರ ಮನಸೂರೆಗೊಂಡಿತು. ಇದಕ್ಕೂ ಮುನ್ನ ಈ ನೃತ್ಯ ಶೈಲಿಯ ಬಗ್ಗೆ ಸಭಿಕರಿಗೆ ಮಾಹಿತಿ ನೀಡಿದ ಶಮಾ ಕೃಷ್ಣಾ, ಸಾವಿರಾರು ವರ್ಷಗಳ ಪಯಣದಲ್ಲಿ ನಮ್ಮ ನೆಲದ ನೃತ್ಯಕಲೆ ಹಲವು ರೂಪ ತಳೆದಿದೆ. 100 ವರ್ಷಗಳಿಂದೀಚೆಗೆ ನಾವಿಂದು ಪ್ರದರ್ಶಿಸುತ್ತಿರುವ ನೃತ್ಯ ಶೈಲಿಯನ್ನು ಭರತನಾಟ್ಯ ಎಂದು ಕರೆಯಲಾಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ಕಳೆದು ಹೋಗುತ್ತಿದ್ದ ನಮ್ಮ ನೃತ್ಯಕಲೆ ಉಳಿಸಲು ಸ್ವಾತಂತ್ರ್ಯ ಹೋರಾಟಗಾರರು ಭರತನಾಟ್ಯವೆಂದು ಹೆಸರಿಸಿದರು ಎಂದು ತಿಳಿಸಿದರು.

ಭರತಮುನಿಗಳು ರಚಿಸಿದ ಪುರಾತನ ನಾಟ್ಯಶಾಸ್ತ್ರ ಗ್ರಂಥದಲ್ಲಿ 108 ಕರಣಗಳ ವಿವರಣೆ ಇದೆ. ನಮ್ಮ ದೇಶದ ಹೆಮ್ಮೆಯ ನೃತ್ಯಗಾರ್ತಿ ಪದ್ಮವಿಭೂಷಣ ಡಾ.ಪದ್ಮ ಸುಬ್ರಹ್ಮಣ್ಯ ಅವರು ಬಹಳಷ್ಟು ಸಂಶೋಧನೆಯ ನಂತರ ಈ 108 ಕರಣಗಳನ್ನು ಪುನರ್‌ಜೀವನಗೊಳಿಸಿದರು. ಕರಣಗಳನ್ನು ಸ್ವತಃ ಅವರಿಂದ ಕಲಿಯುವ ಸೌಭಾಗ್ಯ ನನಗೆ ದೊರಕಿತು ಎಂದು ಹೇಳಿದರು. ಬಳಿಕ ಈ ಕರಣಗಳ ಜೋಡಣೆ ಇರುವ, ರಸಿಕಪ್ರಿಯ ರಾಗ ಹೊಂದಿರುವ 'ಜತಿಸ್ವರ' ಸಂಗೀತಕ್ಕೆ ತಮ್ಮ ತಂಡದೊಂದಿಗೆ ಹೆಜ್ಜೆ ಹಾಕಿ ಚಪ್ಪಾಳೆ ಗಿಟ್ಟಿಸಿದರು.

ಇದಕ್ಕೂ ಮುನ್ನ ಪುಷ್ಪಾಂಜಲಿ ಮತ್ತು ಗಣೇಶ ಸ್ತುತಿ ಸೇರಿದಂತೆ ಮೊದಲಾದವುಗಳಿಗೆ ಭರತನಾಟ್ಯ ಪ್ರದರ್ಶಿಸಲಾಯಿತು. ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಡಾ.ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಡಾ.ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯ ಗಂಗಾಧರ್, ಬಿವಿಬಿ ಸ್ಕೂಲ್ ಪ್ರಾಂಶುಪಾಲರಾದ ಲೇಖಾ ನಾಯರ್, ಉಪಪ್ರಾಂಶುಪಾಲರಾದ ಪ್ರಫುಲ್ಲ ಮತ್ತಿತರರು ಹಾಜರಿದ್ದರು.



**ಮೈಸೂರು ಬಿವಿಬಿಯಲ್ಲಿ 'ನೃತ್ಯ ವೈಭವ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಭರತನಾಟ್ಯ ಪ್ರದರ್ಶನದ ಉದ್ಘಾಟನೆ ಸಂದರ್ಭದಲ್ಲಿ ನೆರೆದಿದ್ದ ಗಣ್ಯರು.**

ಇಂದಿನಿಂದ ಅ.1.ರವರೆಗೆ ಪ್ರತಿದಿನ ಸಂಜೆ 3 ಗಂಟೆಯಿಂದ ರಾತ್ರಿ 11 ಗಂಟೆವರೆಗೆ

# ನಗರದ ಹೊರಭಾಗಗಳಿಂದ ಆಗಮಿಸುವ, ನಿರ್ಗಮಿಸುವ ಗ್ರಾಮಾಂತರ ಸಾರಿಗೆ ಬಸ್‌ಗಳು ಸಂಚರಿಸುವ ಮಾರ್ಗ

**ಮೈಸೂರು: ಮೈಸೂರು–ಬೆಂಗಳೂರು ರಸ್ತೆ ಮೂಲಕ ನಗರಕ್ಕೆ ಆಗಮಿಸುವ ಬಸ್‌ಗಳ ಮಾರ್ಗ:** ಎಕ್ಸ್‌ಪ್ರೆಸ್ ವೇ–ನಾಡಪ್ರಭು ಕೆಂಪೇಗೌಡ ವೃತ್ತ–ಎಡ ತಿರುವು–ರಿಂಗ್ ರಸ್ತೆ ಮೂಲಕ ಮಹದೇವಪುರ ರಿಂಗ್ ರಸ್ತೆ ಜಂಕ್ಷನ್ (ಸಾತಗಳ್ಳಿ ಬಸ್ ಡಿಪೋ)–ಮಹದೇವಪುರ ರಸ್ತೆ–ನೆಕ್ಸಸ್ ಮಾಲ್ ಜಂಕ್ಷನ್ –ಕಾಳಿಕಾಂಬ ದೇವಸ್ಥಾನ ರಸ್ತೆ ಜಂಕ್ಷನ್–ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್–ಫೈವ್ ಲೈಟ್ ಸರ್ಕಲ್–ಬಿ.ಎನ್ ರಸ್ತೆ–ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ.

**ನಿರ್ಗಮನ:** ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ – ಫೈವ್ ಲೈಟ್ ಸರ್ಕಲ್– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ಎಫ್‌ಟಿಎಸ್ ವೃತ್ತ – ಫೌಂಟೆನ್ ಸರ್ಕಲ್– ಟಿಪ್ಪು ವೃತ್ತ– ಲಿಂಕ್ ರೋಡ್ ಜಂಕ್ಷನ್–ಓಲ್ಡ ಟೋಲ್ ಗೇಟ್– ನಾಡಪ್ರಭು ಕೆಂಪೇಗೌಡ ವೃತ್ತ–ಎಕ್ಸ್‌ಪ್ರೆಸ್ ವೇ ಮೂಲಕ ಮುಂದೆ ಸಾಗುವುದು.

**ಮಡಿಕೇರಿ, ಹಾಸನ ಕಡೆಯಿಂದ ಹುಣಸೂರು ರಸ್ತೆ ಮೂಲಕ ನಗರಕ್ಕೆ ಆಗಮಿಸುವ ಬಸ್‌ಗಳ ಮಾರ್ಗ:** ಹುಣಸೂರು ರಸ್ತೆ–ವೈ.ಎನ್.ಎಸ್ ಜಂಕ್ಷನ್–ಸೆಂಟ್ ಜೋಸೆಫ್ ಜಂಕ್ಷನ್–ಎಡ ತಿರುವು–ಟೆಂಪಲ್ ರಸ್ತೆ–ಮಾತೃ ಮಂಡಲಿ ವೃತ್ತ–ವಿ.ವಿ.ಪುರಂ ವೃತ್ತ–ಕೆಆರ್‌ಎಸ್ ರಸ್ತೆ– ಕುಂಬಾರ ಕೊಪ್ಪಲು ಜಂಕ್ಷನ್–ರಾಯಲ್ ಇನ್‌ಜಂಕ್ಷನ್–ಬಲ ತಿರುವು–ರಿಂಗ್ ರಸ್ತೆ–ನಾಡಪ್ರಭು ಕೆಂಪೇಗೌಡ ವೃತ್ತ–ಬಲ ತಿರುವು–ಟೋಲ್ ಗೇಟ್ ಜಂಕ್ಷನ್–ಲಿಂಕ್ ರಸ್ತೆ–ಟಿಪ್ಪು ವೃತ್ತ–ಫೌಂಟೆನ್ ವೃತ್ತ– ಎಫ್‌ಟಿಎಸ್ ವೃತ್ತ–ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್–ಫೈವ್‌ಲೈಟ್ ವೃತ್ತ –ಬಿಎನ್ ರಸ್ತೆ–ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ.

**ನಿರ್ಗಮನ:** ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ– ಬಿ.ಎನ್. ರಸ್ತೆ–ಫೈವ್ ಲೈಟ್ ವೃತ್ತ–ಸರ್ಕಾರಿ ಭವನ ಉತ್ತರ ದ್ವಾರಜಂಕ್ಷನ್–ಎಫ್‌ಟಿಎಸ್ ವೃತ್ತ– ಫೌಂಟೆನ್ ವೃತ್ತ–ಟಿಪ್ಪು ವೃತ್ತ–ಲಿಂಕ್ ರಸ್ತೆ ಜಂಕ್ಷನ್– ಟೋಲ್ ಗೇಟ್ ಜಂಕ್ಷನ್–ನಾಡಪ್ರಭು ಕೆಂಪೇಗೌಡ ವೃತ್ತ–ಎಡ ತಿರುವು–ರಿಂಗ್ ರಸ್ತೆ– ರಾಯಲ್ ಇನ್ ಜಂಕ್ಷನ್–ಎಡ ತಿರವು–ಕೆಆರ್‌ಎಸ್‌ರಸ್ತೆ–ಕುಂಬಾರಕೊಪ್ಪಲು ಜಂಕ್ಷನ್–ವಿ.ವಿ.ಪುರಂ ವೃತ್ತ–ಟೆಂಪಲ್ ರಸ್ತೆ–ಮಾತೃಮಂಡಲಿ ವೃತ್ತ–ಸೆಂಟ್ ಜೋಸೆಫ್‌ಜಂಕ್ಷನ್–ಬಲ ತಿರುವು–ಹುಣಸೂರು ರಸ್ತೆ ಮೂಲಕ ಮುಂದೆ ಸಾಗುವುದು.




**ಹೆಚ್.ಡಿ.ಕೋಟೆ ಕಡೆಯಿಂದ ಮಾನಂದವಾಡಿ ರಸ್ತೆ ಮೂಲಕ ನಗರಕ್ಕೆ ಆಗಮಿಸುವ ಬಸ್‌ಗಳ ಮಾರ್ಗ:** ಮಾನಂದವಾಡಿ ರಸ್ತೆ–ಶ್ರೀನಿವಾಸ ವೃತ್ತ–ಬಲ ತಿರುವು–ಜೆಎಲ್‌ಬಿ ರಸ್ತೆ–ಕಂಸಾಳೆ ಮಹದೇವಯ್ಯ ವೃತ್ತ–ಎಲೆ ತೋಟ ಜಂಕ್ಷನ್–ರಾಜಹಂಸ ಜಂಕ್ಷನ್–ಟ್ರಕ್ ಟರ್ಮಿನಲ್ ರಸ್ತೆ–ಎಂಆರ್‌ಸಿ ವೃತ್ತ–ಬುಲೆವರ್ಡ್ ವೃತ್ತ–ಟ್ಯಾಂಕ್ ಬಂಡ್ ರಸ್ತೆ– ಸರ್ಕಸ್ ಮೈದಾನ ಜಂಕ್ಷನ್–ಲೋಕರಂಜನ್ ರಸ್ತೆ–ಎಸ್.ಲಿಂಗಣ್ಣ ವೃತ್ತ– ಹಾರ್ಡಿಂಜ್ ವೃತ್ತ– ಬಿ.ಎನ್.ರಸ್ತೆ– ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ

**ನಿರ್ಗಮನ:** ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ–ಫೈವ್ ಲೈಟ್ ವೃತ್ತ–ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್ –ಕಾಳಿಕಾಂಭ ದೇವಸ್ಥಾನದ ಜಂಕ್ಷನ್–ಡಿಪಿಓ ವೃತ್ತ–ನಜರ್‌ಬಾದ್ ವೃತ್ತ–ಟ್ಯಾಂಕ್ ಬಂಡ್ ರಸ್ತೆ– ಬುಲೆವರ್ಡ್ ವೃತ್ತ–ಮಹಾರಾಣ ಪ್ರತಾಪ ಸಿಂಹ ರಸ್ತೆ–ಸಿ.ಎ.ಆರ್ ಕೇಂದ್ರ ಸ್ಥಾನ "ವೈ" ಜಂಕ್ಷನ್–ಚಾಮಪ್ಪಾಜಿ ರಸ್ತೆ (ರೇಸ್ ಕೋರ್ಸ್ ಹಿಂಭಾಗದ ರಸ್ತೆ)–ಟ್ರಕ್ ಟರ್ಮಿನಲ್ ರಸ್ತೆ ಜಂಕ್ಷನ್–ಸತ್ಯ ಹರಿಶ್ಚಂದ್ರ ರಸ್ತೆ–ಎಲೆ ತೋಟ ಜಂಕ್ಷನ್–ಎಡ ತಿರುವು–ನಂಜನಗೂಡು ರಸ್ತೆ– ಜೆ.ಪಿ.ನಗರ ಲಿಂಕ್ ರಸ್ತೆ–ಮಾನಂದವಾಡಿ ರಸ್ತೆ ಮೂಲಕ ಮುಂದೆ ಸಾಗುವುದು.

**ನಂಜನಗೂಡು, ಗುಂಡ್ಲುಪೇಟೆ ಮತ್ತು ಚಾಮರಾಜನಗರ ಕಡೆಯಿಂದ ನಂಜನಗೂಡು ರಸ್ತೆ ಮೂಲಕ ನಗರಕ್ಕೆಆಗಮಿಸುವ ಬಸ್‌ಗಳ ಮಾರ್ಗ:** ನಂಜನಗೂಡು ರಸ್ತೆ– ಎಲೆ ತೋಟ ಜಂಕ್ಷನ್–ರಾಜಹಂಸ ಜಂಕ್ಷನ್–ಟ್ರಕ್ ಟರ್ಮಿನಲ್ ರಸ್ತೆ–ಎಂಆರ್‌ಸಿ ವೃತ್ತ– ಬುಲೆವರ್ಡ್ ವೃತ್ತ–ಟ್ಯಾಂಕ್ ಬಂಡ್ ರಸ್ತೆ–ಸರ್ಕಸ್ ಮೈದಾನ ಜಂಕ್ಷನ್–ಲೋಕರಂಜನ್ ರಸ್ತೆ–ಎಸ್.ಲಿಂಗಣ್ಣ ವೃತ್ತ– ಹಾರ್ಡಿಂಜ್ ವೃತ್ತ– ಬಿಎನ್‌ರಸ್ತೆ–ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ.

**ನಿರ್ಗಮನ:** ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ– ಫೈವ್ ಲೈಟ್ ವೃತ್ತ–ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್–ಕಾಳಿಕಾಂಭ ದೇವಸ್ಥಾನದ ಜಂಕ್ಷನ್– ಡಿಪಿಓ ವೃತ್ತ– ನಜರ್‌ಬಾದ್ ವೃತ್ತ– ಟ್ಯಾಂಕ್ ಬಂಡ್ ರಸ್ತೆ–ಬುಲೆವರ್ಡ್‌ವೃತ್ತ– ಮಹಾರಾಣ ಪ್ರತಾಪ ಸಿಂಹ ರಸ್ತೆ–ಸಿ.ಎ.ಆರ್ ಕೇಂದ್ರ ಸ್ಥಾನ "ವೈ" ಜಂಕ್ಷನ್– ಚಾಮಪ್ಪಾಜಿ ರಸ್ತೆ (ರೇಸ್‌ಕೋರ್ಸ್ ಹಿಂಭಾಗದ ರಸ್ತೆ)–ಟ್ರಕ್ ಟರ್ಮಿನಲ್ ರಸ್ತೆ ಜಂಕ್ಷನ್– ಸತ್ಯ ಹರಿಶ್ಚಂದ್ರ ರಸ್ತೆ–ಎಲೆ ತೋಟ ಜಂಕ್ಷನ್– ಎಡ ತಿರುವು– ನಂಜನಗೂಡು ರಸ್ತೆ ಮೂಲಕ ಮುಂದೆ ಸಾಗುವುದು.

**ಟಿ.ನರಸೀಪುರ, ಕೊಳ್ಳೇಗಾಲ ಕಡೆಯಿಂದ ಟಿ.ನರಸೀಪುರ ರಸ್ತೆ ಮೂಲಕ ನಗರಕ್ಕೆ ಆಗಮಿಸುವ ಬಸ್‌ಗಳ ಮಾರ್ಗ:** ಟಿ.ನರಸೀಪುರ ರಸ್ತೆ "ಟಿ" ಜಂಕ್ಷನ್– ಲಲಿತ ಮಹಲ್ ರಸ್ತೆ–ಸಂಗೊಳ್ಳಿ ರಾಯಣ್ಣ ವೃತ್ತ–ಬುಲೆವರ್ಡ್ ವೃತ್ತ–ಟ್ಯಾಂಕ್ ಬಂಡ್ ರಸ್ತೆ–ಸರ್ಕಸ್ ಮೈದಾನ ಜಂಕ್ಷನ್–ಲೋಕರಂಜನ್ ರಸ್ತೆ– ಎಸ್.ಲಿಂಗಣ್ಣ ವೃತ್ತ –ಹಾರ್ಡಿಂಜ್ ವೃತ್ತ– ಬಲ ತಿರುವು– ಬಿ.ಎನ್.ರಸ್ತೆ–ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ

**ನಿರ್ಗಮನ:** ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ– ಫೈವ್ ಲೈಟ್ ವೃತ್ತ– ಸರ್ಕಾರಿ ಭವನದ ಉತ್ತರದ್ವಾರ– ಕಾಳಿಕಾಂಭ ದೇವಸ್ಥಾನದ ಜಂಕ್ಷನ್–ಡಿ.ಪಿ.ಓ ವೃತ್ತ–ನಜರ್‌ಬಾದ್ ವೃತ್ತ– ಎಂಎಂ ರಸ್ತೆ–ಡೈರಿ ಜಂಕ್ಷನ್–ಆರ್.ಮಹದೇವಪ್ಪ ವೃತ್ತದಲ್ಲಿ ಬಲ ತಿರುವು ಪಡೆದು ಟಿ.ನರಸೀಪುರ ರಸ್ತೆ ಕಡೆಗೆ ಮುಂದೆ ಸಾಗುವುದು.

**ಬನ್ನೂರು ಮತ್ತು ಮಳವಳ್ಳಿ ಕಡೆಯಿಂದ ಎಂಎಂ ರಸ್ತೆ ಮೂಲಕ ನಗರಕ್ಕೆ ಆಗಮಿಸುವ ಬಸ್‌ಗಳ ಮಾರ್ಗ:** ದೇವೇಗೌಡ ವೃತ್ತ–ಆರ್.ಮಹದೇವಪ್ಪ ವೃತ್ತ–ಬಲ ತಿರುವು– ರಾಜಕುಮಾರ್ ರಸ್ತೆ– ಉದಯಗಿರಿ ಕೆಇಬಿ ಜಂಕ್ಷನ್–ಮಹದೇವಪುರ ರಸ್ತೆ–ನೆಕ್ಸಸ್‌ಮಾಲ್ ಜಂಕ್ಷನ್ –ಕಾಳಿಕಾಂಭ ದೇವಸ್ಥಾನ ಜಂಕ್ಷನ್– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್–ಫೈವ್ ಲೈಟ್ ವೃತ್ತ–ಬಿ.ಎನ್. ರಸ್ತೆ– ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ.

**ನಿರ್ಗಮನ:** ಸಾರಿಗೆ ಬಸ್ ನಿಲ್ದಾಣ– ಫೈವ್‌ಲೈಟ್–ಸರ್ಕಾರಿ ಭವನದ ಉತ್ತರದ್ವಾರ–ಕಾಳಿಕಾಂಭ ದೇವಸ್ಥಾನದ ಜಂಕ್ಷನ್–ಡಿಪಿಓ ವೃತ್ತ ನಜರ್‌ಬಾದ್ ವೃತ್ತ–ಎಂಎಂ ರಸ್ತೆ–ಡೈರಿ ಜಂಕ್ಷನ್–ಆರ್.ಮಹದೇವಪ್ಪ ವೃತ್ತದ ಮೂಲಕ ಬನ್ನೂರು, ಮಳವಳ್ಳಿ ಕಡೆಗೆ ಮುಂದೆ ಸಾಗುವುದು.

# ಇಂದಿನಿಂದ ಅ.2ವರೆಗೆ ಪ್ರತಿದಿನ ಸಂಜೆ 3ರಿಂದ ರಾತ್ರಿ 12ರವರೆಗೆ ವಾಹನ ನಿಲುಗಡೆಗೆ ನಿಷೇಧ

**ಮೈಸೂರು:** ಮೈಸೂರು ಅರಮನೆಯ ಸುತ್ತಲಿನ ಬಿ.ಎನ್.ರಸ್ತೆ, ಎ.ವಿ.ರಸ್ತೆ, ಸಯ್ಯಾಜಿರಾವ್ ರಸ್ತೆ, ಪುರಂದರ ರಸ್ತೆಗಳಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ.

ರಮಾವಿಲಾಸ ರಸ್ತೆಯಲ್ಲಿ ಮೂಡಾ ಜಂಕ್ಷನ್‌ನಿಂದ ಬನುಮಯ್ಯ ಕಾಲೇಜು ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. (ಕೆಎಸ್‌ಆರ್‌ಟಿಸಿ ಸಾರಿಗೆ ಬಸ್‌ಗಳನ್ನು ಹೊರತುಪಡಿಸಿ).

ಸಯ್ಯಾಜಿರಾವ್ ರಸ್ತೆಯಲ್ಲಿ ಬಸವೇಶ್ವರ ವೃತ್ತದಿಂದ ಅಗ್ರಹಾರ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಎಂ.ಜಿ ರಸ್ತೆಯಲ್ಲಿ ಅಗ್ರಹಾರ ವೃತ್ತದಿಂದ ಸಿದ್ದಪ್ಪ ಚೌಕದವರೆಗೆ ರಸ್ತೆಯ ಎಡ ಬದಿಯಲ್ಲಿ ಎಲ್ಲಾ ಮಾದರಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಎಂ.ಜಿ ರಸ್ತೆಯಲ್ಲಿ ಅಗ್ರಹಾರ ವೃತ್ತದಿಂದ ಎಂ.ಜಿ. ರಸ್ತೆ ಅಂಡರ್‌ಬ್ರಿಡ್ಜ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. ಜೆ.ಎಲ್.ಬಿ ರಸ್ತೆಯಲ್ಲಿ ಶ್ರೀನಿವಾಸ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ಪಾರ್ಕಿಂಗ್ ನಿಷೇಧಿಸಲಾಗಿದೆ.

ರಾಮಸ್ವಾಮಿ ವೃತ್ತದಿಂದ ಸರಸ್ವತಿಪುರಂ ಅಗ್ನಿ ಶಾಮಕ ಠಾಣೆ ಜಂಕ್ಷನ್‌ವರೆಗಿನ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ಚಾಮರಾಜ ಜೋಡಿ ರಸ್ತೆಯಲ್ಲಿ ರಾಮಸ್ವಾಮಿ ವೃತ್ತದಿಂದ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಜಂಕ್ಷನ್‌ವರೆಗಿನ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ಕೆ.ಆರ್.ಬಿ ರಸ್ತೆಯಲ್ಲಿ ಡಿ.ಸಿ. ಕಚೇರಿ ಆರ್ಚ್ ಜಂಕ್ಷನ್‌ನಿಂದ ಕೆ.ಜಿ.ಕೊಪ್ಪಲು ಅಂಡರ್ ಬಿಡ್ಜ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಓಲ್ಡ್ ಬ್ಯಾಂಕ್ ರಸ್ತೆಯಲ್ಲಿ ಗಾಂಧಿ ಚೌಕದಿಂದ ಸಯ್ಯಾಜಿರಾವ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ಅಶೋಕ ರಸ್ತೆಯಲ್ಲಿ ಮಿಲಾದ್ ಪಾರ್ಕ್ ಜಂಕ್ಷನ್‌ನಿಂದ ಹರ್ಷ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ




ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಗಾಂಧಿ ಚೌಕದ ವೃತ್ತದಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. (ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಹೊರತುಪಡಿಸಿ)

ಚಂದ್ರಗುಪ್ತ ರಸ್ತೆಯಲ್ಲಿ ಅಶೋಕ ರಸ್ತೆ ಜಂಕ್ಷನ್‌ನಿಂದ ಬಿ.ಎನ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. ಬಿ.ಎನ್ ರಸ್ತೆಯಲ್ಲಿ ಸೆಂಟ್ರಲ್ ಮಾಲ್ (ಛತ್ರಿ ಮರ) ಜಂಕ್ಷನ್‌ನಿಂದ ಹೈದರಾಲಿ ಖಾನ್ ವೃತ್ತದವರೆಗೆ (ಫೈವ್ ಲೈಟ್ ಸರ್ಕಲ್) ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ನೆಹರು ವೃತ್ತದಿಂದ ನೇಮಿನಾಥ ಸ್ಟೀಲ್ ಜಂಕ್ಷನ್‌ವರೆಗೆ (ಮಿನಿ ವಿಧಾನಸೌಧ ರಸ್ತೆ ) ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಡಾ.ರಾಜಕುಮಾರ್ ವೃತ್ತ (ಫೌಂಟನ್ ವೃತ್ತ) ದಿಂದ ಹಳೆ ಮೈಸೂರು ಬೆಂಗಳೂರು ರಸ್ತೆಯಲ್ಲಿ ನಾಡಪ್ರಭು ಕೆಂಪೇಗೌಡ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. ಟಿ.ಎನ್.ನರಸಿಂಹಮೂರ್ತಿ ವೃತ್ತದಿಂದ (ಎಲ್.ಐ.ಸಿ ವೃತ್ತ) ಹೊಸ ಮೈಸೂರು ಬೆಂಗಳೂರು ರಸ್ತೆಯಲ್ಲಿ ಓಲ್ಡ್ ಟೋಲ್‌ಗೇಟ್ ಜಂಕ್ಷನ್‌ವರೆಗೆ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. ಟಿ.ಎನ್.ನರಸಿಂಹ ಮೂರ್ತಿ ವೃತ್ತದಿಂದ (ಎಲ್.ಐ.ಸಿ ವೃತ್ತ) ಹೈವೇ ವೃತ್ತದವರೆಗೆ ನೆಲ್ಸನ್ ಮಂಡೇಲಾ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಹೈವೇ ವೃತ್ತದಿಂದ ಆರ್‌ಎಂಸಿ ವೃತ್ತದವರೆಗೆ ಎಸ್.ಆರ್.ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. ಆರ್‌ಎಂಸಿ ವೃತ್ತದಿಂದ ಜೆ.ಕೆ.ಮೈದಾನ ಜಂಕ್ಷನ್‌ವರೆಗೆ ಶೇಷಾದ್ರಿ ಅಯ್ಯರ್ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ಲೋಕರಂಜನ್ ರಸ್ತೆಯಲ್ಲಿ ಸರ್ಕಸ್ ಗ್ರೌಂಡ್ ಜಂಕ್ಷನ್‌ನಿಂದ ಹಾರ್ಡಿಂಜ್ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ.

ಮೃಗಾಲಯ ರಸ್ತೆಯಲ್ಲಿ ಸೋಮಸುಂದರಂ ವೃತ್ತದಿಂದ ಚೆನ್ನಯ್ಯ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆ ಷೇಧಿಸಲಾಗಿದೆ. ಹರಿಕೃಷ್ಣ ವೃತ್ತದಿಂದ (ಡಿ.ಪಿ.ಓ) ಹಳೆ ಬಿ.ಜೆ.ಪಿ. ಕಚೇರಿ ಜಂಕ್ಷನ್‌ವರೆಗೆ ಚಾಮುಂಡಿ ವಿಹಾರ ಕ್ರೀಡಾಂಗಣ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ವಸ್ತುಪ್ರದರ್ಶನ ಮೈದಾನದ (ಉತ್ತರ ದ್ವಾರ) ಬಿ.ಎನ್.ರಸ್ತೆ ಜಂಕ್ಷನ್‌ನಿಂದ ಮೃಗಾಲಯ ರಸ್ತೆ ಜಂಕ್ಷನ್‌ವರೆಗೆ (ಉಡುಪಿ ಹೋಟೆಲ್) ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ಮೃಗಾಲಯ ರಸ್ತೆಯಲ್ಲಿ ಎಸ್‌ಆರ್‌ಟಿ ಜಂಕ್ಷನ್‌ನಿಂದ ಹಳೆ ಪೋಸ್ಟ್ ಆಫೀಸ್ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಮಾನಸರ ರಸ್ತೆಯಲ್ಲಿ ಎಂ.ಜಿ.ರಸ್ತೆ ಜಂಕ್ಷನ್‌ನಿಂದ (ಮಾಲ್ ಆಫ್ ಮೈಸೂರು) ಲೋಕರಂಜನ್ ರಸ್ತೆ ಜಂಕ್ಷನ್‌ವರೆಗೆ (ಗಣಪತಿ ದೇವಸ್ಥಾನ) ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ಮಲೈಮಹದೇಶ್ವರ ರಸ್ತೆಯಲ್ಲಿ ಬಿ.ಎನ್.ರಸ್ತೆ ಜಂಕ್ಷನ್‌ನಿಂದ (ಛತ್ರಿ ಮರ) ಪೂರ್ವಕ್ಕೆ ಚೆನ್ನಯ್ಯ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ಕಾಳಿಕಾಂಭ ದೇವಸ್ಥಾನ ಜಂಕ್ಷನ್‌ನಿಂದ ಸಮೋಸಾ ಕಾರ್ನರ್‌ವರೆಗೆ ಹಾಗೂ ಮಹದೇವಪುರ ರಸ್ತೆಯಲ್ಲಿ ಸಮೋಸಾಕಾರ್ನರ್ ಜಂಕ್ಷನ್‌ನಿಂದ ಉದಯಗಿರಿ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

# ದೇಶ - ವಿದೇಶ

## ರಾಜ್ಯಗಳ ಮೇಲೆ ಭಾಷಾ ಹೇರಿಕೆ ಇಲ್ಲ



**ಚೆನ್ನೈ:** ಕೇಂದ್ರವು ಯಾವುದೇ ರಾಜ್ಯದ ಮೇಲೆ ಯಾವುದೇ ಭಾಷೆಯನ್ನು ಹೇರುತ್ತಿಲ್ಲ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ. ಐಐಟಿ ಮದ್ರಾಸ್‌ನಲ್ಲಿ ನಡೆದ ಥಿಂಕ್ ಇಂಡಿಯಾ ದಕ್ಷಿಣಪಥ ಶೃಂಗಸಭೆ– 2025ರಲ್ಲಿ ಭಾಗವಹಿಸಿದ್ದ ಅವರು, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಕೇಂದ್ರವು ರಾಜ್ಯಗಳ ಮೇಲೆ ತ್ರಿಭಾಷಾ ನೀತಿ ಹೇರುತ್ತಿದೆ ಎನ್ನುವುದು ರಾಜಕೀಯ ಪ್ರೇರಿತ ಆರೋಪ ಎಂದರು. ನಾವು ಯಾರ ಮೇಲೂ ಯಾವುದೇ ಭಾಷೆಯನ್ನು ಹೇರುತ್ತಿಲ್ಲ. 1 ಮತ್ತು 2ನೇ ತರಗತಿಗಳಿಗೆ ದ್ವಿಭಾಷಾ ಸೂತ್ರ ಇರುತ್ತದೆ. ಇದರಲ್ಲಿ ಒಂದು ಮಾತೃಭಾಷೆ. ತಮಿಳುನಾಡಿನಲ್ಲಾದರೆ ಇದು ತಮಿಳು ಭಾಷೆಯಾಗಿರುತ್ತದೆ. ಇದರ ಜತೆಗೆ ನಿಮ್ಮ ಆಯ್ಕೆಯ ಇನ್ನೊಂದು ಭಾಷೆಯನ್ನು ಕಲಿಸಬಹುದು. 6ರಿಂದ 10ನೇ ತರಗತಿವರೆಗೆ ತ್ರಿಭಾಷಾ ಸೂತ್ರ ಇರುತ್ತದೆ. ಒಂದು ಮಾತೃಭಾಷೆಯಾದರೆ, ಇನ್ನೆರಡು ಆಯ್ಕೆಯ ಭಾಷೆಯಾಗಿರುತ್ತವೆ ಎಂದು ಸ್ಪಷ್ಟಪಡಿಸಿದರು.

11ನೇ ಮತ್ತು 12ನೇ ತರಗತಿಯ ಪಠ್ಯಕ್ರಮದಲ್ಲಿ ಕೌಶಲ ಆಧಾರಿತ ಕಲಿಕೆಯನ್ನು ಸೇರ್ಪಡೆ ಮಾಡುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಪರಿಗಣಿಸಲಿದೆ ಎಂದು ಪ್ರಧಾನ್ ಹೇಳಿದರು.

## ನಾನು 7 ಯುದ್ಧಗಳನ್ನು ನಿಲ್ಲಿಸಿದ್ದೇನೆ, ನನಗೆ ನೊಬೆಲ್ ಪ್ರಶಸ್ತಿ ಸಿಗಬೇಕು




**ವಾಷಿಂಗ್ಟನ್:** ನಾನು ಈ ವರ್ಷದ ಆರಂಭದಲ್ಲಿ ವ್ಯಾಪಾರ ಸ್ಥಗಿತದ ಬೆದರಿಕೆ ಒಡ್ಡಿ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ನಿಲ್ಲಿಸಿದೆ ಎಂದು ಮತ್ತೊಮ್ಮೆ ಪುನರುಚ್ಚರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಾನು ಈವರೆಗೆ ಏಳು ಯುದ್ಧಗಳನ್ನು ನಿಲ್ಲಿಸಿದ್ದು, ನನಗೆ ನೊಬೆಲ್ ಪ್ರಶಸ್ತಿ ಸಿಗಬೇಕು ಎಂದು ಹೇಳಿದ್ದಾರೆ.

ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆಯನ್ನು ಶಮನಗೊಳಿಸಲು ನಾನು ನೆರವು ನೀಡಿದೆ ಎಂದಿದ್ದಾರೆ. ಅಮೆರಿಕನ್ ಕಾರ್ನರ್ ಸ್ಟೋನ್ ಸಂಸ್ಥೆಯ ಸಂಸ್ಥಾಪಕರ ಭೋಜನ ಕೂಟದಲ್ಲಿ ಪಾಲ್ಗೊಂಡು ಮಾತನಾಡಿದ ಡೊನಾಲ್ಡ್ ಟ್ರಂಪ್, ನಾವು ಜಾಗತಿಕ ಮಟ್ಟದಲ್ಲಿ ಈ ಹಿಂದೆಂದೂ ಅಮೆರಿಕ ಗೌರವಿಸಲ್ಪಡದಿದ್ದಂತಹ ಮಟ್ಟದಲ್ಲಿ ಗೌರವ ಗಳಿಸುವ ಕೆಲಸವನ್ನು ಮಾಡುತ್ತಿದ್ದೇವೆ. ನಾವು ಶಾಂತಿ ಒಪ್ಪಂದಗಳನ್ನು ಮಾಡಿಸುತ್ತಿದ್ದೇವೆ ಹಾಗೂ ನಾವು ಯುದ್ಧಗಳನ್ನು ನಿಲ್ಲಿಸುತ್ತಿದ್ದೇವೆ. ನಾವು ಭಾರತ ಮತ್ತು ಪಾಕಿಸ್ತಾನ ಹಾಗೂ ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವಿನ ಯುದ್ಧವನ್ನು ಸ್ಥಗಿತಗೊಳಿಸಿದ್ದೇವೆ ಎಂದು ಘೋಷಿಸಿದರು.

## ಕಬಡ್ಡಿ ಪಂದ್ಯದ ವೇಳೆ ಹಠಾತ್ ಬಿರುಗಾಳಿ: ವಿದ್ಯುತ್ ತಂತಿ ತಗುಲಿ ಮೂವರು ಸಾವು

**ರಾಯ್ಪುರ:** ಛತ್ತೀಸ್‌ಗಢದ ಕೊಂಡಗಾಂವ್ ಜಿಲ್ಲೆಯಲ್ಲಿ ಕಬಡ್ಡಿ ಪಂದ್ಯದ ವೇಳೆ ಬಿರುಗಾಳಿ ಬೀಸಿದ ಪರಿಣಾಮ ಟೆಂಟ್‌ಗೆ ವಿದ್ಯುತ್ ತಂತಿ ತಗುಲಿ ಮೂವರು ಸಾವನ್ನಪ್ಪಿದ್ದಾರೆ. ಗ್ರಾಮದಲ್ಲಿ ಶನಿವಾರ ಕಬ್ಬಡಿ ಪಂದ್ಯವನ್ನು ಆಯೋಜಿಸಲಾಗಿತ್ತು. ಅಲ್ಲದೇ ಪ್ರೇಕ್ಷಕರಿಗಾಗಿ ಟೆಂಟ್ ಅನ್ನು ನಿರ್ಮಿಸಲಾಗಿತ್ತು. ಪಂದ್ಯ ನಡೆಯುತ್ತಿದ್ದ ವೇಳೆ ಹಠಾತ್ ಬಿರುಗಾಳಿ ಬೀಸಿದ ಪರಿಣಾಮ ಟೆಂಟ್‌ನ ಕಬ್ಬಿಣದ ಕಂಬಕ್ಕೆ 11–ಕೆವಿ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ಈ ದುರ್ಘಟನೆ ಸಂಭವಿಸಿದೆ. ಕೂಡಲೇ ಸ್ಥಳೀಯರು ಗಾಯಗೊಂಡ ಆರು ಮಂದಿಯನ್ನು ವಿಶ್ರಾಂಪುರಿಯ ಆಸ್ಪತ್ರೆಗೆ ಕರೆದೊಯ್ದರು. ಅಷ್ಟರಲ್ಲಾಗಲೇ ಮೂವರು ಸಾವನ್ನಪ್ಪಿದ್ದು, ಗಾಯಗೊಂಡ ಮೂವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.



## ಗಾಜಾ ಮೇಲೆ ಇಸ್ರೇಲ್ ದಾಳಿ: ಒಂದೇ ದಿನ 91 ಮಂದಿ ಸಾವು



**ಟೆಲ್ ಅವೀವ್:** ಗಾಜಾ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಒಂದೇ ದಿನ 91 ಮಂದಿ ಸಾವನ್ನಪ್ಪಿದ್ದಾರೆ. ಟೆಲ್ ಅವೀವ್‌ನಲ್ಲಿ ಪ್ರತಿಭಟನೆಗಳು ಭುಗಿಲೆದ್ದಿವೆ. ಗಾಜಾದ ಅತಿದೊಡ್ಡ ನಗರ ಕೇಂದ್ರವನ್ನು ವಶಪಡಿಸಿಕೊಳ್ಳಲು ವಾಯು ಮತ್ತು ಭೂಸೇನಾ ಕಾರ್ಯಾಚರಣೆ ತೀವ್ರಗೊಳಿಸಲಾಗಿತ್ತು.

ಇಸ್ರೇಲಿ ಪಡೆಗಳು ಒಂದೇ ದಿನದಲ್ಲಿ ಗಾಜಾದಲ್ಲಿ 91 ಪ್ಯಾಲೆಸ್ಟೀನಿಯನ್ನರನ್ನು ಹತ್ಯೆ ಮಾಡಿವೆ. ಪ್ರಮುಖ ವೈದ್ಯರ ಕುಟುಂಬ ಸದಸ್ಯರು ಮತ್ತು ಉತ್ತರ ಗಾಜಾ ನಗರದ ಹಲವಾರು ಜನರು ಮೃತಪಟ್ಟಿದ್ದಾರೆ ಎಂದು ಅಲ್ ಜಜೀರಾ ವರದಿ ಮಾಡಿದೆ. ವಸತಿ ಮನೆಗಳು, ಆಶ್ರಯ ತಾಣಗಳು ಹಾಗೂ ಗಾಜಾದಿಂದ ಬೇರೆಡೆಗೆ ನಾಗರಿಕರನ್ನು ಸಾಗಿಸುತ್ತಿದ್ದ ಟ್ರಕ್‌ನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಈ ದಾಳಿಗಳಲ್ಲಿ ಕನಿಷ್ಠ 76 ಮಂದಿ ಸಾವಿಗೀಡಾಗಿದ್ದಾರೆ. ಗಾಜಾ ನಗರದ ನಾಸ್ರ್ ಪ್ರದೇಶದಲ್ಲಿ ನಡೆದ ದಾಳಿಯಲ್ಲಿ ಕನಿಷ್ಠ ನಾಲ್ವರು ಸಾವನ್ನಪ್ಪಿದ್ದಾರೆ.

## ಉತ್ತರಾಖಂಡದ ಚಮೋಲಿಯಲ್ಲಿ ಭೂಕುಸಿತಕ್ಕೆ ತಾಯಿ, ಮಕ್ಕಳು ಬಲಿ



**ಡೆಹ್ರಾಡೂನ್:** ಉತ್ತರಾಖಂಡದ ಚಮೋಲಿಯಲ್ಲಿ ಸಂಭವಿಸಿದ ಭೂಕುಸಿತದ ಅವಶೇಷಗಳ ಅಡಿಯಲ್ಲಿ ತಾಯಿ ಮತ್ತು ಇಬ್ಬರು ಮಕ್ಕಳು ಸಿಲುಕಿ ಮೃತಪಟ್ಟಿರುವ ದಾರುಣ ಘಟನೆ ನಡೆದಿದೆ.

ಭಾರೀ ಮಳೆ ಮತ್ತು ಮೇಘಸ್ಫೋಟದಿಂದಾಗಿ ಜಿಲ್ಲೆಯ ನಂದನಗರ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿತ್ತು. 38 ವರ್ಷದ ಮಹಿಳೆ ತನ್ನ 10 ವರ್ಷದ ಮಕ್ಕಳಾದ ವಿಶಾಲ್ ಮತ್ತು ವಿಕಾಸ್ ಅಪ್ಪಿಕೊಂಡೇ ಪ್ರಾಣ ಬಿಟ್ಟಿದ್ದಾರೆ. ವಿಪತ್ತು ಸಂಭವಿಸಿದ ಸಮಯದಲ್ಲಿ ಮಕ್ಕಳನ್ನು ರಕ್ಷಿಸಲು ತಾಯಿ ಪ್ರಯತ್ನಿಸಿದ್ದರು. ಬುಧವಾರ ಈ ಪ್ರದೇಶದಲ್ಲಿ ಸಂಭವಿಸಿದ ವಿಪತ್ತಿನ ನಂತರ 8 ಮಂದಿ ನಾಪತ್ತೆಯಾಗಿದ್ದಾರೆ. ಇದರಿಂದಾಗಿ ಜಿಲ್ಲಾಡಳಿತ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸಿವೆ. ಹಠಾತ್ ಪ್ರವಾಹ ಮತ್ತು ಭೂಕುಸಿತಗಳು ಮೂಲಸೌಕರ್ಯಗಳಿಗೆ ಭಾರಿ ಹಾನಿಯುಂಟು ಮಾಡಿವೆ. ಸ್ಥಳಾಂತರಗೊಂಡ ಕುಟುಂಬಗಳಿಗಾಗಿ ಪರಿಹಾರ ಶಿಬಿರಗಳನ್ನು ಸ್ಥಾಪಿಸಲಾಗಿದ್ದು, ಪೀಡಿತ ಪ್ರದೇಶಗಳಲ್ಲಿ ಶೋಧ ಕಾರ್ಯ ತೀವ್ರಗೊಳಿಸಲಾಗಿದೆ

# 440 ಕೋಟಿ ವೆಚ್ಚದ 2ನೇ ಬಾರಿಯ ಜಾತಿ ಸಮೀಕ್ಷೆ ಅನವಶ್ಯಕ

## ಮೈಸೂರಲ್ಲಿ ಸಂಸದ ಯದುವೀರ್ ಅಭಿಪ್ರಾಯ

- ಕಾಂತರಾಜು ವರದಿ ಕಸದ ಬುಟ್ಟಿಗೆಸೆದರು
- 180 ಕೋಟಿ ಜನರ ತೆರಿಗೆ ಹಣ ಪೋಲಾಯಿತು
- ಸಮೀಕ್ಷೆ ಮೂಲಕ ಹಿಂದೂ ಧರ್ಮದಲ್ಲಿ ಒಡಕಿನ ಯತ್ನ
- ತರಾತುರಿ ಸಮೀಕ್ಷೆಯಿಂದ ಕರಾರುವಕ್ಕಾದ ಮಾಹಿತಿ ಅಲಭ್ಯ

ಮೈಸೂರು, ಸೆ.21(ಬಿಎಲ್‌ಯು)– 440 ಕೋಟಿ ರೂ. ವೆಚ್ಚ ಮಾಡಿ ಈಗ ಎರಡನೇ ಬಾರಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಮಾಡುತ್ತಿರುವುದು ಅನವಶ್ಯಕ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ 180 ಕೋಟಿ ರೂಪಾಯಿ ವೆಚ್ಚ ಮಾಡಿ ನಡೆಸಿದ ಕಾಂತರಾಜು ವರದಿಯನ್ನು ಕಸದ ಬುಟ್ಟಿಗೆ ಹಾಕಿ, ಈಗ ಮತ್ತೊಮ್ಮೆ ಎರಡನೇ ಬಾರಿಗೆ ಸಮೀಕ್ಷೆ ನಡೆಸುವ ಅಗತ್ಯವೇನಿತ್ತು ಎಂದು ಪ್ರಶ್ನಿಸಿದರು.

ಕಾಂತರಾಜು ಆಯೋಗದ ಮೂಲ ವರದಿ ಕಳೆದು ಹೋಗಿದೆ ಎಂದು ಹೇಳಿದರು. ತರುವಾಯ ವರದಿಯ ದತ್ತಾಂಶ ಸೋರಿಕೆಯಾಯಿತು. ಆದರೆ, ಸರ್ಕಾರ ಮಾತ್ರ ಕಾಂತರಾಜು ವರದಿ ಬಿಡುಗಡೆ ಮಾಡಲಿಲ್ಲ. ಕಾಂಗ್ರೆಸ್ ಹೈಕಮಾಂಡ್ ಒತ್ತಡಕ್ಕೆ ಮಣಿದ ರಾಜ್ಯ ಸರ್ಕಾರ ಈಗ ಮತ್ತೊಮ್ಮೆ ಸಮೀಕ್ಷೆ ನಡೆಸುತ್ತಿದೆ. ಈ ಮೂಲಕ ಕಾಂಗ್ರೆಸ್ ಹೈಕಮಾಂಡ್ ರಾಜ್ಯ ಸರ್ಕಾರವನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡು ತನಗಿಷ್ಟ ಬಂದಂತೆ ಆಟವಾಡಿಸುತ್ತಿದೆ ಎಂದು ಆರೋಪಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು.

ಈಗ ಕಾಂಗ್ರೆಸ್ ಹೈಕಮಾಂಡ್ ಆಣತಿಯಂತೆ 440 ಕೋಟಿ ವೆಚ್ಚ ಮಾಡಿ ಸಮೀಕ್ಷೆ ನಡೆಸುತ್ತಿದೆ. ಮಧುಸೂದನ್ ನಾಯ್ಕ್ ನೇತೃತ್ವದ ಏಕ ಸದಸ್ಯ ಹಿಂದುಳಿದ ವರ್ಗದ ಆಯೋಗ ಈಗ ಸಮೀಕ್ಷೆ ನಡೆಸುತ್ತಿದೆ. ಆದರೆ ಅನಧಿಕೃತವಾಗಿರುವ ಹಲವು ಉಪ ಜಾತಿಗಳನ್ನು ಸೇರ್ಪಡೆ ಮಾಡಿ ಹಿಂದೂ ಧರ್ಮದಲ್ಲಿ ಒಡಕು ಮೂಡಿಸುವ ಷಡ್ಯಂತ್ರ ರೂಪಿಸಿದ್ದಾರೆ ಎಂದು ಆರೋಪಿಸಿದರು.

ಹಿಂದೂ ಧರ್ಮದ ವಿರುದ್ಧ ನಡೆಸುತ್ತಿರುವ ಈ ಸಂಚಿಗೆ ಕೆಲವು ಶಕ್ತಿಗಳು ಪ್ರೇರಣೆ ನೀಡುತ್ತಿವೆ. ಹಿಂದೂ ಧರ್ಮದಿಂದ ಕ್ರಿಶ್ಚಿಯನ್ ಸೇರಿದಂತೆ ಇತರೆ ಧರ್ಮಕ್ಕೆ ಮತಾಂತರಗೊಳ್ಳಲು ರಾಜ್ಯ ಕಾಂಗ್ರೆಸ್ ಸರ್ಕಾರವೇ ವೇದಿಕೆ ಸೃಷ್ಟಿಸಿ ಕೊಡುತ್ತಿದೆ ಎಂದು ಆಪಾದಿಸಿದರು.

ಕೇಂದ್ರ ಸರ್ಕಾರವೇ ಜನಗಣತಿ ಜೊತೆಗೆ ಜಾತಿಗಣತಿ ನಡೆಸುತ್ತಿದೆ. ಹೀಗಿರುವಾಗ ರಾಜ್ಯ ಸರ್ಕಾರ ಮತ್ತೊಂದು ಸಮೀಕ್ಷೆ ನಡೆಸುವ ಅಗತ್ಯವೇನಿತ್ತು ಎಂದ ಪ್ರಶ್ನಿಸಿದ ಯದುವೀರ್, ರಾಜ್ಯ ಸರ್ಕಾರ ಎಲ್ಲಾ ರಂಗದಲ್ಲೂ ವಿಫಲವಾಗಿದ್ದು, ಇದನ್ನು ಮರೆಮಾಚಲು ಜಾತಿಗಣತಿಯನ್ನು ಅಸ್ತ್ರವಾಗಿ ಬಳಸಿದೆ ಎಂದು ಸಂಸದ ಯದುವೀರ್ ಒಡೆಯರ್ ದೂರಿದರು.

ಸಮೀಕ್ಷೆ ಮಾಡುವವರಿಗೆ ಸೂಕ್ತ ತರಬೇತಿ ನೀಡುತ್ತಿಲ್ಲ. ದಸರಾ ರಜೆ ಮೇಲೆ ಜನರು ಹೊರ ಊರಿಗೆ ಹೋಗುವ ಸಂದರ್ಭದಲ್ಲಿ ಸಮೀಕ್ಷೆ ನಡೆಸಿದರೆ ಕರಾರುವಕ್ಕಾದ ಅಂಕಿ ಅಂಶಗಳ ಮಾಹಿತಿ ದೊರೆಯುವುದಿಲ್ಲ. ತರಾತುರಿಯಲ್ಲಿ ನಡೆಸುತ್ತಿರುವ ಈ ಸಮೀಕ್ಷೆಯಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಹೇಳಿದರು.

ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಮಾಧ್ಯಮ ಪ್ರಮುಖ ಮಹೇಶ್ ರಾಜೇ ಅರಸ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ಸಾಹಿತಿ ಬಾನು ಮುಷ್ತಾಕ್ ಅವರು ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಲಿ

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನಾಳೆ( ಸೋಮವಾರ) ನಡೆಯುವ ದಸರಾ ಉದ್ಘಾಟನಾ ಸಮಾರಂಭದಲ್ಲಿ ಬಾನು ಮುಷ್ತಾಕ್ ಅವರು ನಾಡದೇವತೆ ತಾಯಿ ಚಾಮುಂಡೇಶ್ವರಿ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡಿ, ದಸರಾಗೆ ಚಾಲನೆ ನೀಡಬೇಕು ಎಂದು ಸಂಸದ ಯದುವೀರ್ ಒಡೆಯರ್ ಆಗ್ರಹಿಸಿದರು.

ಹಿಂದೂ ಧರ್ಮಿಯರ ಧಾರ್ಮಿಕತೆ ಸಂಕೇತ ಅರಿಶಿನ ಮತ್ತು ಕುಂಕುಮದ ಬಗ್ಗೆ ವೈರುಧ್ಯ ಹೇಳಿಕೆ ನೀಡಿದ್ದ ಬಾನು ಮುಷ್ತಾಕ್ ಅವರು ಕನ್ನಡಾಂಬೆ ಭುವನೇಶ್ವರಿ ಪೂಜೆ ವಿರುದ್ಧ ಕೂಡ ಮಾತನಾಡಿದ್ದಾರೆ. ಆದರೆ ಈಗ ಆ ಮನಸ್ಥಿತಿ ಬಿಟ್ಟು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ ದಸರಾಗೆ ಚಾಲನೆ ನೀಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ನಾಳೆ ನಡೆಯುವ ದಸರಾ ಉದ್ಘಾಟನೆಯಲ್ಲಿ ನಾನು ಕೂಡ ಭಾಗವಹಿಸುತ್ತೇನೆ. ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸಲು ನಮ್ಮ ತೀವ್ರ ವಿರೋಧವಿತ್ತು. ಆದರೂ ಅವರಿಂದಲೇ ಉದ್ಘಾಟನೆ ಮಾಡಿಸಲು ರಾಜ್ಯ ಸರ್ಕಾರ ಮುಂದಾಗಿದೆ. ನಾಳೆ ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟಿಸುವ ಸಂದರ್ಭದಲ್ಲಿ ಬಾನು ಮುಷ್ತಾಕ್ ಅವರು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುತ್ತಾರೊ, ಇಲ್ಲವೊ ಎಂದು ಕಾದು ನೋಡುತ್ತೇವೆ. ಆ ನಂತರ ಮುಂದಿನ ಬೆಳವಣಿಗೆ ಬಗ್ಗೆ ಪ್ರತಿಕ್ರಿಯೆ ನೀಡುತ್ತೇವೆ ಎಂದರು.

## ಮನೆ ಮನೆ ಗೊಂಬೆ ಕೂರಿಸುವ ಸ್ಪರ್ಧೆಯ ಪೋಸ್ಟರ್ ಬಿಡುಗಡೆ



ಮನೆ ಮನೆ ಗೊಂಬೆ ಕೂರಿಸುವ ಸ್ಪರ್ಧೆಯ ಪೋಸ್ಟರ್ ಅನ್ನು ಸಂಸದ ಯದುವೀರ್ ಒಡೆಯರ್ ಬಿಡುಗಡೆಗೊಳಿಸಿದರು.

ಮೈಸೂರು,ಸೆ.21(ಎಂಕೆ)– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಶ್ರೀ ದುರ್ಗಾ ಫೌಂಡೇಶನ್ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ ಮನೆ ಮನೆ ಗೊಂಬೆ ಕೂರಿಸುವ ಸ್ಪರ್ಧೆಯ ಪೋಸ್ಟರ್ ಅನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು.

ಮೈಸೂರು ದಸರಾ ಇತಿಹಾಸ ಮತ್ತು ಐತಿಹಾಸಿಕ ಹಿನ್ನೆಲೆ ಒಳಗೊಂಡ ಗೊಂಬೆಗಳನ್ನು ಕೂರಿಸಿ 10 ವಿಜೇತರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನಲ್ಲಿ ಬಹುಮಾನ ಹಾಗೂ ಪ್ರಮಾಣಪತ್ರ ನೀಡಲಾಗುವುದು ಹಾಗೆಯೇ ಸ್ಪರ್ಧೆಯಲ್ಲಿ ಸ್ಪರ್ಧಿಸಿದ ಎಲ್ಲಾ ಸ್ಪರ್ಧಾಳುಗಳಿಗೆ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಲಾಗುವುದು. ಅಲಂಕೃತ ಬೊಂಬೆಗಳ 3 ನಿಮಿಷ ವಿಡಿಯೋ ತುಣುಕನ್ನು ಅ.2ರೊಳಗೆ ಮೊ.ನ. 8971389539ಗೆ ವಾಟ್ಸ್‌ಅಪ್ ಮೂಲಕ ಕಳಿಸುವಂತೆ ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಕೋರಿದ್ದಾರೆ. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಮುಖಂಡರಾದ ಮಹೇಶ್ ರಾಜ್ ಅರಸ್, ಕಾರ್ತಿಕ್ ಮರಿಯಪ್ಪ, ಪರೀಕ್ಷಿತ್ ರಾಜ್ ಮತ್ತಿತರರಿದ್ದರು.

## ಕೋರ್ಟ್ ಆದೇಶದಂತೆ ಅತಿಥಿ ಉಪನ್ಯಾಸಕರ ನೇಮಕಕ್ಕೆ ಮರಿತಿಬ್ಬೇಗೌಡರ ಆಗ್ರಹ



ಮೈಸೂರು, ಸೆ.21– ಪದವಿ ಕಾಲೇಜು ಅತಿಥಿ ಉಪನ್ಯಾಸಕರ ಸೇವೆ ಸಂಬಂಧ ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶದಂತೆ ಕ್ರಮ ವಹಿಸಬೇಕೆಂದು ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ. ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೇ.50ರಷ್ಟು ಸಹಾಯಕ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ಆದರೆ ಅತಿಥಿ ಉಪನ್ಯಾಸಕರ ನೇಮಕಾತಿ ಸಂಬಂಧ ಹೈಕೋರ್ಟ್‌ನಲ್ಲಿ ಹಲವಾರು ತಕರಾರುಗಳು ಸಲ್ಲಿಕೆ ಆಗಿರುವುದರಿಂದ ಆಗಸ್ಟ್ 10ರ ಈವರೆಗೆ ನೇಮಕಾತಿಯೇ ನಡೆಯದೆ 1, 3 ಮತ್ತು 5ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳೇ ಆಗಿರುವುದಿಲ್ಲ. ಮೈಸೂರು ವಿವಿ ಅಕ್ಟೋಬರ್ 24ರಿಂದ ಸೆಮಿಸ್ಟರ್ ಪರೀಕ್ಷೆಗಳ ವೇಳಾಪಟ್ಟಿ ಪ್ರಕಟಿಸಿರುವುದರಿಂದ ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ಆದ್ದರಿಂದ ಉನ್ನತ ಶಿಕ್ಷಣ ಸಚಿವರು ಕೂಡಲೇ ತಮ್ಮ ಇಲಾಖೆ ಆಯುಕ್ತರಿಗೆ ನಿರ್ದೇಶನ ನೀಡಿ, ರಾಜ್ಯ ಹೈಕೋರ್ಟ್‌ನ ಮಧ್ಯಂತರ ಆದೇಶದಂತೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

## ಎಸ್‌ಟಿಗೆ ಕುರುಬ ಸಮುದಾಯ ಸೇರ್ಪಡೆಗೆ ವಿರೋಧ; ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ ಬಹಿಷ್ಕರಿಸಿದ ಮುಖಂಡರು



ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯ ಮೈಸೂರು ಜಿಲ್ಲಾ ಮಟ್ಟದ ಪೂರ್ವಭಾವಿ ಸಭೆಯನ್ನು ನಾಯಕ ಸಮುದಾಯದ ಮುಖಂಡರು ಬಹಿಷ್ಕರಿಸಿದರು.

ಮೈಸೂರು,ಸೆ.21–ಜಿಲ್ಲಾಡಳಿತ ಕರೆದಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯ ಮೈಸೂರು ಜಿಲ್ಲಾ ಮಟ್ಟದ ಪೂರ್ವಭಾವಿ ಸಭೆಯನ್ನು ರಾಜ್ಯ ಸರ್ಕಾರವು ಎಸ್‌ಟಿ ಪಟ್ಟಿಗೆ ಕುರುಬ ಸಮುದಾಯ ಸೇರ್ಪಡೆಗೆ ಶಿಫಾರಸ್ಸು ಮಾಡಲು ಹೊರಟಿರುವುದನ್ನು ವಿರೋಧಿಸಿ ನಾಯಕ ಸಮುದಾಯದ ಮುಖಂಡರು ಬಹಿಷ್ಕರಿಸಿದರು.

ನಗರದ ಪಡುವಾರಹಳ್ಳಿಯಲ್ಲಿರುವ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಕಚೇರಿಯಲ್ಲಿ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಈಗಾಗಲೇ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಮುಂದಿರುವ ಈ ರಾಜ್ಯದ ಮುಖ್ಯಮಂತ್ರಿಗಳನ್ನೇ ಒಳಗೊಂಡ ಪ್ರಬಲ ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸಿದರೆ ಇತರೆ ವರ್ಗದ ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆ. ಈಗ ಶೇ.15 ಮೀಸಲು ಹೊಂದಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದು, ಅದರ ಬದಲಾಗಿ ರಾಜಕೀಯ ಹಿತಾಸಕ್ತಿಯ ಉದ್ದೇಶದಿಂದ ಶೇ.7ರಷ್ಟು ಮೀಸಲಾತಿ ಹೊಂದಿರುವ ಎಸ್‌ಟಿಗೆ ಸೇರಿಸಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸುವುದಾಗಿ ಸಭೆ ಬಹಿಷ್ಕರಿಸಿದವರು ತಿಳಿಸಿದ್ದಾರೆ.

ಅಪರ ಜಿಲ್ಲಾಧಿಕಾರಿಗಳು ಮನವಿ ಮಾಡಿದರೂ ಒಪ್ಪದ ಸಮುದಾಯದ ಮುಖಂಡರು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ನಮ್ಮ ಹಬ್ಬ, ನಾವು ಭಾಗವಹಿಸುತ್ತೇವೆ. ಆದರೆ ಸರಕಾರದ ಗಮನ ಸೆಳೆಯುವ ಉದ್ದೇಶದಿಂದ ಇಂದಿನ ಸಭೆಯನ್ನು ಬಹಿಷ್ಕರಿಸಿದ್ದು, ನಾಳೆ ಸಭೆ ಮಾಡಿದರೂ ನಾವು ಅದರಲ್ಲಿ ಭಾಗವಹಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಹಾಗಾಗಿ ಅಪರ ಜಿಲ್ಲಾಧಿಕಾರಿಗಳು ಸಭೆಯನ್ನು ನಾಳೆಗೆ ನಿಗದಿಪಡಿಸಿದರು.

ಮೈಸೂರು ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ, ನಾಯಕ ಜನಾಂಗದ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ, ಹುಣಸೂರು ಪ್ರಭಾಕರ್, ಮಹದೇವಸ್ವಾಮಿ, ಕಡಕೊಳ ಕುಮಾರಸ್ವಾಮಿ, ಟೆನ್ನಿಸ್ ಗೋಪಿ, ನಾರಾಯಣ ಲೋಲಪ್ಪ, ಕೃಷ್ಣ ಕುಮಾರ್ ನಾಯಕ, ಎಸ್ ತ್ಯಾಗರಾಜ್ ನಂದೀಶ್ ನಾಯಕ, ಮಧುವನ ಚಂದ್ರ, ಮದಕರಿ, ಬಾಲರಾಜ್, ಗುರು ವಿನಾಯಕ, ಉಮೇಶ್, ವಿನೋದ, ವೀರನಗೆರೆ ಶ್ರೀನಿವಾಸ ದೇವರಾಜ್, ಡಿ.ಪ್ರಕಾಶ್ ನಾಯಕ, ಅನಿಲ್, ಜಯಪುರ ಜವರನಾಯಕ ಮತ್ತಿತರರು ಉಪಸ್ಥಿತರಿದ್ದರು.

## ಮಾವುತರ ಪರಿವಾರಕ್ಕೆ ಬಾಗಿನ ಅರ್ಪಣೆ



ಮೈಸೂರು ಅರಮನೆ ಆವರಣದಲ್ಲಿ ಮಾವುತರು ಹಾಗೂ ಕಾವಾಡಿಗಳ ಕುಟುಂಬದ ಮಹಿಳೆಯರಿಗೆ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದಿಂದ ಬಾಗಿನ ನೀಡಲಾಯಿತು. ಈ ವೇಳೆ ಡಾ.ಬಸವರಾಜು ಜೆಟ್ಟಿಹುಂಡಿ, ಮೈಸೂರು ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಉಪಾಧ್ಯಕ್ಷ ವೈ.ಕೆ.ಮಂಜುನಾಥ, ಮೈಸೂರು ಕಾರಾಗೃಹ ಮಂಡಳಿ ಸದಸ್ಯ ಪವನ್ ಸಿದ್ದರಾಮ, ರವಿಕುಮಾರ್, ಮುಖಂಡರಾದ ಮಹೇಶ್, ಚೇತನ್ ಇದ್ದರು.

## ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಾಗಿ ಕಡಕೊಳ ಕುಮಾರಸ್ವಾಮಿ ನೇಮಕ



ಮೈಸೂರು,ಸೆ.21–ಕನ್ನಡಪರ ಹೋರಾಟಗಾರ ಕಡಕೊಳ ಕುಮಾರಸ್ವಾಮಿ ಅವರನ್ನು ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ಸರ್ಕಾರ ನೇಮಕ ಮಾಡಿದೆ. ರಾಜ್ಯದಲ್ಲಿ ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಖೇನ ಅನುಷ್ಠಾನಗೊಳಿಸಲು ಎಲ್ಲಾ ಜಿಲ್ಲೆಗಳು ಸೇರಿದಂತೆ 11 ನಗರಪಾಲಿಕೆಗಳಲ್ಲಿ ಕನ್ನಡ ಜಾಗೃತಿ ಸಮಿತಿ ರಚಿಸಿದ್ದು, ಮೈಸೂರು ಜಿಲ್ಲೆಯ ಸಮಿತಿಗೆ ಕಡಕೊಳ ಕುಮಾರಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ. ಇವರು ಕನ್ನಡಪರ ಹಾಗೂ ಸಾಮಾಜಿಕ ಹೋರಾಟಗಳಲ್ಲಿ ಸಕ್ರಿಯವಾಗಿದ್ದು, ಪ್ರಗತಿಪರ ಹೋರಾಟಗಳಲ್ಲೂ ಗುರುತಿಸಿಕೊಂಡಿದ್ದಾರೆ.





ಜಯದೇವ ಹೃದ್ರೋಗ ಸಂಸ್ಥೆಯ ನೂತನ ನಿರ್ದೇಶಕ ಡಾ.ದಿನೇಶ್ ಅವರನ್ನು ಕೇರ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಅಭಿನಂದಿಸಿದರು. ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ, ಗ್ರಾಪಂ ಮಾಜಿ ಉಪಾಧ್ಯಕ್ಷ ರಾಜು, ಮಾಜಿ ಸದಸ್ಯರಾದ ಶಿವಪ್ಪ, ಹುಚ್ಚಪ್ಪ, ಭೋಜರಾಜು, ಮೈಲಾರಿಗೌಡ, ಕೃಷ್ಣ, ಚಿಕ್ಕಣ್ಣ, ಮಾದೇವಸ್ವಾಮಿ, ಮಂಜಣ್ಣ ಇನ್ನಿತರರಿದ್ದರು.

## ಹಳೇ ಕಟ್ಟಡಗಳ ಮೇಲೆ ದಸರಾ ಮೆರವಣಿಗೆ ವೀಕ್ಷಣೆಗೆ ನಿರ್ಬಂಧ

**ಮೈಸೂರು:** ಅ.2ರಂದು ನಡೆಯಲಿರುವ ದಸರಾ ಮೆರವಣಿಗೆ ವೀಕ್ಷಣೆಗೆ ಸ್ಥಳೀಯ, ದೇಶ, ವಿದೇಶಗಳಿಂದ ಜನರು ಆಗಮಿಸುವ ಕಾರಣ ಅತಿಯಾದ ಜನದಟ್ಟಣೆ ನಿರೀಕ್ಷಿಸಲಾಗಿದೆ. ಈ ವೇಳೆಯಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿ ಜನರು ದಸರಾ ಮೆರವಣಿಗೆ ವೀಕ್ಷಿಸಲು ರಸ್ತೆಯ ಎರಡು ಬದಿಯಲ್ಲಿ ಇರುವ ಹಳೆಯ, ಶಿಥಿಲ ಕಟ್ಟಡಗಳ ಮೇಲೆ ನಿಂತು ಜನರು ದಸರಾ ಮೆರವಣಿಗೆ ವೀಕ್ಷಣೆಯನ್ನು ನಿರ್ಬಂಧಿಸಿ ಆದೇಶ ಹೊರಡಿಸಲಾಗುತ್ತದೆ ಎಂದು ಮೈಸೂರು ಮಹಾನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...




### ಇಂದಿನ ಪಂಚಾಂಗ

22.09.2025 ಸೋಮವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

### ಇಂದಿನ ದಸರಾ ಕಾರ್ಯಕ್ರಮಗಳು

■ **ನಾಡಹಬ್ಬ–2025, ಮೈಸೂರು ದಸರಾ:** ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ 2025ರ ದಸರಾ ಮಹೋತ್ಸವ ಉದ್ಘಾಟನೆ, ಬೆಳಗ್ಗೆ 10.10ರಿಂದ 10.40ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಉದ್ಘಾಟನೆ: ಸಾಹಿತಿಗಳು ಮತ್ತು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಬಾನು ಮುಷ್ತಾಕ್, ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು: ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲ ಸೀತಾರಾಮನ್, ಕೇಂದ್ರ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಆಹಾರ ಸಚಿವ ಪ್ರಹ್ಲಾದ್ ಜೋಶಿ, ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ,ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವೆ ಕು. ಶೋಭಾ ಕರಂದ್ಲಾಜೆ, ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ವಿಶೇಷ ಆಹ್ವಾನಿತರು: ಕಾನೂನು ಮತ್ತು ಸಂಸದೀಯ ಸಚಿವ ಹೆಚ್.ಕೆ. ಪಾಟೀಲ್, ಸಾರಿಗೆ ಸಚಿವ ರಾಮಲಿಂಗರೆಡ್ಡಿ, ಇಂಧನ ಸಚಿವ ಕೆ.ಜೆ. ಜಾರ್ಜ್, ಅರಣ್ಯ ಸಚಿವ ಈಶ್ವರ್ ಖಂಡ್ರೆ, ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್, ಅಧ್ಯಕ್ಷತೆ: ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ಸ್ಥಳ: ಚಾಮುಂಡಿಬೆಟ್ಟ, ಚಾಮುಂಡೇಶ್ವರಿ ದೇವಸ್ಥಾನದ ಸನ್ನಿಧಾನ.



■ **ಫಲಪುಷ್ಪ ಪ್ರದರ್ಶನ:** ಫಲಪುಷ್ಪ ಪ್ರದರ್ಶನ ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ಕುಪ್ಪಣ್ಣ ಪಾರ್ಕ್ (ನಿಶಾದ್‌ಬಾಗ್), ಮಧ್ಯಾಹ್ನ 12.30ಕ್ಕೆ.

■ **ಆಹಾರ ಮೇಳ:** ಆಹಾರ ಮೇಳ ಆರಂಭ, ಉದ್ಘಾಟನೆ: ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಮಧ್ಯಾಹ್ನ 1 ಗಂಟೆಗೆ.

■ **ದಸರಾ ಕುಸ್ತಿ ಪಂದ್ಯಾವಳಿ:** ದಸರಾ ಕುಸ್ತಿ ಪಂದ್ಯಾವಳಿ ಉದ್ಘಾಟನೆ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ಡಿ. ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಸಂಜೆ 4 ಗಂಟೆಗೆ.

■ **ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ:** ತೊಗಲು ಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ ಮತ್ತು ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆ ಪ್ರದರ್ಶನ, ಉದ್ಘಾಟನೆ ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ, ಸಂಜೆ 4 ಗಂಟೆಗೆ.

■ **ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ: ಪಂಡಿತ್ ಎಂ. ವೆಂಕಟೇಶ್‌ಕುಮಾರ್ ಅವರಿಗೆ ಪ್ರದಾನ, ಉಪಸ್ಥಿತಿ: ವಿಧಾನಪರಿಷತ್ ಸಭಾಪತಿ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಪರಿಷತ್ ಸಭಾಧ್ಯಕ್ಷ ಯು.ಟಿ. ಖಾದರ್ ಪರೀದ್, ಮುಖ್ಯ ಅತಿಥಿಗಳು: ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನೆ ಕೆ. ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ, ಅಧ್ಯಕ್ಷತೆ: ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಪದ್ಮಶ್ರೀ ಶ್ರೀ ಹರಿಹರನ್ ಮತ್ತು ತಂಡದಿಂದ ಗಝಲ್, ಶಾಸ್ತ್ರೀಯ ಫ್ಯೂಷನ್, ಸ್ಥಳ: ಅರಮನೆ ಆವರಣ, ಸಂಜೆ 5 ಗಂಟೆಗೆ.

■ **ಯೋಗ ದಸರಾ:** ಯೋಗ ದಸರಾ, ಯೋಗ ನೃತ್ಯ ನಾಟಕ 'ಪಂಚ ತತ್ವ ದರ್ಶನ' ಕಾರ್ಯಕ್ರಮ, ಉದ್ಘಾಟನೆ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸ್ಥಳ: ಅಲ್ಯೂಮಿನಿ ಅಸೋಸಿಯೇಷನ್ ಸಭಾಂಗಣ, ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯ, ಜೆ.ಕೆ. ಮೈದಾನ, ಸಂಜೆ 5 ಗಂಟೆಗೆ.

■ **ರಾಜ್ಯ ದಸರಾ ಸಿಎಂ ಕಪ್ ಕ್ರೀಡಾಕೂಟ:** ದಸರಾ ಮಹೋತ್ಸವದ ಅಂಗವಾಗಿ ರಾಜ್ಯ ದಸರಾ ಸಿಎಂ ಕಪ್ ಕ್ರೀಡಾಕೂಟ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಸಂಜೆ 5.30ಕ್ಕೆ.

■ **ವಿದ್ಯುತ್ ದೀಪಾಲಂಕಾರ:** ದಸರಾ ವಿದ್ಯುತ್ ದೀಪಾಲಂಕಾರ 'ಹಸಿರು ಚಪ್ಪರ' ಉದ್ಘಾಟನೆ, ಉದ್ಘಾಟನೆ: ಇಂಧನ ಸಚಿವ ಕೆ.ಜೆ.ಜಾರ್ಜ್, ಸ್ಥಳ: ಸಯ್ಯಾಜಿರಾವ್ ರಸ್ತೆ, ಕೆ.ಆರ್.ಆಸ್ಪತ್ರೆ ಬಳಿ, ಸಂಜೆ 6.30ಕ್ಕೆ.

■ **ವಸ್ತುಪ್ರದರ್ಶನ:** ದಸರಾ ಮಹೋತ್ಸವ ಅಂಗವಾಗಿ ವಸ್ತುಪ್ರದರ್ಶನ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ದೊಡ್ಡಕೆರೆ ಮೈದಾನ, ರಾತ್ರಿ 7.30ಕ್ಕೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10–ದಸರಾ ಚಿಂತನ, 6.15–ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀಮಾನ್ ಎಸ್., 6.50–ರೈತರಿಗೆ ಸಲಹೆ, 7.15 ಭಾವಗೀತೆಗಳು : ಅಜಯ್ ವಾರಿಯರ್, 8.30–ಕನ್ನಡ ಚಿತ್ರಗೀತೆಗಳು, 9.05–ಮಕ್ಕಳ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ, 9.30–ಮೈಸೂರು ಬ್ರಾಂಡ್ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.40–ಮೈಸೂರು ಸಂಸ್ಥಾನದ ಕಲಾ ಪರಂಪರ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ–ಎಲ್.ಅರ್ಚನಾ–ಹಾಡುಗಾರಿಕೆ, 10.30–ಹಿಂದಿ ಚಿತ್ರಗೀತೆಗಳು, 11.00–ಮಿಶ್ರಮಾಧುರ್ಯ, **ಮಧ್ಯಾಹ್ನ:** 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಸಂದರ್ಭದಲ್ಲಿ ವಿಶ್ವವ್ಯಾಪಿ ಆಯುರ್ವೇದ ಈ ಕುರಿತು ಮೈಸೂರಿನ ಆಯುರ್ವೇದ ಹಾಗೂ ಅಷ್ಟಾಂಗ ಯೋಗ ತಜ್ಞರು ಮತ್ತು ಆರೋಗ್ಯ ಭಾರತೀಯ ರಾಷ್ಟ್ರೀಯ ಕಾರ್ಯದರ್ಶಿ ಡಾ.ಮಂಜುನಾಥ ಟಿ.ಎನ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿ ಅಟಲ್ ಭೂಜಲ್ ಯೋಜನೆ ಬಗ್ಗೆ ಮಾತನಾಡುತ್ತಾರೆ ಪತ್ರಕರ್ತರಾದ ಎಂ.ವಿನೋದ್, 1.20–ಭಾವಗೀತೆಗಳು–ಕೆ.ಎಂ.ಕುಸುಮಾ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಮಧುರೈ ಮಣಿ ಅಯ್ಯರ್, ಹಾಡುಗಾರಿಕೆ, 4.00–ಮಹಿಳಾರಂಗ–ಪ್ರವಾಸಿ ದಸರಾ–ಮೈಸೂರು ಸೀಮೆಯ ದಸರಾ ಸಂಭ್ರಮ, ಪ್ರಸ್ತುತಿ: ಕೀರ್ತನಾ.ವಿ, ಸಹನಾ ಹಾಗೂ ನೇತ್ರಾ.ಕೆ, 4.45–ಹಿಂದಿ ಪಾಠ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ, ಕಬ್ಬಿನಲ್ಲಿ ಒಂಟಿ ಕಣ್ಣಿನ ಬೀಜೋತ್ಪಾದನೆ ಮತ್ತು ಅಂಗಾಂಶ ಕೃಷಿ ಕುರಿತು ಸಂವಾದ. ಭಾಗವಹಿಸುತ್ತಾರೆ: ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ಪಿ.ತಿಮ್ಮೇಗೌಡ ಹಾಗೂ ಸಹಾಯಕ ಪ್ರಾಧ್ಯಾಪಕರಾದ ಯುಸೂಫ್ ಅಬ್ಬಾಸ್, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದ ಬಾನುಲಿ ವರದಿ. 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ದಿಂಡಿಗಲ್.ಎಸ್.ಪಿ.ನಟರಾಜನ್–ವೇಣುವಾದನ, 10.00 ನಿನಾದ: ವೈಣಿಕ ವಾಗ್ಗೇಯ ವಾಹಿನಿ. 10.30 ಸವಿನೆನಪು

■ **ಶ್ರೀ ಸುಬ್ಬರಾಯ ದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ್ ಶ್ರೀ ಪ್ರಸನ್ನ, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ. ಬೆಳಗ್ಗೆ ಪಂಚಾಮೃತ ಅಭಿಷೇಕ, ವೇದ ಪಾರಾಯಣ, ಮಂಗಳಾರತಿ. ಸಂಜೆ: ಉತ್ಸವ, ಮಹಾಮಂಗಳಾರತಿ. ಸ್ಥಳ ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025. ಶ್ರೀ ಬ್ರಾಹ್ಮೀ (ಹಂಸ ವಾಹನಾಲಂಕಾರ), ಶ್ರೀ ಸೂಕ್ತ ಹೋಮ. ಸ್ಥಳ: ಅಭಿನವ ಶಂಕರಾಲಯ, ಪೋರ್ಟ್ ಮೊಹಲ್ಲಾ. ಬೆಳಗ್ಗೆಯಿಂದ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025. ಬೆಳಗ್ಗೆ 8 ಗಂಟೆಯಿಂದ ಸ್ವಸ್ತಿವಾಚನ, ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ದೇವತಾ ನಾಂದಿ, ಕಲಶ ಸ್ಥಾಪನೆ, ಪ್ರಧಾನ ಕಲಶ, ಉಪ ಕಲಶ ಶ್ರೀ ಬ್ರಾಹ್ಮಿ (ಹಂಸವಾಹಿನಿ) ಅಲಂಕಾರ. ಸ್ಥಳ: ದೇವಸ್ಥಾನದ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ. ಬೆಳಗ್ಗೆ 8.30ಕ್ಕೆ ಶ್ರೀ ಮಹಾಗಣಪತಿ ಪೂಜಾ, ಪುಣ್ಯಾಹ ವಾಚನ, ಮಹಾಸಂಕಲ್ಪ, ಅಂಕುರಾರ್ಪಣೆ, ನಾಂದಿ, ಕಲಶಸ್ಥಾಪನೆ, ಮಹಾಭಿಷೇಕ, ಶ್ರೀಶೈಲಪುತ್ರಿ, ಸುಂದರಕಾಂಡ ಪಾರಾಯಣ, ಸಪ್ತಶತಿ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ. ಸಂಜೆ 5.30ಕ್ಕೆ ಶ್ರೀಮಹಾ ಮೃತ್ಯುಂಜಯ ಹೋಮ, ಶ್ರೀ ಅಮಲ ನೀಲಕಂಠ, ಶ್ರೀಖಡ್ಗರಾವಣ, ಶ್ರೀ ಸಂತಾನ ಗೋಪಾಲಕೃಷ್ಣ, ಶ್ರೀ ದತ್ತಾತ್ರೇಯ, ಶ್ರೀ ಮಹಾಮೃತ್ಯುಂಜಯ, ಶ್ರೀ ಮೇಧಾದಕ್ಷಿಣ ಮೂರ್ತಿ, ಶ್ರೀ ಶಕ್ತಿ ಪಂಚಾಕ್ಷರಿ, ಶ್ರೀ ಶರಭೇಶ್ವರ, ಶ್ರೀ ವಟುಕ ಭೈರವ, ಶ್ರೀ ಹಯಗ್ರೀವ, ಶ್ರೀ ವೀರಭದ್ರ ಹಾಗೂ ಅಪಸ್ಮಾರ ನಿವರ್ತಕ, ದಕ್ಷಿಣಾಮೂರ್ತಿ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಅವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ (ಶ್ರೀ ಅವನೀ ಶೃಂಗೇರಿ ಮಠ, ಮೈಸೂರು ಶಾಖೆ):** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ–2025. ಪ್ರತಿಪತ್–ಶಾರದಾಂಬ ಅಲಂಕಾರ, ಬೆಳಗ್ಗೆ 9 ರಿಂದ ಶ್ರೀ ಮಹಾಗಣಪತಿ ಹೋಮ ಪುರಸ್ಸರ, ರುದ್ರಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ. ಸಂಜೆ 6.30ಕ್ಕೆ ರಾಗ ಸಂವರ್ಧಿನಿ ಮಹಿಳಾ ಸಂಘದಿಂದ ಭಜನಾ ಕಾರ್ಯಕ್ರಮ. ಸ್ಥಳ: ಮಠದ ಆವರಣ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ. ಬೊಜ್ಜು ನಿವಾರಣೆ, ಕುತ್ತಿಗೆ ನೋವು ಭುಜದ ನೋವು, ಸಂಬಂಧ ಶಿಬಿರ. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ ಬೆಳಗ್ಗೆ 9ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ. ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರ ಪೂಜೆ, ನವಾವರಣ ಪೂಜೆ, ವಿದುಷಿ ಗಾಯಿತ್ರಿ ವೆಂಕಟ ರಾಘವನ್ ಅವರಿಂದ ಕರ್ನಾಟಕ ಸಂಗೀತ ಗಾಯನ. ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ಗೌರಿ ಪೂಜೆ, ಹೋಮ, ಪೂರ್ಣಾಹುತಿ. ಸಂಜೆ 4 ಗಂಟೆಗೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ. ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ. ಸ್ಥಳ: ನಾದಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ. ಊಟಿ ರಸ್ತೆ.

■ **ವ್ಯವಸ್ಥಾಪಕರು:** ಮೈಸೂರು ಮನೆ–ಮನೆ ದಸರಾ ಬೊಂಬೆ ಪ್ರದರ್ಶನ–2025. ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ರಾಘವೇಂದ್ರ ಕೆ.ಎಸ್.ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ ಮಹದೇಶ್ವರ ನಗರ, ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭಸಂಸ್ಕಾರ, ಬಂಜೆತನ ಕುರಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗ 10 ಗಂಟೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗ 10 ಗಂಟೆಯಿಂದ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಬೆಳಗ್ಗೆಯಿಂದ ಶ್ರೀಲಕ್ಷ್ಮೀನರಸಿಂಹಸ್ವಾಮಿ, ಶ್ರೀ ಗಾಯಿತ್ರಿ ದೇವಿ, ಶ್ರೀ ಮಹಾಗಣಪತಿ ಮತ್ತು ಶ್ರೀ ಆಂಜನೇಯಸ್ವಾಮಿ ದೇವಾಲಯದಲ್ಲಿ ಶ್ರೀ ಗಾಯಿತ್ರಿದೇವಿ ವಿಶೇಷ ಪೂಜೆ, ದೇವಸ್ಥಾನದ ಶ್ರೀ ಶಂಕರ ಪ್ರಾರ್ಥನಾ ಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ. ದ್ವಂದ್ವ ಗಾಯನ–ವಿದುಷಿ ಎಂ.ಎಸ್.ಕೀರ್ತನಾ ಮತ್ತು ವಿದುಷಿ ಎಂ.ಎಸ್.ಪ್ರಾರ್ಥನಾ ಅವರಿಂದ.

■ **ಭಾರತೀಯ ಜೀವವಿಮಾ ಪ್ರತಿನಿಧಿಗಳ ಪತ್ತಿನ ಸಹಕಾರ ಸಂಘ:** ಸಂಘದ 22ನೇ ವಾರ್ಷಿಕ ಮಹಾಸಭೆ. ಸ್ಥಳ: ಸರ್ವ ಸಮಾಜ ಚಾರಿಟಬಲ್ ಟ್ರಸ್ಟ್, ಗೋಕುಲಂ, ಬೆಳಗ್ಗೆ 10.30ರಿಂದ.

■ **ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್:** ಬಾಲೋದ್ಯಾನ ದಸರಾ, ದಸರಾ ಗೊಂಬೆಗಳ ಪ್ರದರ್ಶನ–2025. ಸ್ಥಳ: ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್, ಜಯನಗರ. ಬೆಳಗ್ಗೆ 11.30ರಿಂದ.

# ಮೈಸೂರು ದಸರಾ ಮಹೋತ್ಸವ-2025

## ಪಾರಂಪರಿಕ ಶೈಲಿಯಲ್ಲಿ ಅರಮನೆಯ ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆ

●ಬ್ಯಾಕ್‌ಡ್ರಾಪ್‌ನಲ್ಲಿ ಡಿಜಿಟಲ್ ಪರದೆ ●ಮೈಸೂರು ರಾಜರು, ಸಿಎಂ, ಡಿಸಿಎಂ ಭಾವಚಿತ್ರ ಅನಾವರಣ ●ಬೆಳಕಿನ ಚಿತ್ತಾರ ಮೂಡಿಸುವ ವಿದ್ಯುತ್ ಬೆಳಕಿನ ಸೊಬಗು



ಮೈಸೂರು ಅರಮನೆ ಆವರಣದಲ್ಲಿ ಸೋಮವಾರದಿಂದ ಆರಂಭವಾಗುವ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನಕ್ಕೆ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣವಾಗುತ್ತಿರುವ ವೇದಿಕೆ.

ಮೈಸೂರು, ಸೆ.21(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಅರಮನೆಯ ಸಾಂಸ್ಕೃತಿಕ ಕಾರ್ಯಕ್ರಮ ಕೂಡ ಒಂದು. ಸಾಂಪ್ರದಾಯಿಕ ಸಂಗೀತಾಸಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುವ ಸಾಂಸ್ಕೃತಿ ಕಾರ್ಯಕ್ರಮದ ವೇದಿಕೆಯನ್ನು ಪಾರಂಪರಿಕ ಶೈಲಿಯಲ್ಲಿ ಅತ್ಯಾಕರ್ಷಕವಾಗಿ ನಿರ್ಮಾಣ ಮಾಡಲಾಗಿದೆ. ನಾಳೆ(ಸೋಮವಾರ) ಸಂಜೆಯಿಂದ ಆರಂಭವಾಗುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವೇದಿಕೆ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ.

ಮೈಸೂರು ದಸರಾದಲ್ಲಿ ರಾಜರ ಕಾಲದ ವೈಭವ, ಸಾಂಸ್ಕೃತಿಕ ಪರಂಪರೆ, ಐತಿಹಾಸಿಕ ಸೊಬಗು, ಪೌರಾಣಿಕ ಹಿನ್ನೆಲೆ ಹಾಗೂ ಪಾರುಪರಿಕತೆ ಅನಾವರಣಗೊಳ್ಳುತ್ತದೆ. 11 ದಿನಗಳ ಕಾಲ ನಡೆಯುವ ದಸರಾದ ಹತ್ತಾರು ಕಾರ್ಯಕ್ರಮಗಳಲ್ಲಿ ಆಧುನಿಕ ಹಾಗೂ ಐತಿಹಾಸಿಕತೆ ಮೇಳೈಸಲಿದೆ.

ಯುವ ದಸರಾದಲ್ಲಿ ಪಾಶ್ಚಾತ್ಯ ಹಾಗೂ ಆಧುನಿಕ ಸಂಗೀತ ರಸದೌತಣವನ್ನು ಉಣಬಡಿಸಿದರೆ, ಮೈಸೂರು ಅರಮನೆಯ ವೇದಿಕೆಯಲ್ಲಿ ಪ್ರದರ್ಶನಗೊಳ್ಳುವ ಸಾಂಸ್ಕೃತಿಕ ಕಾರ್ಯಕ್ರಮ ಸಂಪ್ರದಾಯಸ್ಥರನ್ನು ಕೈಬೀಸಿ ಕರೆಯುತ್ತದೆ.

ಮೈಸೂರು ಅರಮನೆಯ ಪಾರಂಪರಿಕತೆಯ ಸೊಬಗನ್ನು ಹೋಲುವಂತೆ ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಯನ್ನು ನಿರ್ಮಾಣ ಮಾಡಲಾಗಿದೆ. ಈ ಮೊದಲು ವೇದಿಕೆಯ ಬ್ಯಾಕ್‌ಡ್ರಾಪ್‌ನ ಬ್ಯಾನರ್‌ನಲ್ಲಿ ಅರಮನೆಯ ಸೊಬಗನ್ನು ಪ್ರದರ್ಶಿಸಲಾಗುತ್ತಿತ್ತು.

ಆದರೆ ಈ ಬಾರಿ ವೇದಿಕೆಯ ಬ್ಯಾಕ್ ಡ್ರಾಪ್‌ನಲ್ಲಿ ಅತ್ಯಾಧುನಿಕ ಡಿಜಿಟಲ್ ಪರದೆಯನ್ನು ಅಳವಡಿಸಲಾಗಿದೆ. ಅಕ್ಕಪಕ್ಕದಲ್ಲಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜ ಒಡೆಯರ್ ಅವರ ಭಾವಚಿತ್ರವನ್ನು ಪ್ರದರ್ಶಿಸಲಾಗಿದೆ. ಅಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರ ಭಾವಚಿತ್ರವನ್ನು ಅಕ್ಕಪಕ್ಕ ಪ್ರದರ್ಶಿಸಲಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಯಲ್ಲಿ ವರ್ಣರಂಜಿತ ವಿದ್ಯುತ್ ಬೆಳಕಿನ ಚಿತ್ತಾರ ಮೂಡಿಸಲಾಗುತ್ತದೆ. ವೇದಿಕೆಯಲ್ಲಿ ವಿದ್ಯುತ್ ಬೆಳಕನ್ನು ಬೆಳಗಲು ಕಂಪ್ಯೂಟರ್ ಮೂಲಕ ನಿಯಂತ್ರಿಸುವ ಆಧುನಿಕ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಅಲ್ಲದೆ ಸಾಂಸ್ಕೃತಿ ಕಾರ್ಯಕ್ರಮಗಳ ಸಂಗೀತ ಡೆಕ್‌ಗಳ ಮೂಲಕ ಜನರ ಕಿವಿಗೆ ಇಂಪಾಗಿ ಕೇಳಿಸುವಂತಾಗಲು ಜೆಬಿಎಲ್ ವಿಟಿಎಸ್ ಸೌಂಡ್ ಸಿಸ್ಟಂ ಅಳವಡಿಸಲಾಗಿದೆ. ಆಧುನಿಕ ತಂತ್ರಜ್ಞಾನ ಆಧಾರಿತ ಸೌಂಡ್ ಸಿಸ್ಟಂ ಈ ಬಾರಿಯ ಅರಮನೆ ಸಾಂಸ್ಕೃತಿಕ ಕಾರ್ಯಕ್ರಮದ ವೈಭವವನ್ನು ಇಮ್ಮಡಿಗೊಳಿಸಲಿದೆ.

ಈ ಮೊದಲು ಅರಮನೆಯ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಣೆಗೆ ಸೀಮಿತ ಆಸನಗಳನ್ನು ಹಾಕಲಾಗುತ್ತಿತ್ತು. ಇದರಿಂದ ಹಿಂದೆ ಇರುವ ಜನರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ವೀಕ್ಷಣೆ ಸಾಧ್ಯವಾಗುತ್ತಿರಲಿಲ್ಲ. ಆದ ಕಾರಣ ಈ ಬಾರಿ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಣೆಗೆ ಹಂತಗಳನ್ನು ನಿರ್ಮಿಸಿದ್ದು, ಸಾವಿರಾರು ಆಸನಗಳನ್ನು ಹಾಕಲಾಗಿದೆ. ಈ ಮೂಲಕ ದಸರಾ ಸಂಗೀತದ ರಸದೌತಣವನ್ನು ಉಣಬಡಿಸಲಾಗುತ್ತಿದೆ.

ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಯಲ್ಲಿ ರೇಡಿಯಂ ರೇಖೆಗಳನ್ನು ಅಳವಡಿಸಲಾಗಿದೆ. ಒಟ್ಟಾರೆ ಈ ಬಾರಿಯ ದಸರಾದಲ್ಲಿ ಪಾರಂಪರಿಕತೆಯ ಜೊತೆಗೆ ಆಧುನಿಕತೆಯನ್ನು ಮಿಳಿತಗೊಳಿಸಲಾಗಿದೆ.

### ಮೈಸೂರು ಅರಮನೆಗೆ ಹರಿದು ಬರುತ್ತಿರುವ ಪ್ರವಾಸಿಗರ ಸಾಗರ

ವಿಶ್ವ ವಿಖ್ಯಾತ ಮೈಸೂರು ದಸರಾ ದೇಶ-ವಿದೇಶದ ಲಕ್ಷಾಂತರ ಜನರನ್ನು ಕೈ ಬೀಸಿ ಕರೆಯುತ್ತದೆ. ದಸರಾ ಉದ್ಘಾಟನೆಗೆ ಕ್ಷಣಗಣನೆ ಆರಂಭವಾಗಿದ್ದು, ಈಗಾಗಲೇ ಮೈಸೂರಿಗೆ ಪ್ರವಾಸಿಗರು ಲಗ್ಗೆ ಇಟ್ಟಿದ್ದಾರೆ.

ಮೈಸೂರು ಅರಮನೆಯಲ್ಲಿ ಸಾಮಾನ್ಯ ದಿನಕ್ಕಿಂತ ಹೆಚ್ಚಿನ ಸಂಖ್ಯೆಯ ಪ್ರವಾಸಿಗರಿದ್ದರು. ಅರಮನೆಯ ವೈಭವವನ್ನು ನೋಡಲು ಪ್ರವಾಸಿಗರ ಸಾಗರ ಹರಿದು ಬರುತ್ತಿತ್ತು.

ನಾಳೆಯಿಂದ ಮೈಸೂರಿನಲ್ಲಿ ಹತ್ತಾರು ದಸರಾ ಕಾರ್ಯಕ್ರಮಗಳು ನಡೆಯುತ್ತದೆ. ಜೊತೆಗೆ ಸ್ವರ್ಗವೇ ಧರೆಗಿಳಿದು ಬಂದಂತೆ ವಿದ್ಯುತ್ ದೀಪಗಳಿಂದ ಮೈಸೂರು ಕಂಗೊಳಿಸಲಿದೆ. ಈ ಅದ್ಭುತವನ್ನು ಕಣ್ತುಂಬಿಕೊಳ್ಳಲು ಈಗಲೇ ಪ್ರವಾಸಿಗರು ಮೈಸೂರಿಗೆ ಆಗಮಿಸಿದ್ದಾರೆ.

## ನಾಳೆಯಿಂದ ನಾಲ್ಕು ದಿನ ಮಹಿಳಾ ದಸರಾ ಕಾರ್ಯಕ್ರಮ

ಮೈಸೂರು,ಸೆ.21– ನಾಡಹಬ್ಬ ಮೈಸೂರು ದಸರಾ ಮಹೋತ್ಸವ –2025 ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿಯ ವತಿಯಿಂದ ಮಹಿಳಾ ದಸರಾ–2025 ಅನ್ನು ಸೆ.23ರಿಂದ 26ರವರೆಗೆ ಜೀವಣ್ಣರಾಯನ ಕಟ್ಟೆ ಮೈದಾನದ(ಜೆ.ಕೆ.ಗ್ರೌಂಡ್)ನಲ್ಲಿ ಹಮ್ಮಿಕೊಳ್ಳಲಾಗಿದೆ.

ಸೆಪ್ಟೆಂಬರ್ 23 ರಂದು ಬೆಳಗ್ಗೆ 7.30 ರಿಂದ 9.30 ಗಂಟೆಯವರೆಗೆ ಅಂಬಾವಿಲಾಸ ಅರಮನೆಯ ಮುಂಭಾಗ ರಂಗೋಲಿ ಚಿತ್ತಾರ– ಅಂಬಾವಿಲಾಸ ಅರಮನೆ ಮುಂಭಾಗದಲ್ಲಿ ಸಂಪ್ರದಾಯದಂತೆ ರಂಗೋಲಿ ಚಿತ್ತಾರ ಸ್ಪರ್ಧೆ ಏರ್ಪಡಿಸಿದ್ದು, ರಾಜ್ಯದ ವಿವಿಧ ಭಾಗಗಳಿಂದ ಮಹಿಳೆಯರು ಭಾಗವಹಿಸಬಹುದಾಗಿದೆ. ನಂತರ ಜೆ.ಕೆ ಮೈದಾನದಲ್ಲಿ 10 ರಿಂದ 11 ಗಂಟೆಯವರೆಗೆ ಮಹಿಳಾ ದಸರಾ ಕಾರ್ಯಕ್ರಮವನ್ನು ಉದ್ಘಾಟಿಸಲು ಬರುವ ಮುಖ್ಯ ಅತಿಥಿಗಳನ್ನು ವೇದಿಕೆಗೆ ಬರಮಾಡಿಕೊಳ್ಳಲು ಡೊಳ್ಳು ಕುಣಿತ/ ಕಂಸಾಳೆ ನೃತ್ಯ ಕಲಾವಿದರಿಂದ ಸ್ವಾಗತ, 11 ರಿಂದ 11.15 ಗಂಟೆಯವರೆಗೆ ಮಹಿಳಾ ದಸರಾ ಉದ್ಘಾಟನಾ ಕಾರ್ಯಕ್ರಮ ದಲ್ಲಿ ನಾಡಗೀತೆ, 11.15 ರಿಂದ 12.30 ಗಂಟೆಯವರೆಗೆ ಮಹಿಳಾ ದಸರಾ ಉದ್ಘಾಟನಾ ಕಾರ್ಯಕ್ರಮ, 12.30 ರಿಂದ 1 ಗಂಟೆಯವರೆಗೆ ಕುಚುಪುಡಿ ನೃತ್ಯ ಕಾರ್ಯಕ್ರಮ, 1ರಿಂದ 1.30 ಗಂಟೆಯವರೆಗೆ "ಬದಲಾದ ಬದುಕು"– ಪಂಚ ಗ್ಯಾರಂಟಿ ಬಗ್ಗೆ ಸ್ಕಿಟ್ ಪ್ರದರ್ಶನ. ನಂತರ 2.30 ರಿಂದ 3 ಗಂಟೆಯವರೆಗೆ ಭರತನಾಟ್ಯ ಕಾರ್ಯಕ್ರಮ. 3ರಿಂದ 4.30 ಗಂಟೆಯವರೆಗೆ ಸಮೂಹ ನೃತ್ಯ/ಸಾಂಸ್ಕೃತಿಕ ಕಾರ್ಯಕ್ರಮಗಳು. 4.30 ರಿಂದ 5.30 ಗಂಟೆಯವರೆಗೆ ಹೂ ಕಟ್ಟುವ ಸ್ಪರ್ಧೆ, ಒಲೆರಹಿತ ಅಡುಗೆ ಸ್ಪರ್ಧೆ, ಸೋಬಾನೆ ಪದ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಸೆಪ್ಟೆಂಬರ್ 24 ರಂದು ಜೆಕೆ ಮೈದಾನದಲ್ಲಿ 10 ರಿಂದ 10.30 ಗಂಟೆಯವರೆಗೆ ಮಹಿಳೆಯರಿಗೆ ರಾಗಿ ಬೀಸುವ ಸ್ಪರ್ಧೆ. 10.30 ರಿಂದ 11 ಗಂಟೆಯವರೆಗೆ ಮಹಿಳೆ ಮತ್ತು ಸ್ವಾವಲಂಬನೆ ವಿಷಯದ ಕುರಿತು ಮಹಿಳೆಯರೊಂದಿಗೆ ಸಂವಾದ ಕಾರ್ಯಕ್ರಮ–ಡಾ ಪುಷ್ಪ ಅಮರ್‌ನಾಥ್, ಉಪಾಧ್ಯಕ್ಷರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ಮೈಸೂರು ವಿಭಾಗದವರೊಂದಿಗೆ. 11ರಿಂದ 11.30 ಗಂಟೆಯವರೆಗೆ "ನವ ಮಾಧ್ಯಮಗಳು ಮತ್ತು ಮಹಿಳೆಯರು ಕುರಿತು ಸಂದೇಶ. 11.30 ರಿಂದ 12 ಗಂಟೆಯವರೆಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ. 12 ರಿಂದ 12.30 ಗಂಟೆಯವರೆಗೆ ಮಹಿಳೆಯರ ಫ್ಯಾಷನ್ ಶೋ–ಸಾಂಪ್ರದಾಯಿಕ ಉಡುಗೆ ತೊಡುಗೆ. 12.30 ರಿಂದ 1 ಗಂಟೆಯ ಸಾಮಾಜಿಕ ಜಾಲತಾಣ ಹಾಗೂ ಸೈಬರ್ ಅಪರಾಧಗಳ ಬಗ್ಗೆ ಕಿರುನಾಟಕ. 1 ರಿಂದ 1.30 ಗಂಟೆಯವರೆಗೆ ಟಿಬೇಟಿಯನ್ ಸಾಂಸ್ಕೃತಿಕ ನೃತ್ಯ ನಂತರ 2.30 ರಿಂದ 3.30 ಗಂಟೆಯವರೆಗೆ ಮೆಮೊರಿ ಟೆಸ್ಟ್ ಗೇಮ್, ಲಗೋರಿ, ಹಗ್ಗ ಜಗ್ಗಾಟ ಸ್ಪರ್ಧೆ, 3.30 ರಿಂದ 4.30 ಗಂಟೆಯವರೆಗೆ ಮಹಿಳೆಯರಿಗೆ ಜಾನಪದ ನೃತ್ಯ ಸ್ಪರ್ಧೆ. 4.30 ರಿಂದ 5.30 ಗಂಟೆಯವರೆಗೆ ಸಮೂಹ ನೃತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಸೆಪ್ಟೆಂಬರ್ 25 ರಂದು ಬೆಳಿಗ್ಗೆ 10 ರಿಂದ 11.30 ಗಂಟೆಯವರೆಗೆ ಕೋಟೆ ಆಂಜನೇಯ ದೇವಸ್ಥಾನ ಅರಮನೆಯಿಂದ ಮಹಿಳೆಯರಿಂದ ಮೈಸೂರು ಪರಂಪರೆ ಬಿಂಬಿಸುವ ವಾಕಥಾನ್ (ಮೈಸೂರು ಸಿಲ್ಕ್ ಸೀರೆ ಮತ್ತು ಮೈಸೂರು ಮಲ್ಲಿಗೆ ಧರಿಸಿ) ಏರ್ಪಡಿಸಲಾಗಿದ್ದು, ಜಾಥಾ ಸಾಗುವ ಮಾರ್ಗ– ಕೋಟೆ ಆಂಜನೇಯ ದೇವಸ್ಥಾನ ಅರಮನೆ ಮುಂಭಾಗ–ಕೆ.ಆರ್ ಸರ್ಕಲ್–ಸಯ್ಯಾಜಿರಾವ್ ರಸ್ತೆ–ಧನ್ವಂತರಿ ರಸ್ತೆ ಮೂಲಕ ಜೆ.ಕೆ.ಮೈದಾನದವರೆಗೆ ತಲುಪಲಿದೆ. ನಂತರ ಜೆ.ಕೆ ಮೈದಾನದಲ್ಲಿ 11.30 ರಿಂದ 12 ಗಂಟೆಯವರೆಗೆ ಮಹಿಳೆಯರು ಸ್ವಯಂ ರಕ್ಷಣೆಗೆ ಕರಾಟೆ ಪ್ರದರ್ಶನ. 12 ರಿಂದ 12.30 ಗಂಟೆಯವರೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕುರಿತು ಸಂದೇಶ 12.30 ರಿಂದ 1.30 ಗಂಟೆಯವರೆಗೆ ಸಮೂಹ ನೃತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ ನಂತರ 2.30 ರಿಂದ 3.30 ಗಂಟೆಯವರೆಗೆ ಪೌರಾಣಿಕ ಯಕ್ಷಗಾನ ಕಾರ್ಯಕ್ರಮ. 3.30 ರಿಂದ 4 ಗಂಟೆಯವರೆಗೆ ಹಾಸ್ಯ ಕಾರ್ಯಕ್ರಮ 4ರಿಂದ 4.30 ಗಂಟೆಯವರೆಗೆ ಬುಡಕಟ್ಟು ಮಹಿಳೆಯರಿಂದ ನೃತ್ಯ 4.30 ರಿಂದ 5 ಗಂಟೆಯವರೆಗೆ ವಿಕಲಚೇತನ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಸೆಪ್ಟೆಂಬರ್ 26 ರಂದು ಜೆ.ಕೆ ಮೈದಾನದಲ್ಲಿ ಬೆಳಗ್ಗೆ 10.00 ರಿಂದ 10.30 ಗಂಟೆಯವರೆಗೆ ನೃತ್ಯ ಕಾರ್ಯಕ್ರಮ. 10.30 ರಿಂದ 11.30 ಗಂಟೆಯವರೆಗೆ ಆಟೋಟ ಸ್ಪರ್ಧೆ – ಹಿರಿಯ ಮಹಿಳಾ ನಾಗರಿಕರಿಗೆ – ಬಾಲ್ ಇನ್ ದ ಬಕೆಟ್. ಹಿರಿಯ ನಾಗರಿಕರಿಗೆ– ವಾಕಿಂಗ್(100 ಮೀಟರ್) ಆಯೋಜಿಸಲಾಗಿದೆ 11.30 ರಿಂದ 12.30 ಗಂಟೆಯವರೆಗೆ ಲಿಂಗತ್ವ ಅಲ್ಪಸಂಖ್ಯಾತರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು. 12.30 ರಿಂದ 1 ಗಂಟೆಯವರೆಗೆ ಮಹಿಳೆಯರಿಂದ ಕೊಡವ ನೃತ್ಯ ಕಾರ್ಯಕ್ರಮ ನಂತರ 2 ರಿಂದ 3 ಗಂಟೆಯವರೆಗೆ ಸಮೂಹ ನೃತ್ಯ ಹಾಗೂ ಸಾಂಸ್ಕೃತಿಕ ಕಾರ್ಯ ಕ್ರಮಗಳು. 3ರಿಂದ 5 ಗಂಟೆಯವರೆಗೆ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಸಮಾರೋಪ ಸಮಾರಂಭ ಏರ್ಪಡಿಸಲಾಗಿದೆ.

### ಇಂದಿನ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು

ಮೈಸೂರು,ಸೆ.21(ಜಿಎ)–ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ದಸರಾ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಮೈಸೂರಿನ ಅರಮನೆ ಆವರಣ, ಜನ್ಮೋಹನ ಅರಮನೆ, ಕಲಾಮಂದಿರ, ಕಿರುರಂಗ ಮಂದಿರ, ನಾದಬ್ರಹ್ಮ ಸಂಗೀತ ಸಭಾ, ಗಾನಭಾರತಿ, ಪುರಭವನ, ರಮಾಗೋವಿಂದ ರಂಗಮಂದಿರ, ಚಿಕ್ಕಗಡಿಯಾರ, ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದ ಆವರಣ ಸೇರಿದಂತೆ 10 ವೇದಿಕೆಗಳಲ್ಲಿ ನಾಡಿನ ಜಾನಪದ, ಸುಗಮ ಸಂಗೀತ, ನೃತ್ಯ ಪ್ರಕಾರ, ಶಾಸ್ತ್ರೀಯ ಸಂಗೀತ ಸೇರಿದಂತೆ ವಿವಿಧ ಕಲಾ ಪ್ರಕಾರಗಳ ಮೂಲಕ ನಾಡಿ ಸಾಂಸ್ಕೃತಿಕ ವೈಭವ ಮೇಳೈಸಲಿದೆ.

#### ಸೆ.22ರ ಸಾಂಸ್ಕೃತಿಕ ಕಾರ್ಯಕ್ರಮಗಳು

**ಅರಮನೆ ಆವರಣ**

- ಮಧ್ಯಾಹ್ನ 3.30ಕ್ಕೆ ಮಲೆಮಹದೇಶ್ವರ ಬೀಸು ಕಂಸಾಳೆ ಜಾನಪದ ತಂಡದಿಂದ ಕಂಸಾಳೆ ಪ್ರದರ್ಶನ
- ಸಂಜೆ 4.00ಕ್ಕೆ ಉಡಿಗಾಲ ಮಹದೇವಪ್ಪ, ಮಲ್ಲೇಶಯ್ಯ ತಂಡದಿಂದ ನಂದಿಧ್ವಜ ಮತ್ತು ನೀಲಕಂಠ ತಂಡದಿಂದ ವೀರಭದ್ರ ಕುಣಿತ
- ಸಂಜೆ 4.30ಕ್ಕೆ ಎನ್.ಎಂ.ಗೋಪಿ ತಂಡದಿಂದ ಮಂಗಳವಾದ್ಯ
- ಸಂಜೆ 5.00ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ, ಸುಮಂತ್ ವಸಿಷ್ಠ ತಂಡದಿಂದ ಆಸ್ಥಾನ ಗೀತೆ ಗಾಯನ
- ರಾತ್ರಿ 7.00ಕ್ಕೆ ಹರಿಹರನ್ ತಂಡದಿಂದ ಗಜಲ್, ಶಾಸ್ತ್ರೀಯ ಫ್ಯೂಷನ್

**ಜಗನ್ಮೋಹನ ಅರಮನೆ**

- ಸಂಜೆ 4.00ಕ್ಕೆ ಹುಣಸೂರು ಡಾ.ಬಿ.ಆರ್.ಅಂಬೇಡ್ಕರ್ ನಗಾರಿ ಸಾಂಸ್ಕೃತಿಕ ಕಲಾ ಸಂಘದಿಂದ ನಗಾರಿ
- ಸಂಜೆ 4.30ಕ್ಕೆ ಜವರನಾಯಕ ತಂಡದಿಂದ ಸುಗಮ ಸಂಗೀತ
- ಸಂಜೆ 5.30ಕ್ಕೆ ಪಂಡಿತ್ ಸಾತ್‌ಲಿಂಗಪ್ಪ ದೇಸಾಯಿ ತಂಡದಿಂದ ತಬಲವಾದ್ಯ ತರಂಗ
- ಸಂಜೆ 6.30ಕ್ಕೆ ವಿದುಷಿ ಸೌಮ್ಯ ನಂಬಿಸನ್ ತಂಡದಿಂದ ಭರತನಾಟ್ಯ ಪ್ರದರ್ಶನ
- ರಾತ್ರಿ 7.30ಕ್ಕೆ ನಾಗರತ್ನ ತಂಡದಿಂದ ಸುಗಮ ಸಂಗೀತ
- ರಾತ್ರಿ 8.30ಕ್ಕೆ ಸೃಷ್ಟಿ ಅಭಿನಯ ಕಲಾವಿದರ ಕೇಂದ್ರದಿಂದ ಅಬ್ದುತ ರಾಮಾಯಣ ನೃತ್ಯ ರೂಪ

**ಕಲಾಮಂದಿರ**

- ಸಂಜೆ 5.00ಕ್ಕೆ ರಾಧಮಣಿ ತಂಡದಿಂದ ಕಂಸಾಳೆ ನೃತ್ಯ
- ಸಂಜೆ 5.30ಕ್ಕೆ ಡಾ.ಕುಮಾರ ಕಣವಿ ಮತ್ತು ನಾದಶ್ರೀ ತಂಡದಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ
- ಸಂಜೆ 6.30ಕ್ಕೆ ಡಾ.ಗುರುಬಸಪ್ಪ ಬಿ ಮಹಾಮನೆ ತಂಡದಿಂದ ವಾದ್ಯ ಸಂಗೀತ
- ರಾತ್ರಿ 7.30ಕ್ಕೆ ವಿದುಷಿ ಎನ್.ಎಸ್.ಲಕ್ಷ್ಮಿ ಭರತನಾಟ್ಯ ಪ್ರದರ್ಶನ
- ರಾತ್ರಿ 8.30ಕ್ಕೆ ಯಾದವೇಂದ್ರ ಪೂಜಾರಿ ತಂಡದಿಂದ ಸುಗಮ ಸಂಗೀತ

**ಕಿರುರಂಗಮಂದಿರ**

- ಸಂಜೆ 4.45ಕ್ಕೆ ಶಿಲ್ಪಾ ತಂಡದಿಂದ ವೀರಗಾಸೆ
- ಸಂಜೆ 5.15ಕ್ಕೆ ಶಾರದ ಕಲ್ಚರಲ್ ಟ್ರಸ್ಟ್‌ನಿಂದ ಸಮೂಹ ನೃತ್ಯ
- ರಾತ್ರಿ 7.00ಕ್ಕೆ ಪ್ರಯೋಗರಂಗದಿಂದ ಕಾಲಜ್ಞಾನಿ ಕನಕ ನಾಟಕ ಪ್ರದರ್ಶನ

**ಪುರಭವನ**

- ಸಂಜೆ 5.00ಕ್ಕೆ ಬೆಂಗಳೂರಿನ ರಂಗ ಶಿಕ್ಷಣ ಕೇಂದ್ರದಿಂದ ಅನುಜರ ಕಲಹ ಪೌರಾಣಿಕ ನಾಟಕ
- ರಾತ್ರಿ 7.00ಕ್ಕೆ ಬೈಲಹೊಂಗಲದ ಭರಮಪ್ಪ ಮ.ಸತ್ಯನ್ನವರ ತಂಡದಿಂದ ಶ್ರೀಕೃಷ್ಣ ಪಾರಿಜಾತ ಸಣ್ಣಾಟ

**ಚಿಕ್ಕಗಡಿಯಾರ**

- ಸಂಜೆ 5.00ಕ್ಕೆ ಕುಮಾರ ತಂಡದಿಂದ ನಗಾರಿ
- ಸಂಜೆ 5.30ಕ್ಕೆ ಹೊಸಳ್ಳಿ ಗಂಗಾಧರ್ ತಂಡದಿಂದ ಸುಗಮ ಸಂಗೀತ
- ಸಂಜೆ 6.30ಕ್ಕೆ ಶ್ರೀಧರ್ ಸಾಗರ್ ತಂಡದಿಂದ ಸ್ಯಾಕ್ಸೋಫೋನ್
- ರಾತ್ರಿ 7.30ಕ್ಕೆ ಅಂಕಯ್ಯ ತಂಡದಿಂದ ತಂಬೂರಿ ಪದಗಳು
- ರಾತ್ರಿ 8.30ಕ್ಕೆ ಶಿವಪ್ರಸಾದ್ ತಂಡದಿಂದ ಜಾನಪದ ಗೀತ ಗಾಯನ

**ರಮಾಗೋವಿಂದ ರಂಗಮಂದಿರ**


- ಸಂಜೆ 5.00ಕ್ಕೆ ಭಾನುಪ್ರಕಾಶ್ ತಂಡದಿಂದ ಚಿಟ್ಟಿಮೇಳ
- ಸಂಜೆ 5.30ಕ್ಕೆ ಮಂಜಣ್ಣ ತಂಡದಿಂದ ಸುಗಮ ಸಂಗೀತ
- ಸಂಜೆ 6.30ಕ್ಕೆ ಲೇಪಾಕ್ಷಿ ತಂಡದಿಂದ ರಂಗಗೀತೆ
- ರಾತ್ರಿ 7.30ಕ್ಕೆ ಬೆಂಗಳೂರಿನ ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್‌ನಿಂದ ಗಾಂಪರ ಗುಂಪು ನಾಟಕ ಪ್ರದರ್ಶನ

**ನಾದಬ್ರಹ್ಮ ಸಂಗೀತ ಸಭಾ**


- ಸಂಜೆ 5.00ಕ್ಕೆ ಎ.ವಿ.ನಾರಾಯಣ ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ನಾದಸ್ವರ
- ಸಂಜೆ 5.30ಕ್ಕೆ ಸಬ್ಬನಹಳ್ಳಿ ರಾಜು ತಂಡದಿಂದ ಜನಪದ ಗೀತೆ
- ಸಂಜೆ 6.30ಕ್ಕೆ ಪುಷ್ಪಾಂಜಲಿ ನಾಟ್ಯ ಕಲಾ ಅಕಾಡೆಮಿ ಕೆ.ಎಂ.ರಮೇಶ್ ಭರತನಾಟ್ಯ ಪ್ರದರ್ಶನ
- ರಾತ್ರಿ 7.30ಕ್ಕೆ ಮೂರ್ತಿ ತಂಡದಿಂದ ತಾಳವಾದ್ಯ ಲಹರಿ
- ರಾತ್ರಿ 8.30ಕ್ಕೆ ವಚನ ಸಂಜೀವಿನಿಯಿಂದ ವಚನಗಾಯನ

## ನಾಳೆ ವರ್ಣರಂಜಿತ ಯುವ ದಸರಾಗೆ ಚಾಲನೆ

●ವೇದಿಕೆ, ಮೈದಾನ ಸಜ್ಜುಗೊಳಿಸುವ ಕಾರ್ಯ ಚುರುಕು ●20 ಸಾವಿರ ಆಸನ ವ್ಯವಸ್ಥೆ ●2 ವಿಧದ ಟಿಕೆಟ್‌ಗೆ ತಲಾ 500 ಆಸನ ●ಗಣ್ಯರಿಗೆ 500 ಆಸನ ಒಳಗೊಂಡ ಗ್ಯಾಲರಿ ●ಉಳಿದ ಆಸನಗಳಲ್ಲಿ ಸಾರ್ವಜನಿಕರ ಗ್ಯಾಲರಿ; ಉಚಿತ ಪ್ರವೇಶ



ಉತ್ತನಹಳ್ಳಿ ಸಮೀಪದ ಮೈದಾನದಲ್ಲಿ ಯುವ ದಸರಾಗೆ ಆಸನ ಜೋಡಣೆ ಸೇರಿದಂತೆ ಎಲ್ಲಾ ವ್ಯವಸ್ಥೆ ಮಾಡುತ್ತಿರುವುದು.



ಭಾನುವಾರ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಿದ್ಧತೆಗಳನ್ನು ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು. ಚಿತ್ರದಲ್ಲಿ ಡಿಸಿ ಜಿ.ಲಕ್ಷ್ಮೀಕಾಂತರೆಡ್ಡಿ, ಎಸ್‌ಪಿ ಎನ್.ವಿಷ್ಣುವರ್ಧನ ಇನ್ನಿತರ ಅಧಿಕಾರಿಗಳನ್ನು ಕಾಣಬಹುದು.

ಮೈಸೂರು, ಸೆ.21(ಪಿಎಂ)– ಖ್ಯಾತ ಸಂಗೀತ ನಿರ್ದೇಶಕರು ಮತ್ತು ಗಾಯಕರು ತಮ್ಮ ಸಂಗೀತದ ಅಲೆಗಳಲ್ಲಿ ತೇಲಿಸಿ ಯುವ ಸಮೂಹ ಕುಣಿದು ಕುಪ್ಪಳಿಸುವಂತೆ ಮಾಡುವ 'ಯುವ ದಸರಾ'ಗೆ ವೇದಿಕೆ ಹಾಗೂ ಮೈದಾನ ಸಜ್ಜುಗೊಳಿಸುವ ಕಾರ್ಯ ಮೈಸೂರಿನ (ರಿಂಗ್ ರಸ್ತೆ ಪಕ್ಕದ ಮೈದಾನ) ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನ ಸಮೀಪದ ಮೈದಾನದಲ್ಲಿ ಭರದಿಂದ ಸಾಗಿದೆ.

ಸೆ.23ರಿಂದ ಯುವ ದಸರಾ ಆರಂಭಗೊಳ್ಳಲಿದ್ದು, ಎಲ್‌ಇಡಿ ಸ್ಕ್ರೀನ್‌ಗಳನ್ನು ಹೊಂದಿದ ಬೃಹತ್ ವೇದಿಕೆ ಸಿದ್ಧಪಡಿಸಲಾಗುತ್ತಿದೆ. ಜೊತೆಗೆ ಭಾರಿ ಗಾತ್ರದ ಸ್ಪೀಕರ್ ಅಳವಡಿಕೆಯ ಕೆಲಸ ಕಾರ್ಯಗಳು ನಡೆಯುತ್ತಿವೆ. ಸುಮಾರು 20 ಸಾವಿರ ಆಸನಗಳನ್ನು ಒಟ್ಟಾರೆ ವ್ಯವಸ್ಥೆ ಮಾಡುತ್ತಿದ್ದು, ತಾತ್ಕಾಲಿಕ ಶೌಚಾಲಯಗಳನ್ನು ಮೈದಾನದಲ್ಲಿ ಅಳವಡಿಸಲಾಗುತ್ತಿದೆ. ಬ್ಯಾರಿಕೇಡ್‌ಗಳ ಮೂಲಕ ವಿವಿಧ ಗ್ಯಾಲರಿಗಳನ್ನು ವಿಭಾಗಿಸುತ್ತಿದ್ದು, ಅಂತಿಮ ಹಂತದ ಸಿದ್ಧತೆ ಭರದಿಂದ ನಡೆಯುತ್ತಿದೆ.

ಆಯಾ ದಿನದ ಪ್ರದರ್ಶನ ವೀಕ್ಷಿಸಲು ಎರಡು ವಿಧದ ಟಿಕೆಟ್ ವ್ಯವಸ್ಥೆ ಇದ್ದು, ಈ ಸಂಬಂಧ ಎರಡು ಗ್ಯಾಲರಿಗಳನ್ನು ವ್ಯವಸ್ಥೆಗೊಳಿಸಲಾಗುತ್ತಿದೆ. ಜೊತೆಗೆ ಬೆಳಕಿನ ವ್ಯವಸ್ಥೆಗಾಗಿ ಲೈಟ್‌ಗಳನ್ನು ಅಳವಡಿಸಲಾಗುತ್ತಿದೆ. ಖ್ಯಾತ ಸಂಗೀತ ನಿರ್ದೇಶಕರು, ಗಾಯಕರು ತಮ್ಮ ತಂಡಗಳೊಂದಿಗೆ ಹಾಡು ನೃತ್ಯದ ಮೂಲಕ ಪ್ರೇಕ್ಷಕರನ್ನು ರಂಜಿಸಲು ವೇದಿಕೆ ಸಜ್ಜುಗೊಳಿಸಲಾಗುತ್ತಿದೆ. ಸೆ.23ರಿಂದ 27ರವರೆಗೆ ಪ್ರತಿದಿನ ಸಂಜೆ 5.30ರಿಂದ ರಾತ್ರಿ 10.30ರವರೆಗೆ ಈ ಸಂಗೀತ ಸಡಗರ ಕಳೆಗಟ್ಟಲಿದ್ದು, ವಿಶೇಷವಾಗಿ ಯುವ ಸಮೂಹವೇ ಇತ್ತ ಹೆಚ್ಚಾಗಿ ಹರಿದು ಬರಲಿದೆ. ಸೆ.23ರಂದು ಸಂಜೆ 6ಕ್ಕೆ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. 'ಬುಕ್‌ಮೈಶೋ (BookMyShow)'ನಲ್ಲಿ ಟಿಕೆಟ್ ಕಾಯ್ದಿರಿಸಬಹುದು. ಸಾರ್ವಜನಿಕರ ಅನುಕೂಲಕ್ಕಾಗಿ ಮೈಸೂರು ನಗರದ ವಿವಿಧ ಕಡೆಗಳಿಂದ ಬಸ್‌ಗಳ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಯುವ ದಸರಾ ಉಪಸಮಿತಿ ಕಾರ್ಯಾಧ್ಯಕ್ಷರೂ ಆದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಆಯುಕ್ತ ಕೆ.ಆರ್.ರಕ್ಷಿತ್, ಒಟ್ಟಾರೆ 20 ಸಾವಿರ ಆಸನಗಳ ವ್ಯವಸ್ಥೆ ಮಾಡುತ್ತಿದ್ದು, ಈ ಪೈಕಿ 5 ಸಾವಿರ ಟಿಕೆಟ್ ಹಾಗೂ 2,500 ರೂ. ಟಿಕೆಟ್‌ಗಳಿಗೆ ತಲಾ 500 ಆಸನಗಳ ಗ್ಯಾಲರಿಗಳ ವ್ಯವಸ್ಥೆಗೊಳಿಸಲಾಗುತ್ತಿದೆ. ವಿಐಪಿ ಗ್ಯಾಲರಿಯಲ್ಲಿ 500 ಆಸನಗಳು ಇರಲಿದ್ದು, ಉಳಿದ ಆಸನಗಳ ಗ್ಯಾಲರಿಗೆ ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದೆ ಎಂದು ತಿಳಿಸಿದರು.

**ಗೋಲ್ಡ್ ಕಾರ್ಡ್‌ಗೆ ಪ್ರವೇಶವಿಲ್ಲ:** ಯುವ ದಸರಾ ಕಾರ್ಯಕ್ರಮಗಳ ವೀಕ್ಷಣೆಗೆ ಯಾವುದೇ ಪಾಸ್ ವ್ಯವಸ್ಥೆ ಇಲ್ಲ. ಗೋಲ್ಡ್ ಕಾರ್ಡ್‌ಗೂ ಪ್ರವೇಶ ಇಲ್ಲ. ಪಾರ್ಕಿಂಗ್‌ಗಾಗಿ ಐದು ಕಡೆಗಳಲ್ಲಿ ಸ್ಥಳ ಗುರುತಿಸಿ ಸಜ್ಜುಗೊಳಿಸಲಾಗುತ್ತಿದೆ. ಕಾಪಿರೈಟ್ ಸಮಸ್ಯೆ ಉದ್ಭವಿಸುವ ಹಿನ್ನೆಲೆಯಲ್ಲಿ ಲೈವ್ ನೀಡಲು ಕ್ರಮ ವಹಿಸಿಲ್ಲ ಎಂದು ಹೇಳಿದರು.

**9 ಕಾಲೇಜು ತಂಡಗಳಿಗೆ ಅವಕಾಶ:** ಯುವ ಸಂಭ್ರಮದಿಂದ ಆಯ್ಕೆಯಾದ 9 ಕಾಲೇಜು ತಂಡಗಳ ಪ್ರತಿಭಾ ಪ್ರದರ್ಶನಕ್ಕೂ ಯುವ ದಸರಾದಲ್ಲಿ ವೇದಿಕೆ ಕಲ್ಪಿಸಲಾಗಿದೆ. ಪ್ರತಿದಿನಕ್ಕೆ ಬದಲಾಗಿ ಸೆ.24 ರಂದು ಎಲ್ಲಾ ತಂಡಗಳು ಪ್ರದರ್ಶನ ನೀಡಲಿವೆ. ಅಂದು ಸಂಜೆ 5ರಿಂದ 6ರವರೆಗೆ ಈ ಕಾಲೇಜು ತಂಡಗಳ ಪ್ರದರ್ಶನ ಇರಲಿದೆ ಎಂದು ತಿಳಿಸಿದರು.

**ಉಸ್ತುವಾರಿ ಸಚಿವರಿಂದ ಪರಿಶೀಲನೆ:** ಯುವ ದಸರಾ ಕಾರ್ಯಕ್ರಮಗಳಿಗಾಗಿ ಸಜ್ಜುಗೊಳಿಸುತ್ತಿರುವ ಉತ್ತನಹಳ್ಳಿ ಸಮೀಪದ ಮೈದಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭಾನುವಾರ ಭೇಟಿ ನೀಡಿ ಸಿದ್ಧತೆಯನ್ನು ಪರಿಶೀಲಿಸಿದರು. ಕಾರ್ಯಕ್ರಮದ ರೂಪುರೇಷ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದ ಅವರು, ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜಿಸಬೇಕು. ಯಾವುದೇ ಅನಾನುಕೂಲವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಸೂಚಿಸಿದರು.

ಯುವ ದಸರಾಗೆ ಹೆಚ್ಚಿನ ಸಂಖ್ಯೆಯಲ್ಲಿ ಯುವ ಸಮೂಹ ಆಗಮಿಸಿದ್ದು, ಹೆಚ್ಚಿನ ಭದ್ರತೆ ಒದಗಿಸಬೇಕು. ರಾತ್ರಿ ವೇಳೆ ಕಾರ್ಯಕ್ರಮ ನಡೆಯುವ ಕಾರಣ ಬೀದಿದೀಪದ ವ್ಯವಸ್ಥೆ ಸೂಕ್ತವಾಗಿರಬೇಕು. ವಾಹನ ನಿಲುಗಡೆಗೆ ಪಾರ್ಕಿಂಗ್ ಸ್ಥಳ ಹಾಗೂ ಸೂಚನಾ ಫಲಕಗಳ ಅಳವಡಿಕೆ ಸೇರಿದಂತೆ ಎಲ್ಲವೂ ಸಮರ್ಪಕವಾಗಿರಬೇಕೆಂದು ನಿರ್ದೇಶನ ನೀಡಿದರು.

ದಸರಾ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಯುವ ದಸರಾ ಉಪಸಮಿತಿ ಉಪವಿಶೇಷಾಧಿಕಾರಿಗಳೂ ಆದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ, ಉಪಸಮಿತಿ ಕಾರ್ಯಾಧ್ಯಕ್ಷರೂ ಆದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಕೆ.ಆರ್.ರಕ್ಷಿತ್, ಉಪಸಮಿತಿ ಸಹ ಕಾರ್ಯದರ್ಶಿ ಡಿ.ಟಿ.ಅರುಣ್ ಕುಮಾರ್, ಉಪಸಮಿತಿ ಸಮನ್ವಯಾಧಿಕಾರಿ ಸತ್ಯಮೂರ್ತಿ ಮತ್ತಿತರರು ಹಾಜರಿದ್ದರು.

### ಐದು ದಿನಗಳಲ್ಲಿ ಕಾರ್ಯಕ್ರಮ ನೀಡುವವರು...

ಸೆ.23ರಂದು ಕನ್ನಡ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮತ್ತು ತಂಡ, 'ಲಗೋರಿ ಬ್ಯಾಂಡ್' ತಂಡ, ಸೆ.24ರಂದು ಬಾಲಿವುಡ್‌ನ ಖ್ಯಾತ ಸಂಗೀತ ನಿರ್ದೇಶಕ ಪ್ರೀತಮ್ ಮತ್ತು ತಂಡ, ಖ್ಯಾತ ಗಾಯಕ ಶೋರ್ ಪೊಲೀಸ್ ಮತ್ತು ತಂಡ, 25ರಂದು ಖ್ಯಾತ ಬಾಲಿವುಡ್ ಹಿನ್ನೆಲೆ ಗಾಯಕ ಜುಬಿನ್ ನೌಟಿಯಲ್ ಮತ್ತು ತಂಡ, ಖ್ಯಾತ ಗಾಯಕ ಶ್ರೀರಾಮಚಂದ್ರ ಮತ್ತು ತಂಡ, ಸೆ.26ರಂದು ಖ್ಯಾತ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ (ಡಿಎಸ್‌ಪಿ) ಮತ್ತು ತಂಡ, ಖ್ಯಾತ ಗಾಯಕ ಆಸೀಸ್ ಕೌರ್ ಮತ್ತು ತಂಡ, ಸೆ.27ರಂದು ಬಾಲಿವುಡ್‌ನ ಖ್ಯಾತ ಹಿನ್ನೆಲೆ ಗಾಯಕಿ ಸುನಿಧಿ ಚೌಹಾಣ್ ಮತ್ತು ತಂಡ ಹಾಗೂ 'ಬೆಸ್ಟ್ ಕೆಪ್ಟ್ ಸಿಕ್ರೇಟ್' ಗಾಯಕರ ತಂಡ.

## ದಸರಾಗೆ ಕೆಎಸ್‌ಆರ್‌ಟಿಸಿ 2,300 ಹೆಚ್ಚುವರಿ ಬಸ್ ಸಂಚಾರ ವ್ಯವಸ್ಥೆ

ಬೆಂಗಳೂರು, ಸೆ.21– ದಸರಾ ಹಬ್ಬದ ರಜೆಯ ಕಾರಣ ಬೆಂಗಳೂರಿನಿಂದ ವಿವಿಧ ಜಿಲ್ಲೆಗಳಿಗೆ ಮತ್ತು ಬೇರೆ ಊರುಗಳಿಗೆ ಸಂಚರಿಸುವ ಪ್ರಯಾಣಿಕರಿರುವುದರಿಂದ ಸೆ.26 ರಿಂದ ಕೆಎಸ್‌ಆರ್‌ಟಿಸಿ 2,300 ಹೆಚ್ಚುವರಿ ಬಸ್‌ಗಳ ಸೇವೆ ನೀಡುತ್ತಿದೆ.

ಸಾಲು ಸಾಲು ರಜೆ ಇರುವ ಕಾರಣ ಬೆಂಗಳೂರಿನಿಂದ ರಾಜ್ಯ ಮತ್ತು ಹೊರರಾಜ್ಯಗಳಿಗೆ ತೆರಳುವವರ ಅನುಕೂಲಕ್ಕಾಗಿ ಸೆ.26, 27 ಮತ್ತು ಸೆ.30 ರಂದು ಕೆಎಸ್‌ಆರ್‌ಟಿಸಿ 2,300 ಹೆಚ್ಚುವರಿ ಬಸ್ ಸಂಚಾರ ನಡೆಸಲಿವೆ.

ಬೆಂಗಳೂರಿನ ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ, ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದಿಂದ ಕಾರ್ಯಾಚರಣೆಗಿಳಿಯಲಿವೆ. ಈ ಹೆಚ್ಚುವರಿ ಬಸ್‌ಗಳು ವಿವಿಧ ನಗರಗಳಿಂದ ಬೆಂಗಳೂರಿಗೆ ಅ.2 ಹಾಗೂ 5 ರಂದು ಸೇವೆ ನೀಡಲಿದೆ.

**ಮೈಸೂರು ದಸರಾ ವೀಕ್ಷಣೆ:** ಮೈಸೂರು ದಸರಾ ವೀಕ್ಷಣೆಗೆ ತೆರಳುವವರಿಗೆ ಕೆಎಸ್‌ಆರ್‌ಟಿಸಿ 610 ವಿಶೇಷ ಸಾರಿಗೆ ವ್ಯವಸ್ಥೆ ಮತ್ತು ವಿಶೇಷ ಪ್ಯಾಕೇಜ್ ವ್ಯವಸ್ಥೆ ಮಾಡುತ್ತಿದೆ. ಅದರಲ್ಲಿ ಬೆಂಗಳೂರಿನ ಮೈಸೂರು ರಸ್ತೆ ಬಸ್‌ನಿಲ್ದಾಣದಿಂದ ಮೈಸೂರಿಗೆ 260 ಹೆಚ್ಚುವರಿ ಬಸ್‌ಗಳು ಸೇವೆ ನೀಡಲಿವೆ.

ಹಾಗೆಯೇ, ಮೈಸೂರು ಸುತ್ತಮುತ್ತ ಚಾಮುಂಡಿಬೆಟ್ಟ, ಕೆಆರ್‌ಎಸ್ ಅಣೆಕಟ್ಟು, ಶ್ರೀರಂಗಪಟ್ಟಣ, ನಂಜನಗೂಡು, ಮಡಿಕೇರಿ, ಮಂಡ್ಯ, ಮಳವಳ್ಳಿ, ಎಚ್.ಡಿ. ಕೋಟೆ, ಚಾಮರಾಜನಗರ, ಹುಣಸೂರು, ಕೆ.ಆರ್.ನಗರ ಹಾಗೂ ಗುಂಡ್ಲುಪೇಟೆ ಮತ್ತಿತರ ಸ್ಥಳಗಳಿಗೆ 350 ಹೆಚ್ಚುವರಿ ಬಸ್‌ಗಳನ್ನು ಕಾರ್ಯಾಚರಣೆಗಿಳಿಸಲಾಗುತ್ತಿದೆ ಎಂದು ಕೆಎಸ್‌ಆರ್‌ಟಿಸಿ ನಿಗಮ ತಿಳಿಸಿದೆ.

# ನಾಳೆಯಿಂದ ಮಡಿಕೇರಿಯಲ್ಲಿ ದಸರಾ ಜನೋತ್ಸವ

## ಇಂದು ಕರಗ ಉತ್ಸವದ ಮೂಲಕ ದಸರಾಕ್ಕೆ ಚಾಲನೆ

**ಮಡಿಕೇರಿ:** ಪೌರಾಣಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾಕ್ಕೆ ಶಕ್ತಿ ದೇವತೆಗಳ ಕರಗ ಉತ್ಸವದ ಮೂಲಕ ಸೋಮವಾರ ಸಾಂಪ್ರದಾಯಿಕ ಚಾಲನೆ ದೊರೆಯಲಿದೆ.



ನಗರದ ಪಂಪಿನಕೆರೆಯಲ್ಲಿ 4 ಶಕ್ತಿ ದೇವತೆಗಳಾದ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ, ಶ್ರೀ ದಂಡಿನ ಮಾರಿಯಮ್ಮ, ಶ್ರೀ ಕಂಚಿ ಕಾಮಾಕ್ಷಿಯಮ್ಮ ಮತ್ತು ಶ್ರೀ ಕೋಟೆ ಮಾರಿಯಮ್ಮ ದೇವಿಗಳ ಕರಗಗಳಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಮಡಿಕೇರಿ ದಸರಾಕ್ಕೆ ಅಧಿಕೃತ ಚಾಲನೆ ಸಿಗಲಿದೆ.

ಸೆ.22ರ ಮಧ್ಯಾಹ್ನ 2.30 ಗಂಟೆಗೆ ಆಯಾ ದೇವಾಲಯಗಳಿಂದ ವಾದ್ಯಗೋಷ್ಠಿಯೊಂದಿಗೆ ಶಕ್ತಿ ದೇವತೆಗಳ ಸಹಿತ ಕರಗ ದೇವಾಲಯ ಸಮಿತಿ ಪ್ರಮುಖರು ಪಂಪಿನ ಕರೆಗೆ ತೆರಳುತ್ತಾರೆ. ಬಳಿಕ ಅಲ್ಲಿ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ ಕರಗ ಕಟ್ಟಲು ಪ್ರಾರಂಭಿಸಲಾಗುತ್ತದೆ. ಸಂಜೆ 6 ಗಂಟೆಯ ಬಳಿಕ ವಿಶೇಷ ಪೂಜೆ ಸ್ವೀಕರಿಸಿ ಪಂಪಿನ ಕೆರೆಯಿಂದ ಕರಗಗಳು ಹೊರಡಲಿವೆ.

ಈ ಸಂದರ್ಭ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಶಾಸಕರಾದ ಡಾ.ಮಂತರ್‌ಗೌಡ, ಎ.ಎಸ್. ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಮಡಿಕೇರಿ ನಗರ ದಸರಾ ಸಮಿತಿ ಅಧ್ಯಕ್ಷೆ ಕಲಾವತಿ, ಕಾರ್ಯಾಧ್ಯಕ್ಷ ಬಿ.ಕೆ. ಅರುಣ್‌ಕುಮಾರ್, ನಗರ ಸಭೆ ಪೌರಾಯುಕ್ತ ರಮೇಶ್ ಮತ್ತಿತ್ತರರು ಪಾಲ್ಗೊಳ್ಳಲಿದ್ದಾರೆ.

### ಅ.2ರವರೆಗೆ ಪ್ರತಿ ನಿತ್ಯ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ

ಮಡಿಕೇರಿ,ಸೆ.21– ಮಡಿಕೇರಿ ದಸರಾ ಜನೋತ್ಸವ ಅಂಗವಾಗಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು 10 ದಿನಗಳ ಸಂಭ್ರಮದ ವಾತಾವರಣ ಕಂಡು ಬರಲಿದೆ.

ಮಡಿಕೇರಿ ನಗರ ದಸರಾ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಡಿಕೇರಿ ದಸರಾ ಸಾಂಸ್ಕೃತಿಕ ಸಮಿತಿ ಆಶ್ರಯದಲ್ಲಿ ಸೆ.23 ರಿಂದ ಅಕ್ಟೋಬರ್ 2ರವರೆಗೆ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಸಂಜೆ 6 ಗಂಟೆಯಿಂದ ಕಾರ್ಯಕ್ರಮಗಳು ಜರುಗಲಿವೆ ಎಂದು ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕುಡೆಕಲ್ ಸಂತೋಷ್ ತಿಳಿಸಿದ್ದಾರೆ.

ಸೆ.23ರಂದು ಸಂಜೆ 6 ಗಂಟೆಗೆ ಭಾಗ ಮಂಡಲ ಜಾನ್ ಡ್ಯಾನ್ಸ್ ಗ್ಯಾಲರಿ ತಂಡ ದಿಂದ ನೃತ್ಯ ವೈಭವ, ಮೈಸೂರಿನ ನಿತ್ಯ ನಿರಂತರ ಟ್ರಸ್ಟ್ ವಿಶೇಷ ಚೇತನ ಮಕ್ಕಳಿಂದ ಸಾಂಸ್ಕೃತಿಕ ವೈವಿಧ್ಯ, ಬೆಂಗಳೂರು ಸ್ವರ ಸಿಂಚನ ತಂಡದಿಂದ ಸಂಗೀತ ರಸಮಂಜರಿ ಇರಲಿದೆ. ಸೆ.24ರಂದು ಬೆಳಿಗ್ಗೆ 10 ಗಂಟೆಗೆ ಕಾಫಿ ದಸರಾ, ಸಂಜೆ 6 ಗಂಟೆಯಿಂದ ಅಂತಾರಾಷ್ಟ್ರೀಯ ಖ್ಯಾತಿಯ ಹರಿ, ಚೇತನ ಮತ್ತು ತಂಡದವರಿಂದ ಆಕರ್ಷಕ ಕಥಕ್ ನೃತ್ಯ, ಕೊಡಗು ಪೊಲೀಸ್ ಸಾಂಸ್ಕೃತಿಕ ವೇದಿಕೆಯಿಂದ ಸಾಂಸ್ಕೃತಿಕ ವೈವಿಧ್ಯ, ಮಡಿಕೇರಿ ಡ್ಯಾನ್ಸ್ ಲ್ಯಾಬ್ ಫಿಟ್‌ನೆಸ್ ಸ್ಟುಡಿಯೋಗದಿಂದ ನೃತ್ಯ ವೈವಿಧ್ಯ ನಡೆಯಲಿದೆ.

ಸೆ.25ರಂದು ಬೆಳಿಗ್ಗೆ 10 ಗಂಟೆಗೆ ಕವಿಗೋಷ್ಠಿ, ಸಂಜೆ 6 ಗಂಟೆಯಿಂದ ಕೂರ್ಗ್ ಸನ್‌ರೈಸ್ ಮೆಲೋಡೀಸ್ ತಂಡದಿಂದ ಸಂಗೀತ ರಸಮಂಜರಿ, ನಾಟ್ಯ ಮಯೂರಿ ಮೆಲೋಡೀಸ್ ತಂಡದವರಿಂದ ಸಾಂಸ್ಕೃತಿಕ ವೈವಿಧ್ಯ, ಸುಳ್ಯದ ಸುಗಿಪು ಜಾನಪದ ತಂಡದಿಂದ ಜಾನಪದ ವೈವಿಧ್ಯ, ಹೆಜ್ಜೆನಾದ ಮಂಗಳೂರು ತಂಡದಿಂದ ಸಾಂಸ್ಕೃತಿಕ ವೈವಿಧ್ಯ ಆಯೋಜಿತವಾಗಿದೆ.

ಸೆ.26ರಂದು ಸಂಜೆ 6 ಗಂಟೆಯಿಂದ ಕುಶಾಲನಗರ ಕುಂದನ ನೃತ್ಯಾಲಯದಿಂದ ನೃತ್ಯ ವೈವಿಧ್ಯ, ಭಾರತೀಯ ಸಂಗೀತ ನೃತ್ಯ ಕಲಾಶಾಲೆಯಿಂದ ಸಾಂಸ್ಕೃತಿಕ ವೈವಿಧ್ಯ, ಕನ್ನಡ ಸಿರಿ ಕಲಾ ವೃಂದದವರಿಂದ ಸಂಗೀತ ರಸಮಂಜರಿ, ಸೆ.27 ರಂದು ಯುವ ದಸರಾ ನಡೆಯಲಿದೆ.

ಸೆ.28ರಂದು ಬೆಳಿಗ್ಗೆ 10ಗಂಟೆಗೆ 8ನೇ ವರ್ಷದ ಮಹಿಳಾ ದಸರಾ, ಸಂಜೆ 6 ಗಂಟೆಯಿಂದ ಹಾಸನದ ನಾಟ್ಯ ನಿನಾದ ಡ್ಯಾನ್ಸ್ ಅಕಾಡೆಮಿಯವರಿಂದ ನೃತ್ಯ ವೈವಿಧ್ಯ, ಕೊಡಗು ಗೌಡ ಮಹಿಳಾ ಒಕ್ಕೂಟದವರಿಂದ ಸಾಂಸ್ಕೃತಿಕ ವೈವಿಧ್ಯ, ಹಿಂದೂ ಮಲಯಾಳಿ ಸಂಘದವರಿಂದ ನೃತ್ಯ ವೈವಿಧ್ಯ, ಕೊಡಗು ಜಿಲ್ಲಾ ಕುಲಾಲ ಸಂಘದವರಿಂದ ಸಾಂಸ್ಕೃತಿಕ ವೈಭವ ನಡೆಯಲಿದೆ.

ಸೆ.29ರಂದು ಬೆಳಿಗ್ಗೆ 10 ಗಂಟೆಯಿಂದ 6ನೇ ವರ್ಷದ ಜಾನಪದ ದಸರಾ, ಸಂಜೆ 6 ಗಂಟೆಯಿಂದ ಮಂಗಳೂರು ಯಶಸ್ವಿ ಡ್ಯಾನ್ಸ್ ಗ್ರೂಪ್‌ನವರಿಂದ ತುಳುನಾಡು ಸಾಂಸ್ಕೃತಿ ವೈವಿಧ್ಯ, ಹುಬ್ಬಳ್ಳಿಯ ಭೂಮಿಕ, ದೀಪಿಕಾ ತಂಡದವರಿಂದ ಗಾನಸುಧೆ ವೀರಾಜಪೇಟೆ ನಾಟ್ಯಾಂಜಲಿ ನೃತ್ಯ ಸಂಸ್ಥೆಯವರಿಂದ ನೃತ್ಯ ವೈವಿಧ್ಯ, ಸೆ.29ರಂದು ಬೆಳಿಗ್ಗೆ 10 ಗಂಟೆಯಿಂದ 12ನೇ ವರ್ಷದ ಮಕ್ಕಳ ದಸರಾ, ಸಂಜೆ 6 ಗಂಟೆಯಿಂದ 'ಸು ಫ್ರಂ ಸೋ' ಸಿನಿಮಾ ಖ್ಯಾತಿಯ(ಬಾವ) ಪುಷ್ಪರಾಜ್ ಬೊಳ್ಳಾರ್ ತಂಡದಿಂದ ಕಾಮಿಡಿ, ಮೈಸೂರಿನ ಸುಮಾರಾಜ್ ಕುಮಾರ್ ಅವರಿಂದ ಮಾತನಾಡುವ ಗೊಂಬೆ ಪ್ರದರ್ಶನ(ಹಾಸ್ಯ), ಮಡಿಕೇರಿಯ ಕಿಂಗ್ಸ್ ಆಫ್ ಕೂರ್ಗ್ ತಂಡದವರಿಂದ ನೃತ್ಯ ವೈವಿಧ್ಯ, ಮಡಿಕೇರಿಯ ನಾಟ್ಯಕಲಾ ಡ್ಯಾನ್ಸ್ ಸ್ಟುಡಿಯೋದವರಿಂದ ನೃತ್ಯ ವೈವಿಧ್ಯ ಜರುಗಲಿದೆ. ಅ.1ರ ಆಯುಧಾ ಪೂಜಾ ಸಮಾರಂಭದಂದು ಸಂಜೆ 6 ಗಂಟೆಯಿಂದ ಬೆಂಗಳೂರಿನ ಪೊನಿಧ್ವನಿ ತಂಡದಿಂದ ಕೊಡಗಿನ ಸಂಸ್ಕೃತಿ ವೈಭವ, ಮೈಸೂರಿನ ರಾಜೇಶ್ ಪಡಿಯಾರ್ ತಂಡದಿಂದ ಗಾನ ಸುಧೆ ವೀರಾಜಪೇಟೆ ಟೀಂ ಇಂಟೋಪೀಸ್ ತಂಡದಿಂದ ನೃತ್ಯ ವೈವಿಧ್ಯ, ನಂತರ ಖ್ಯಾತ ಕಲಾವಿದರಿಂದ ಸಂಗೀತ ರಸಸಂಜೆ ಕಾರ್ಯಕ್ರಮಗಳು ನಡೆಯಲಿವೆ.

ಅ.2ರ ವಿಜಯದಶಮಿಯಂದು ಸಂಜೆ 6 ಗಂಟೆಯಿಂದ ಸರಿಗಮಪ ಖ್ಯಾತಿಯ ಕಲಾವಿದರಿಂದ ಗಾನ ಲಹರಿ, ಬೆಂಗಳೂರಿನ ಮಿಲನ್ ಮ್ಯೂಸಿಕಲ್ ಈವೆಂಟ್ಸ್ ತಂಡದವರಿಂದ ಸಾಂಸ್ಕೃತಿಕ ವೈವಿಧ್ಯ, ಹೈದರಾಬಾದ್‌ನ ಋತ್ವಿಕ್ ವೆಂಕಟ್ ಅವರಿಂದ ಕೂಚುಪುಡಿ ನೃತ್ಯ ಹಾಗೂ ಖ್ಯಾತ ಕಲಾವಿದರಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ. ಇದರೊಂದಿಗೆ ಪ್ರತಿದಿನ ಇತರ ಸ್ಥಳೀಯ ಹಾಗೂ ಹೊರ ಜಿಲ್ಲಾ ಕಲಾವಿದರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಸಂತೋಷ್ ಮಾಹಿತಿ ನೀಡಿದ್ದಾರೆ.

## ಸೆ.24, ವಿರಾಜಪೇಟೆಯಲ್ಲಿ ಹುತಾತ್ಮರ ದಿನಾಚರಣೆ



ಮಾಜಿ ಸೈನಿಕರ ಸಹಕಾರ ಸಂಘದ ಪತ್ರಿಕಾಗೋಷ್ಠಿ.

ವಿರಾಜಪೇಟೆ, ಸೆ.21–ಕೊಡಗು ಮಾಜಿ ಸೈನಿಕರ ಸಹಕಾರ ಸಂಘ ನಿಯಮಿತ (ವಿರಾಜಪೇಟೆ) ದಿಂದ ಸೆ.24ರಂದು ವಿರಾಜಪೇಟೆ ಭಾರತೀಯ ಸ್ಟೇಟ್ ಬ್ಯಾಂಕ್ ಮುಂಭಾಗದಲ್ಲಿರುವ ಅಮರ್‌ಜವಾನ್ ಸ್ಮಾರಕದಲ್ಲಿ ಹುತಾತ್ಮರ ದಿನಾಚರಣೆಯನ್ನು ಆಚರಿಸಲಾಗುವುದು ಎಂದು ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ತಿಳಿಸಿದ್ದಾರೆ.

ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹುತಾತ್ಮರ ದಿನಾಚರಣೆಯ ಅಂಗವಾಗಿ ಯೋಧರ ಸ್ಮಾರಕ ಸ್ಥಂಭದ ಆವರಣದಲ್ಲಿ ಜಿಲ್ಲಾ ಪೊಲೀಸ್ ತುಕಡಿಯ ಗೌರವದೊಂದಿಗೆ ಸ್ಮಾರಕಕ್ಕೆ ಪುಷ್ಪಗುಚ್ಛ ಅರ್ಪಿಸಿ ದೇಶ ರಕ್ಷಣೆಗಾಗಿ ಹುತಾತ್ಮರಾದ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಲಾಗುವುದು ಎಂದರು.

ಕಾರ್ಯದರ್ಶಿ ಷುಗ್ಗೆರ ನಂದಾ ಮಾತನಾಡಿ ಹುತಾತ್ಮರ ದಿನಾಚರಣೆಯಲ್ಲಿ ಅತಿಥಿಗಳಾಗಿ ಒಲಂಪಿಯನ್ ಲೆಫ್ಟಿನೆಂಟ್ ಕರ್ನಲ್ ಬಾಳೇಯಡ ಕೆ. ಸುಬ್ರಮಣಿ, ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಭಾಗವಹಿಸುವರು ಎಂದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ರಾಜ ಚಂದ್ರಶೇಖರ್, ಖಜಾಂಚಿ ತೋರೆರ ಪೂವಯ್ಯ, ನಿರ್ದೇಶಕರಾದ ಸಲಾಂ ಎಂ.ಕೆ ಕಡಂಗ, ಬಾಳೆಕುಟ್ಟಿರ ದಿನಿ ಬೋಪಯ್ಯ ಉಪಸ್ಥಿತರಿದ್ದರು.

## ಕಾರುಗುಂದದಲ್ಲಿ ವಿದ್ಯಾರ್ಥಿಗಳಿಗೆ ಸವಿ ಕಾಫಿ ವಿತರಣೆ

**ಮಡಿಕೇರಿ:** ಅಂತರರಾಷ್ಟ್ರೀಯ ಕಾಫಿ ದಿನಾಚರಣೆ ಹಿನ್ನೆಲೆಯಲ್ಲಿ ಕೊಡಗು ಮಹಿಳಾ ಕಾಫಿ ಜಾಗೃತಿ ಸಂಘದಿಂದ ಕಾರುಗುಂದದಲ್ಲಿ ವಿದ್ಯಾರ್ಥಿಗಳಿಗೆ ಸವಿ ಕಾಫಿಯನ್ನು ನೀಡಲಾಯಿತು.



ಕೊಡಗು ಕಾಫಿ ಜಾಗೃತಿ ಸಂಘದಿಂದ ಶಾಲೆಗಳಲ್ಲಿ ಮಕ್ಕಳಿಗೆ ಕಾಫಿ ಪಾನೀಯದ ಜಾಗೃತಿ ಮೂಡಿಸುವ ಕಾರ್ಯಕ್ರಮದ ಅಂಗವಾಗಿ ಕಾರುಗುಂದ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸವಿಯಾದ ಕಾಫಿ ನೀಡಲಾಯಿತು. ಆರೋಗ್ಯದ ಮೇಲೆ ಕಾಫಿಯಿಂದ ಉಂಟಾಗುವ ಉತ್ತಮ ಪರಿಣಾಮಗಳನ್ನು ವಿವರಿಸಲಾಯಿತು. ಕಾಫಿಯಿಂದಾಗಿ ಪ್ರತಿನಿತ್ಯ ಮನುಷ್ಯನಿಗೆ ಹೆಚ್ಚು ಲವಲವಿಕೆ ಬರುತ್ತದೆ. ಕೊಡಗಿನಲ್ಲಿ ಕಾಫಿ ಹೆಚ್ಚಾಗಿ ಬೆಳೆಯಲಾಗುತ್ತಿದ್ದು ಈ ನಿಟ್ಟಿನಲ್ಲಿ ಕೃಷಿಕರು ಮತ್ತು ಕಾರ್ಮಿಕರ ಶ್ರಮವನ್ನೂ ಶಾಲಾ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.

ಸಂಸ್ಥೆಯ ಪ್ರಮುಖರಾದ ಕುಟ್ಟೇಟಿರ ಕುಮಾರಿ ಕುಂಜ್ಞಪ್ಪ, ನಾಟೋಳಂಡ ಗಿರಿಜಾ ಚರ್ಮಣ್ಣ, ಕುಟ್ಟೇಟಿರ ಗೌರಮ್ಮ ಕಾವೇರಪ್ಪ, ಜರೀನ್ ಉತ್ತಪ್ಪ, ಮೊಟ್ಟೆಯಂಡ ಲೀನಾ ಕುಟ್ಟಪ್ಪ, ಪಟ್ಟಮಾಡ ಲೇಖಾ ಪೊನ್ನಪ್ಪ, ಕಬ್ಬಚ್ಚಿರ ಸಬಿತ ಉತ್ತಯ್ಯ, ಮುಖ್ಯ ಶಿಕ್ಷಕಿ ಪರ್ವಿನ್ ಕಾಫಿ ಮಾಹಿತಿ ನೀಡಿದರು.

# ಮೈಷುಗರ್‌ನಲ್ಲಿ ಟ್ಯಾಂಕ್ ಒಡೆದು ಮೊಲಾಸಸ್ ಮಣ್ಣುಪಾಲು

ಮಂಡ್ಯ, ಸೆ.21– ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಮೊಲಾಸಸ್ ಟ್ಯಾಂಕ್ ಒಡೆದ ಪರಿಣಾಮ 1200ಕ್ಕೂ ಹೆಚ್ಚು ಟನ್ ಮೊಲಾಸಸ್ ಮಣ್ಣು ಪಾಲಾದ ಘಟನೆ ತಡರಾತ್ರಿ ನಡೆದಿದೆ. ಬೆಳಗ್ಗೆ ಟ್ಯಾಂಕ್ ಒಡೆದು ಮೊಲಾಸಸ್ ನೆಲಕ್ಕೆ ಸುರಿಯುತ್ತಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆ. ಅಷ್ಟರ ವೇಳೆಗೆ ಕೋಟ್ಯಾಂತರ ರೂ. ಮೌಲ್ಯದ ಮೊಲಾಸಸ್ ನಷ್ಟವಾಗಿರುವುದು ಕಂಡು ಬಂದಿದೆ.



ಕಾರ್ಖಾನೆಯಲ್ಲಿರುವ ಒಂಬತ್ತನೇ ನಂಬರ್‌ನ ಟ್ಯಾಂಕ್‌ನಲ್ಲಿ ಬಿರುಕು ಕಾಣಿಸಿಕೊಂಡು ಮೊಲಾಸಸ್ ನೀರಿನಂತೆ ಹರಿಯಲಾರಂಭಿಸಿದೆ. ತಡರಾತ್ರಿಯಿಂದಲೇ ಆವರಣ ದ್ರವರೂಪದ ಮೊಲಾಸಸ್‌ನಿಂದ ತುಂಬಿಹೋಗಿತ್ತು. ಮೊಲಾಸಸ್ ಸಂಗ್ರಹಿಸುವ ಟ್ಯಾಂಕ್‌ನ ಕಬ್ಬಿಣದ ಶೀಟ್‌ಗಳನ್ನು ವೆಲ್ಡಿಂಗ್ ಮಾಡಿರುವ ಜಾಗ ತುಕ್ಕು ಹಿಡಿದಿತ್ತು. ಅದೇ ಜಾಗದಲ್ಲಿ ನೇರವಾಗಿ ಬಿರುಕು ಕಾಣಿಸಿಕೊಳ್ಳಲು ಅಸಮರ್ಪಕ ನಿರ್ವಹಣೆಯೇ ಘಟನೆಗೆ ಕಾರಣವೆಂದು ಹೇಳಲಾಗಿದೆ. ಟ್ಯಾಂಕ್‌ನ ಬಿರುಕು ಬಿಟ್ಟಿರುವ ಜಾಗವನ್ನು ಮುಚ್ಚುವುದಕ್ಕೆ ಕಾರ್ಖಾನೆ ಸಿಬ್ಬಂದಿ ಹರಸಾಹಸ ನಡೆಸಿದ್ದಾರೆ. ಅಷ್ಟರಲ್ಲಾಗಲೇ 1200 ಟನ್‌ಗೂ ಹೆಚ್ಚು ಮೊಲಾಸಸ್ ಟ್ಯಾಂಕ್‌ನಿಂದ ನೆಲಕ್ಕೆ ಸುರಿದುಹೋಗಿತ್ತು. ಆರಂಭದಲ್ಲೇ ಗಮನಿಸಿದ್ದರೆ ಹೆಚ್ಚು ನಷ್ಟವಾಗುವುದನ್ನು ತಪ್ಪಿಸಬಹುದಾಗಿತ್ತು ಎಂದು ಕಾರ್ಖಾನೆಯೊಳಗಿನ ಹಲವರು ಹೇಳುವ ಮಾತಾಗಿದೆ.

### 10 ರಿಂದ 15 ಟನ್ ಮೊಲಾಸಸ್ ನಷ್ಟ: ಸಿ.ಡಿ.ಗಂಗಾಧರ್

ಕಾರ್ಖಾನೆಯ ಟ್ಯಾಂಕ್ ಬಿರುಕು ಬಿಟ್ಟು 10 ರಿಂದ 15 ಟನ್ ಮೊಲಾಸಸ್ ನಷ್ಟವಾಗಿದೆ. ಅಬಕಾರಿ ಇಲಾಖೆ ಅಧಿಕಾರಿಗಳು ನಷ್ಟದ ಪ್ರಮಾಣ ವನ್ನು ಅಂದಾಜಿಸುತ್ತಿದ್ದಾರೆ. 5 ಸಾವಿರ ಟನ್ ಮೊಲಾಸಸ್‌ನ್ನು ಟನ್‌ಗೆ 11,400 ರು.ನಂತೆ ಎನ್‌ಎಸ್‌ಎಲ್ ಷುಗರ್ಸ್‌ಗೆ ಮಾರಾಟ ಮಾಡಲಾಗಿದ್ದು, ಅದನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಸರಿಯಾದ ಸಮಯಕ್ಕೆ ಟ್ಯಾಂಕ್‌ನ ಬಿರುಕನ್ನು ಮುಚ್ಚಿ ಹೆಚ್ಚು ನಷ್ಟವಾಗುವುದನ್ನು ತಡೆದಿದ್ದೇವೆ. ಮೊಲಾ ಸಸ್ ನಷ್ಟದ ಬಗ್ಗೆ ಹಬ್ಬಿಸಲಾಗುತ್ತಿರುವ ಸುಳ್ಳು ಮಾಹಿತಿಗಳನ್ನು ನಂಬಬಾರದು ಎಂದು ಮೈಷುಗರ್ ಕಾರ್ಖಾನೆ ಅಧ್ಯಕ್ಷ ಸಿ.ಡಿ. ಗಂಗಾಧರ್ ಹೇಳಿದ್ದಾರೆ.

ಕಾರ್ಖಾನೆಯಲ್ಲಿ ಇದುವರೆಗೂ 1 ಲಕ್ಷಕ್ಕೂ ಹೆಚ್ಚು ಟನ್ ಕಬ್ಬನ್ನು ಅರೆಯಲಾಗಿದ್ದು, ಶೇ.6.5 ರಷ್ಟು ಇಳುವರಿ ಇದೆ. ಇಳುವರಿ ಕಡಿಮೆ ಇರುವುದರಿಂದ ಹೆಚ್ಚು ಪ್ರಮಾಣದಲ್ಲಿ ಮೊಲಾಸಸ್ ಸಂಗ್ರಹವಾಗಿತ್ತು. 9 ಟ್ಯಾಂಕ್‌ಗಳಲ್ಲಿ ಸಂಗ್ರಹಿಸಬಹುದಾದ ಮೊಲಾಸಸನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದಿರುವುದೇ ಈ ದುರಂತಕ್ಕೆ ಕಾರಣವೆಂದು ಹೇಳಲಾಗಿದೆ.

ಮ್ಯಾನೇಜರ್, ಚೀಫ್ ಕೆಮಿಸ್ಟ್ ನಿರ್ಲಕ್ಷ್ಯ ಮೊಲಾಸಸ್ ಸಂಗ್ರಹಿಸುವ ಟ್ಯಾಂಕ್‌ಗಳು ಶಿಥಿಲಾವಸ್ಥೆಯಲ್ಲಿದ್ದು, ಅವುಗಳನ್ನು ತುರ್ತಾಗಿ ದುರಸ್ತಿ ಮಾಡಬೇಕಿರುವ ಬಗ್ಗೆ ಸಂಬಂಧಪಟ್ಟ ಕಾರ್ಖಾನೆ ಸಿಬ್ಬಂದಿ ಲಿಖಿತ ರೂಪದಲ್ಲಿ ಮ್ಯಾನೇಜರ್ ಅವರಿಗೆ ನೀಡಿದ್ದರು ಎಂದು ಹೇಳಲಾಗಿದ್ದು, ಅದನ್ನು ಕಾರ್ಖಾನೆ ಆರಂಭಕ್ಕೂ ಮುನ್ನವೇ ಎಚ್ಚೆತ್ತುಕೊಂಡು ದುರಸ್ತಿ ಮಾಡಿಸಬೇಕಿತ್ತು. ಈ ವಿಚಾರದಲ್ಲಿ ಕಾರ್ಖಾನೆಯ ಮ್ಯಾನೇಜರ್ ಮತ್ತು ಚೀಫ್ ಕೆಮಿಸ್ಟ್ ಅವರು ವಹಿಸಿರುವ ನಿರ್ಲಕ್ಷ್ಯದಿಂದಲೇ ಮೊಲಾಸಸ್ ಟ್ಯಾಂಕ್ ಬಿರುಕು ಬಿಡುವುದಕ್ಕೆ ಮೂಲ ಕಾರಣವಾಗಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ. ಈಗ ಆಗಿರುವ ನಷ್ಟಕ್ಕೂ ಅವರೇ ಹೊಣೆಗಾರರು ಎಂದು ದೂರಲಾಗುತ್ತಿದೆ.

ಅಬಕಾರಿ ಅಧಿಕಾರಿಗಳಿಂದ ಪರಿಶೀಲನೆ ಮೊಲಾಸಸ್ ಟ್ಯಾಂಕ್ ಬಿರುಕು ಬಿಟ್ಟು ಸೋರಿಕೆಯಾಗಿರುವ ವಿಷಯ ತಿಳಿದು ಕಾರ್ಖಾನೆಗೆ ಅಬಕಾರಿ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಎಷ್ಟು ಪ್ರಮಾಣದಲ್ಲಿ ಮೊಲಾಸಸ್ ಸೋರಿಕೆಯಾಗಿದೆ, ಎಷ್ಟು ಸಂಗ್ರಹವಾಗಿತ್ತು. ಸೋರಿಕೆಗೆ ಕಾರಣವೇನು ಎಂಬೆಲ್ಲಾ ಮಾಹಿತಿಯನ್ನು ಕಾರ್ಖಾನೆ ಅಧಿಕಾರಿಗಳಿಂದ ಪಡೆದುಕೊಂಡಿದ್ದಾರೆ.

## ಪುಟ್ಟರಾಜು ಹುಟ್ಟುಹಬ್ಬ ವಿಜೃಂಭಣೆ ಆಚರಣೆ



ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಾರ್ಯಕರ್ತರು, ಅಭಿಮಾನಿಗಳು ಮಾಜಿ ಸಚಿವ ಪುಟ್ಟರಾಜು ಹುಟ್ಟುಹಬ್ಬದ ಅಂಗವಾಗಿ ಹಣ್ಣು–ಹಂಪಲು ವಿತರಣೆ ಮಾಡಿದರು.

ಪಾಂಡವಪುರ, ಸೆ.21–ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ 62ನೇ ಹುಟ್ಟುಹಬ್ಬವನ್ನು ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಭಾನುವಾರ ವಿಜೃಂಭಣೆಯಿಂದ ಆಚರಣೆ ಮಾಡಿದರು.

ಹುಟ್ಟುಹಬ್ಬವನ್ನು ಸರಳವಾಗಿ ಆಚರಣೆ ಮಾಡುವಂತೆ ಕಾರ್ಯಕರ್ತರು ಹಾಗೂ ಅಭಿಮಾನಿಗಳಿಗೆ ಪುಟ್ಟರಾಜು ಸೂಚನೆ ನೀಡಿದ ಹಿನ್ನೆಲೆಯಲ್ಲಿ ಬೆಳಿಗ್ಗೆ ಪಟ್ಟಣದ ಸುಬ್ರಹ್ಮಣ್ಯೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕ ಸಲ್ಲಿಸಿದರು. ಪ್ರಸಾದ ವಿತರಣೆ ಮಾಡಿದರು. ನಂತರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತೆರಳಿದ ಕಾರ್ಯಕರ್ತರು ಒಳ ಹಾಗೂ ಹೊರ ರೋಗಿಗಳಿಗೆ ಹಣ್ಣುಹಂಪಲು ವಿತರಿಸಿದರು.

ಪುರಸಭೆ ಸದಸ್ಯ ಆರ್.ಸೋಮಶೇಖರ್ ಮಾತನಾಡಿ, ಪುಟ್ಟರಾಜು ಅವರ ಹುಟ್ಟುಹಬ್ಬವನ್ನು ಪಟ್ಟಣದ ಎಲ್ಲಾ ವಾರ್ಡ್‌ಗಳಲ್ಲೂ ವಿಜೃಂಭಣೆಯಿಂದ ಆಚರಿಸಬೇಕೆಂದು ತೀರ್ಮಾನಿಸಿದ್ದೆವು. ಆದರೆ, ಅವರ ಕೋರಿಕೆಯಂತೆ ಸರಳವಾಗಿ ಆಚರಿಸಿದ್ದೇವೆ ಎಂದರು.

ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಪುರಸಭಾಧ್ಯಕ್ಷೆ ಜ್ಯೋತಿ ಲಕ್ಷ್ಮಿ, ಸದಸ್ಯರಾದ ಎಂ.ಗಿರೀಶ್, ಚಂದ್ರ ಮಾತನಾಡಿ, ಪುಟ್ಟರಾಜು ಅವರಿಗೆ ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಪಡಿಸುವ ಶಕ್ತಿ ಭಗವಂತ ಕರುಣಿಸಲೆಂದು ಹರಸಿದರು.

ಜೆಡಿಎಸ್ ಪಕ್ಷದ ಮುಖಂಡರಾದ ಚಿಕ್ಕಾಡೆ ಚೇತನ್, ಗಿರೀಶ್, ಮಾಣಿಕ್ಯನಹಳ್ಳಿ ಅಶೋಕ್, ಪುರಸಭೆ ಸದಸ್ಯ ಹಾರೋಹಳ್ಳಿ ಎ.ಕೃಷ್ಣ, ಶಿವಕುಮಾರ್, ಟೌನ್‌ಚಂದ್ರು, ಇಮ್ರಾನ್, ಆದರ್ಶ, ಶಾಂತಿನಗರ ರಾಜೇಶ್, ಬಿ.ಎಸ್. ಜಯರಾಮ್, ಬೊಮ್ಮರಾಜು, ಹಾರೋಹಳ್ಳಿ ಮಹೇಶ್, ಕೃಷ್ಣ ಹಿರೇಮರಳಿ ರಮೇಶ್, ಕುಮಾರ್, ಶಶಿಕುಮಾರ್, ಎಸ್ಸಿ, ಎಸ್‌ಟಿ ಟೌನ್ ಘಟಕದ ಅಧ್ಯಕ್ಷ ಗುರು, ಆರುಮುಗಂ, ಸಗಾಯಂ, ಮಹಮದ್‌ಗೌಸ್ ಸೇರಿದಂತೆ ಹಲವರು ಹಾಜರಿದ್ದರು.

**ರಾರಾಜಿಸಿದ ಕಟೌಟ್** : ಪಟ್ಟಣದ ಐದು ದೀಪವೃತ್ತದ ವೃತ್ತದಲ್ಲಿ ಪುಟ್ಟರಾಜು ಅವರ 62ನೇ ಹುಟ್ಟುಹಬ್ಬದ ಅಂಗವಾಗಿ ಮುಖಂಡ ಮಾಣಿಕ್ಯನಹಳ್ಳಿ ಅಶೋಕ್ 62 ಅಡಿ ಎತ್ತರದ ಕಟೌಟ್ ಹಾಕಿಸುವ ಮೂಲಕ ಎಲ್ಲರ ಗಮನ ಸೆಳೆದರು. ಕೇವಲ ಪಟ್ಟಣದಲ್ಲಿ ಮಾತ್ರವಲ್ಲಿ ತಾಲೂಕಿನ ಊರು–ಊರುಗಳಲ್ಲಿ ಅವರ ಕಟೌಟ್, ಬ್ಯಾನರ್‌ಗಳು ರಾರಾಜಿಸಿದವು.

## ಮಿಮ್ಸ್ ನಿರ್ದೇಶಕರನ್ನು ತರಾಟೆಗೆ ತೆಗೆದುಕೊಂಡ ರಾಜ್ಯ ಆಹಾರ ಆಯೋಗದ ಅಧ್ಯಕ್ಷ



ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಕೃಷ್ಣ ದಾಖಲೆಯನ್ನು ಎತ್ತಿ ತೋರಿಸುತ್ತಿರುವುದು.

ಮಂಡ್ಯ, ಸೆ.21–ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಮಿಮ್ಸ್) ಆಸ್ಪತ್ರೆಗೆ ರಾಜ್ಯ ಆಹಾರ ಆಯೋಗದ ಅಧ್ಯಕ್ಷರು ದಿಢೀರ್ ಭೇಟಿ ನೀಡಿ ಆಸ್ಪತ್ರೆ ಅವ್ಯವಸ್ಥೆ ವಿರುದ್ಧ ಆಕ್ರೋಷಗೊಂಡು ನಿರ್ದೇಶಕ, ವ್ಯವಸ್ಥಾಪಕ ನಿರ್ದೇಶಕರನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಜಿಲ್ಲಾ ಆಸ್ಪತ್ರೆಗೆ ನಿನ್ನೆ ರಾತ್ರಿ 7.30ರ ಸಮಯದಲ್ಲಿ ದಿಢೀರ್ ಭೇಟಿ ನೀಡಿದ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಕೃಷ್ಣ ರೋಗಿಗಳಿಗೆ ಪ್ರತಿನಿತ್ಯ ನೀಡುತ್ತಿರುವ ಆಹಾರದ ಗುಣಮಟ್ಟದ ಪರಿಶೀಲನೆ ನಡೆಸಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮಿಮ್ಸ್ ನಿರ್ದೇಶಕ ಡಾ.ನರಸಿಂಹಮೂರ್ತಿ ಹಾಗೂ ಡಾ.ಹೆಚ್.ಕೆ.ಶಿವಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡು ರೋಗಿಗಳಿಗೆ ಅವಧಿ ಮುಗಿದ ಬ್ರೇಡ್, ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸುತ್ತಿರುವ ಗುತ್ತಿಗೆದಾರನ ಟೆಂಡರನ್ನು ಕೂಡಲೇ ರದ್ದು ಮಾಡಿ ಹೊಸದಾಗಿ ಟೆಂಡರ್ ಕರೆಯಿರಿ ಎಂದು ತಾಕೀತು ಮಾಡಿದರು.

ರೋಗಿಗಳಿಗೆ ಪ್ರತಿದಿನ ಹಣ್ಣುಗಳನ್ನು ಕೊಡುವ ಜೊತೆಗೆ ಉತ್ತಮ ಗುಣಮಟ್ಟದ ಆಹಾರ ನೀಡಬೇಕು. ಊಟದ ಜೊತೆಯಲ್ಲಿ ಮೊಟ್ಟೆ ಮೊಸರು ಸಹಾ ನೀಡಬೇಕು ಎಂದು ಆದೇಶಿಸಿದರು. ಆಸ್ಪತ್ರೆಯಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕ ವಾಗಿ ಮಾಡುವಂತೆ ತಿಳಿಸಿದರು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಉಪಸ್ಥಿತರಿದ್ದರು.

## ಶಿಕ್ಷಕ ಕುಳ್ಳೇಗೌಡ ನಿಧನ



**ಕೆ.ಆರ್.ಪೇಟೆ:** ತಾಲೂಕಿನ ಬೂಕನಕೆರೆ ಹೋಬಳಿ ಗಂಜೀಗೆರೆ ಗ್ರಾಮದ ಪ್ರೌಢಶಾಲಾ ನಿವೃತ್ತ ಹಿಂದಿ ಶಿಕ್ಷಕ ಕುಳ್ಳೇಗೌಡರು (85) ನಿನ್ನೆ ರಾತ್ರಿ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಮೃತರು ಪುತ್ರಿ ಜಿಪಂ ಮಾಜಿ ಸದಸ್ಯೆ ಕೋಮಲ, ಮೂವರು ಪುತ್ರರು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮತ್ತು ಅಪಾರ ಶಿಷ್ಯ ವೃಂದವನ್ನು ಅಗಲಿದ್ದಾರೆ. ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದಲ್ಲಿ ಹಿಂದಿ ಶಿಕ್ಷಕರಾಗಿ ಸುದೀರ್ಘ ಸೇವೆ ಸಲ್ಲಿಸಿದ್ದರು. ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ ಗಂಜಿಗೆರೆ ಗ್ರಾಮದಲ್ಲಿ ನಡೆಯಿತು.

# ಮಾದಪ್ಪನ ಸನ್ನಿದಿಯಲ್ಲಿ ಅದ್ದೂರಿ ಮಹಾಲಯ ಅಮಾವಾಸ್ಯೆ ಜಾತ್ರೆ

### ಸ್ವಾಮಿಗೆ ವಿಶೇಷ ಪೂಜೆ, ಎಣ್ಣೆ ಮಜ್ಜನ ಸೇವೆ, ಲಕ್ಷಾಂತರ ಭಕ್ತರು ಬಾಗಿ

ಹನೂರು, ಸೆ21– ತಾಲೂಕಿನ ಪ್ರಸಿದ್ಧ ಕ್ಷೇತ್ರ ಮಲೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಭಾನುವಾರ ಮಹಾಲಯ ಅಮಾವಾಸ್ಯೆ ಜಾತ್ರೆ ಅದ್ದೂರಿಯಾಗಿ ನಡೆಯಿತು.



ಮಾದಪ್ಪನ ಜಾತ್ರೆಯಲ್ಲಿ ಪಾಲ್ಗೊಂಡಿರುವ ಅಪಾರ ಸಂಖ್ಯೆಯ ಭಕ್ತರು.

ಅಮಾವಾಸ್ಯೆಯ ಅಂಗವಾಗಿ ನಾಲ್ಕು ದಿನಗಳ ಕಾಲ ಬೆಟ್ಟದಲ್ಲಿ ನಡೆಯುವ ಜಾತ್ರಾ ಮಹೋತ್ಸವಕ್ಕೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಶುಕ್ರವಾರದಿಂದಲೇ ಮಾದಪ್ಪನಿಗೆ ವಿಶೇಷ ಪೂಜೆ ಪುನಸ್ಕಾರಗಳು ಆರಂಭವಾಗಿವೆ.

**ಮೂರು ದಿನಗಳ ವಿಶೇಷ ಪೂಜೆ:** ಮಹಾಲಯ ಅಮಾವಾಸ್ಯೆ ಅಂಗವಾಗಿ ಮೂರು ದಿನಗಳಿಂದ ಬೆಟ್ಟದಲ್ಲಿ ಮಾದಪ್ಪನಿಗೆ ವಿಶೇಷ ಪೂಜೆ– ಕೈಕಂರ್ಯಗಳು ನಡೆಯುತ್ತಿದ್ದು, ಬೆಟ್ಟಕ್ಕೆ ಲಕ್ಷಾಂತರ ಭಕ್ತರು ಭೇಟಿ ನೀಡಿ ಮಾದಪ್ಪನ ದರ್ಶನ ಪಡೆದಿದ್ದಾರೆ.

ಅಮಾವಾಸ್ಯೆ ಹಿನ್ನೆಲೆಯಲ್ಲಿ ಬೆಟ್ಟದ ಮಹದೇಶ್ವಸ್ವಾಮಿ ದೇವಸ್ಥಾನವನ್ನು ವಿವಿಧ ಪುಷ್ಪ, ತಳಿರು–ತೋರಣಗಳಿಂದ ಸಿಂಗರಿಸಲಾಗಿತ್ತು. ಅಲ್ಲದೇ, ಗೋಪುರ ಹಾಗೂ ದೇವಸ್ಥಾನದ ಆವರಣವನ್ನು ವಿವಿಧ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದು ಕಣ್ಮನ ಸೆಳೆಯಿತು.

ಭಾನುವಾರ ಬೆಳಗಿನ ಜಾವ 3 ಗಂಟೆಯಿಂದ 6.30ರವರೆಗೆ ಸ್ವಾಮಿಗೆ ಪ್ರಥಮ ಹಾಗೂ ದ್ವಿತೀಯ ವಿಶೇಷ ಪೂಜೆಯನ್ನು ನೆರವೇರಿಸಲಾಯಿತು. ಉಪವಾಸವಿದ್ದ ಬೇಡಗಂಪಣ ಸರದಿ ಅರ್ಚಕರು ಛತ್ರಿ–ಚಾಮರ ವಾದ್ಯ ಮೇಳದೊಂದಿಗೆ ನಂದನವನದ ಮಜ್ಜನ ಬಾವಿಗೆ ತೆರಳಿ ಆಗ್ರೋದಕ ಹಾಗೂ ಬಾಯಿಗೆ ಬಟ್ಟೆ ಕಟ್ಟಿಕೊಂಡು ಕರೆದ ಹಾಲನ್ನು ದೇಗುಲಕ್ಕೆ ತಂದರು.

ಬಳಿಕ ಸ್ವಾಮಿಗೆ ಸಂಕಲ್ಪಾಧಿ, ಗಣಪತಿ ಪೂಜೆ, ಪಂಚಕಳಸ ಪೂಜೆ, ಏಕವಾರು ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಎಳನೀರು, ಜೇನುತುಪ್ಪ, ಮೊಸರು, ಸಕ್ಕರೆ, ಖರ್ಜೂರ, ದ್ರಾಕ್ಷಿಯ ಮೂಲಕ ಹಾಲಿನ ಅಭಿಷೇಕ ನೆರವೇರಿಸಿದರು.

ಅಮಾವಾಸ್ಯೆ ಅಂಗವಾಗಿ ಸ್ವಾಮಿಯ ಮೂರ್ತಿಗೆ ನವರತ್ನ ಕಿರೀಟ ಧಾರಣೆಯ ಜೊತೆಗೆ ಕಾವಿ ವಸ್ತ್ರ, ರುದ್ರಾಕ್ಷಿ, ಭಸ್ಮ ಹಾಗೂ ಶ್ರೀಗಂಧದಿಂದ ಅಲಂಕಾರ ಮಾಡಿ ನಗಾರಿ, ಜಾಗಟೆ ಹಾಗೂ ವಾದ್ಯ ಮೇಳದೊಂದಿಗೆ ಧೂಪ, ದೀಪದಾರತಿ ಹಾಗೂ ಮಹಾ ಮಂಗಳಾರತಿ ಬೆಳಗಿಸಿ ದೀವಟಿಗೆ ಸೇವೆಯನ್ನು ನೆರವೇರಿಸಲಾಯಿತು.

ಸಾವಿರಾರು ಭಕ್ತರು ಹುಲಿವಾಹನ, ರುದ್ರಾಕ್ಷಿವಾಹನ ಹಾಗೂ ಬಸವ ವಾಹನವನ್ನು ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿಸುವುದರ ಮೂಲಕ ಉತ್ಸವದಲ್ಲಿ ಪಾಲ್ಗೊಂಡಿದ್ದರು.

### 2.5 ಲಕ್ಷ ಲಾಡು ಮಾರಾಟ

ಮಹಾಲಯ ಅಮಾವಾಸ್ಯೆ ಜಾತ್ರೆ ಮಹೋತ್ಸವ ಹಿನ್ನೆಲೆ ಲಕ್ಷಕ್ಕೂ ಹೆಚ್ಚು ಲಾಡು ಶೇಖರಣೆ ಮಾಡಲಾಗಿತ್ತು. ಇದರ ಜೊತೆಗೆ ಹೆಚ್ಚಿನ ಸಿಬ್ಬಂದಿಗಳನ್ನು ಬಳಕೆ ಮಾಡಿಕೊಂಡು ಒಂದೂವರೆ ಲಕ್ಷ ಲಾಡು ತಯಾರು ಮಾಡಲಾಗಿತ್ತು. ಬುಧವಾರ ಸಂಜೆಯವರೆಗೆ 2.5 ಲಕ್ಷ ಲಾಡು ಮಾರಾಟವಾಗಿದೆ ಎಂದು ತಿಳಿದು ಬಂದಿದೆ.

**ವಿಶೇಷ ದಾಸೋಹ ವ್ಯವಸ್ಥೆ :** ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ ಇ ರಘು ಅವರು ಮಲೆ ಮಾದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ಮಹಾಲಯ ಅಮಾವಾಸ್ಯೆ ಪೂಜೆಗೆ ಬಂದಿದ್ದ ಭಕ್ತಾದಿಗಳಿಗೆ ಯಾವುದೇ ಲೋಪದೋಷಗಳು ಬರದಂತೆ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಪರಿಶೀಲನೆ ನಡೆಸಿ ದಾಸೋಹ ಭವನಕ್ಕೆ ಭೇಟಿ ನೀಡಿ ಭಕ್ತರಿಗೆ ನೀಡುವ ಪ್ರಸಾದ ವ್ಯವಸ್ಥೆಯನ್ನು ಸಹ ಪರಿಶೀಲಿಸಿ ಬರುವಂತ ಭಕ್ತಾದಿಗಳಿಗೆ ಲೋಪದೋಷಗಳು ಆಗದಂತೆ ಸಿಬ್ಬಂದಿಗಳಿಗೆ ಕ್ರಮವಹಿಸುವಂತೆ ಸೂಚನೆ ನೀಡಿದರು.

ಉಪಹಾರ ಖಾರ ಪೊಂಗಲ್, ಸಿಹಿ ಪೊಂಗಲ್, ತರಕಾರಿ ಬಾತ್, ಪುಳಿಯೊಗರೆ, ಮೊಸರನ್ನ ಹಾಗೂ ಮಧ್ಯಾಹ್ನ ಉಪಹಾರ, ಅನ್ನ ಸಾಂಬಾರು, ಮೊಸರು ಹುಳಿ, ರಸಂ, ತರಕಾರಿ ಪಲ್ಯವನ್ನು ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ವಿತರಿಸಲಾಯಿತು.

## ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಶಿಕ್ಷಕ ಸಾವು



**ಚಾಮರಾಜನಗರ:** ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಚಾಮರಾಜನಗರ ತಾಲೂಕಿನ ಹರದನಹಳ್ಳಿ ಗ್ರಾಮದ ಡಾ.ಅಂಬೇಡ್ಕರ್ ವಸತಿ ಶಾಲೆಯಲ್ಲಿ ಶಿಕ್ಷಕರಾಗಿದ್ದ ಸೋಮಣ್ಣ (50) ಭಾನುವಾರ ಸಾವನ್ನಪ್ಪಿದ್ದಾರೆ.

ಒಂದು ವಾರದ ಹಿಂದೆ ಸೋಮವಾರಪೇಟೆ ಬೈಪಾಸ್ ಬಳಿ ಸ್ಕೂಟರ್‌ನಲ್ಲಿ ಅಪಘಾತಗೀಡಾಗಿದ್ದು ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು ಮೈಸೂರಿನ ಖಾಸಗೀ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಲ್ಲೂರು ಮೋಳೆ ಗ್ರಾಮದಲ್ಲಿ ಭಾನುವಾರ ಸಂಜೆ ನೆರವೇರಿತು.

## ಬೆಳ್ಳಿ ಪಲ್ಲಕ್ಕಿ ರಥದಲ್ಲಿ ರಾಜೇಂದ್ರ ಶ್ರೀಗಳ ಭಾವಚಿತ್ರ ಮೆರವಣಿಗೆ



ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಕಾರ್ಯಕ್ರಮ.

**ಚಾಮರಾಜನಗರ:** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 110ನೇ ಜಯಂತಿಯನ್ನು ಬೆಳ್ಳಿ ಪಲ್ಲಕ್ಕಿ ರಥದಲ್ಲಿ ಪೂಜ್ಯ ಶ್ರೀಗಳ ಭಾವಚಿತ್ರವನ್ನಿಟ್ಟು ಉಮ್ಮತ್ತೂರು ಗ್ರಾಮದ ರಾಜಬೀದಿಗಳಲ್ಲಿ ಮೆರವಣಿಗೆ ಮೂಲಕ ಆಚರಿಸಲಾಯಿತು.

ಮೆರವಣಿಗೆಯಲ್ಲಿ ಶಾಲಾ ಮಕ್ಕಳಿಂದ ಬ್ಯಾಂಡ್, ವೀರಗಾಸೆ ಕುಣಿತ, ವಾದ್ಯ ಕಲಾ ತಂಡಗಳು ಹಾಗೂ ನಂದಿ ಮೆರವಣಿಗೆ ಮೂಲಕ ಶಿಕ್ಷಕರು ಮತ್ತು ಸಾರ್ವಜನಿಕರು ಸಾಮೂಹಿಕವಾಗಿ ಪಾಲ್ಗೊಳ್ಳುವ ಮೂಲಕ ಯಶಸ್ವಿಯಾಗಿ ನಡೆಸಿ ಕೊಟ್ಟರು.

ನಂತರ ನಡೆದ ಸಭಾ ಕಾರ್ಯಕ್ರಮವನ್ನು ಚಾಮರಾಜನಗರದ ವಿರಕ್ತ ಮಠದ ಸಿದ್ಧಮಲ್ಲೇಶ್ವರ ಶ್ರೀ ಚನ್ನಬಸವ ಸ್ವಾಮಿಗಳು ರಾಜೇಂದ್ರ ಮಹಾಸ್ವಾಮಿಗಳ ದಾಸೋಹ, ಶಿಕ್ಷಣ ಸೇವೆ, ದಿವ್ಯದೃಷ್ಟಿ ಮತ್ತು ಅವರ ಸಾಮಾಜಿಕ ಕಳಕಳಿ ಬಗ್ಗೆ ಅರ್ಥಪೂರ್ಣವಾಗಿ ತಿಳಿಸಿದರು. ಕಬ್ಬಳಿಯ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಸ್.ಎಂ.ಸಿದ್ದರಾಜಪ್ಪ ಶ್ರೀಗಳ ನುಡಿ ನಮನದಲ್ಲಿ ಶಿಕ್ಷಣದಿಂದಲೇ ನಾಡಿನ ಸರ್ವತೋಮುಖ ಅಭಿವೃದ್ಧಿ ಸಾಧ್ಯ, ಎಲ್ಲಾ ಸಮಸ್ಯೆಗಳಿಗೂ ಶಿಕ್ಷಣವೇ ಸಂಜೀವಿನಿ. ಇದು ಪೂಜ್ಯರ ಧ್ಯೇಯೋದ್ದೇಶವಾಗಿತ್ತು. ನಿಸ್ವಾರ್ಥ ಸಮಾಜ ಸೇವೆಯನ್ನು ಪ್ರತಿಯೊಬ್ಬ ನಾಗರಿಕರು ಕಿಂಚಿತ್ತಾದರೂ ಅಳವಡಿಸಿಕೊಂಡರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬುದನ್ನು ಪೂಜ್ಯರ ಸಾಧನೆಗಳನ್ನು ಅರ್ಥಪೂರ್ಣವಾಗಿ ನೈಜ ಉದಾಹರಣೆಗಳ ಮೂಲಕ ವಿವರಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವೈದ್ಯಾಧಿಕಾರಿ ಡಾ.ರವಿ ಕಿರಣ್, ನಿರಂತರ ಪರಿಸರ ಸ್ವಚ್ಛತೆಯಿಂದ ಪ್ರತಿಯೊಬ್ಬರು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗೇಂದ್ರಸ್ವಾಮಿ, ಉಪಾಧ್ಯಕ್ಷ ನಂಜುಂಡ ಶೆಟ್ಟಿ, ಉಮ್ಮತ್ತೂರು ಗ್ರಾಪಂ ಅಧ್ಯಕ್ಷೆ ಶ್ರೀಮತಿ ರಾಜಮ್ಮ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿದರು. ಹಿರಿಯ ವಿದ್ಯಾರ್ಥಿಯಾದ ಐಟಿಐ ಅಧಿಕಾರಿ ಜಿ.ರವಿಶಂಕರ್ ಈ ಶಾಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮೂವರು ವಿದ್ಯಾರ್ಥಿಗಳಿಗೆ ಇವರ ತಂದೆ ದಿವಂಗತ ಎಂ.ಗುರುಮಲ್ಲಪ್ಪ ಹೆಸರಿನಲ್ಲಿ 5000 ರೂ ಬಹುಮಾನ ನೀಡಿದರು.

ಹಿರಿಯ ವಿದ್ಯಾರ್ಥಿಗಳಾದ ಮೋಹನ್ ಬಾಬು.ಎಸ್, ಶಾಂತಪ್ಪ, ನಾಗರಾಜ, ಮಹದೇವಸ್ವಾಮಿ, ಬಸವಣ್ಣ, ಬಿ.ಲಿಂಗರಾಜು, ಶ್ರೀಕಂಠ ಸ್ವಾಮಿ, ನಾಗೇಂದ್ರಸ್ವಾಮಿ ಇತರರಿದ್ದರು.

## ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಜಯಂತ್ಯುತ್ಸವ




ಜೆ.ಪಿ.ನಗರದ ಜೆಎಸ್‌ಎಸ್ ಪ್ರೌಢಶಾಲೆ, ಪದವಿಪೂರ್ವ ಕಾಲೇಜು ಮತ್ತು ಅಕ್ಷರದಾಸೋಹ ಕೇಂದ್ರದ ವತಿಯಿಂದ ಆಯೋಜಿಸಿದ್ದ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೆಯ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಸಂಸ್ಕೃತಿ ಚಿಂತಕ ಪೃಥ್ವಿರಾಜ್ ಹಾಲಹಳ್ಳಿ ನುಡಿನಮನ ಸಲ್ಲಿಸಿದರು. ಹುಲಿಯೂರುದುರ್ಗ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಶಿವಾನಂದ ಸ್ವಾಮಿಗಳು, ಎಸ್. ಪುಟ್ಟರಾಜಪ್ಪ, ಶಾಲಾ ಕಾಲೇಜು ಮತ್ತು ಅಕ್ಷರ ದಾಸೋಹ ಕೇಂದ್ರದ ಮುಖ್ಯಸ್ಥರು ಉಪಸ್ಥಿತರಿದ್ದರು.

## ಜೈನ ಧರ್ಮ, ಜಾತಿ ಕಾಲಂನಲ್ಲಿ 'ಜೈನ ದಿಗಂಬರ', 'ಜೈನ ಶ್ವೇತಾಂಬರ' ನಮೂದಿಸುವಂತೆ ಸೂಚನೆ

ಮೈಸೂರು, ಸೆ.21(ಎಸ್‌ಪಿಎನ್)– ರಾಜ್ಯದ 31 ಜಿಲ್ಲೆಗಳಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯಲ್ಲಿ ಜೈನ ಸಮುದಾಯ ಒಗ್ಗಟ್ಟಿನಿಂದ ಪಾಲ್ಗೊಳ್ಳುವಂತೆ ಶ್ರವಣಬೆಳಗೊಳದ ದಿಗಂಬರ ಜೈನ ಸಂಸ್ಥಾನ ಮಠದ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ವರ್ಯ ಭಟ್ಟಾರಕ ಪಟ್ಟಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸಿಸುವ ಜೈನ ಸಮುದಾಯದವರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಧರ್ಮ ಕಾಲಂನಲ್ಲಿ 'ಜೈನ', ಜಾತಿ ಕಾಲಂನಲ್ಲಿ 'ಜೈನ ದಿಗಂಬರ'/'ಜೈನ ಶ್ವೇತಾಂಬರ' ನಮೂದಿಸಿ. ಉಪ ಜಾತಿ ಕಾಲಂನಲ್ಲಿ ಜೈನ ಚತುರ್ಥ, ಪಂಚಮಿ, ಭೋಗಾರ, ಖಾಸಾರ, ಜವೇರಿ, ಸಾದರು, ನಾಮಧಾರಿ, ಬಳೆಗಾರ, ಚಿಪ್ಪಿಗರು, ಹೂಗಾರ, ಶೆಟ್ಟಿ, ಹೆಗ್ಗಡೆ, ಬಲ್ಲಾಳ, ಬಂಟರು, ಖಂಡೇಲವಾಲ್, ನಾಮಧಾರಿಗೌಡ ಸೇರಿದಂತೆ ಇತರೆ ಉಪಜಾತಿಗಳಿದ್ದಲ್ಲಿ ನಮೂದಿಸುವಂತೆ ಸೂಚಿಸಿದ್ದಾರೆ.

## ಯೋಗ ಭಾರತದ ಹುಟ್ಟಾದರೂ, ವಿದೇಶಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ

### ಅರ್ಕಧಾಮ ಸಂಸ್ಥಾಪಕ ಶ್ರೀನಿವಾಸ ಅರ್ಕ ಅಭಿಪ್ರಾಯ



ಶ್ರೀನಿವಾಸ ಅರ್ಕ ಎರಡು ಕೃತಿಗಳ ಲೋಕಾರ್ಪಣೆಗೊಳಿಸಿದರು.

ಮೈಸೂರು, ಸೆ.21(ವಿವಿಹೆಚ್)– ಯೋಗ ಭಾರತದ ಹುಟ್ಟಾದರೂ, ಯೋಗ ಭಾರತಕ್ಕಿಂತ ವಿದೇಶಗಳಲ್ಲಿ ಹೆಚ್ಚು ಪ್ರಸಿದ್ಧಿ ಹಾಗೂ ಪ್ರಾಮುಖ್ಯತೆ ಪಡೆದುಕೊಂಡಿದೆ ಎಂದು ಮೈಸೂರು ಅರ್ಕಧಾಮ ಸಂಸ್ಥಾಪಕ ಶ್ರೀನಿವಾಸ ಅರ್ಕ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಯೋಗ ಅಸೋಸಿಯೇಷನ್ ಹಿಮಾಲಯ ಪ್ರತಿಷ್ಠಾನ ಸಹಯೋಗದಲ್ಲಿ ನಗರದ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲಿ ಭಾನುವಾರ ಆಯೋಜಿಸಿದ್ದ ಯೋಗ ಶಿಕ್ಷಕ ಡಾ.ನೀಲ್ ಕುಲಕರ್ಣಿ ಬರೆದಿರುವ ಅಧಿಯೋಗ ಸೂತ್ರಗಳ (ಕನ್ನಡ ಅನುವಾದ) ಹಾಗೂ ಅಧಿಯೋಗ ಪುರಾಣ (ಇಂಗ್ಲೀಷ್)ಎರಡು ಪುಸ್ತಕಗಳ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಭಾರತದಲ್ಲಿ ಯೋಗಕ್ಕೆ ಅತ್ಯಧಿಕವಾದ ಮನ್ನಣೆ ಹಾಗೂ ಅದನ್ನು ಬದುಕಿನ ಭಾಗವಾಗಿಸಿಕೊಂಡು ಜೀವನದ ಸಾರ್ಥಕವನ್ನಾಗಿಸಿಕೊಳ್ಳುವ ಕೆಲಸವಾಗಬೇಕು. ಯೋಗ ಮನುಷ್ಯನ ಆಧ್ಯಾತ್ಮಿಕತೆಯ ಅಂತರಾಳದ ಸಾಧನ. ಯೋಗ ಸಿದ್ದಿಸಿಕೊಂಡಿದ್ದಲ್ಲಿ ಬದುಕಿನಲ್ಲಿ ಸಕಲವನ್ನು ಪಡೆದುಕೊಳ್ಳಲು ನಮ್ಮಲ್ಲಿ ಸ್ಫೂರ್ತಿಗೊಳಿಸುತ್ತದೆ. ಮನುಷ್ಯನ ಹುಟ್ಟಿನಿಂದ ಮುಕ್ತಿಯವರೆಗೂ ಯೋಗ ಅತ್ಯವಶ್ಯಕವಾದದ್ದು ಎಂದು ತಿಳಿಸಿದರು.

ಇವತ್ತಿನ ಎರಡು ಕೃತಿಗಳನ್ನು ಪುಸ್ತಕವೆನ್ನದೇ ಅವುಗಳನ್ನು ಗ್ರಂಥಗಳೆಂದು ಭಾವಿಸಬೇಕು. ಅವುಗಳು ಅತ್ಯಂತ ಬ್ರಹ್ಮಾಂಡತರವಾದ ವಿಚಾರವನ್ನು ಒಳಗೊಂಡಿವೆ. ಪ್ರತಿಯೊಬ್ಬರೂ ಓದಲೇಬೇಕಾದ ಹಾಗೂ ಅವುಗಳಲ್ಲಿರುವ ಸತ್ವವನ್ನು ಅರಿತು ಪಾಲಿಸುವ ಅಭ್ಯಾಸ ಬೆಳಸಿಕೊಳ್ಳಬೇಕು ಎಂದರು.

ಮೈಸೂರು ಭಾರತೀಯ ವಿದ್ಯಾ ಭವನ ಖಜಾಂಚಿ ಡಾ.ಎಂ.ಟಿ ಭಾಷ್ಯಂ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸುಯೋಗ ಆಸ್ಪತ್ರೆ ಮುಖ್ಯಸ್ಥ ಡಾ. ಎಸ್.ಪಿ.ಯೋಗಣ್ಣ, ಸಮಾಜ ಸೇವಕ ರಘು ರಾಮ್ ವಾಜಪೇಯಿ, ಹಿಮಾಲಯ ಪ್ರತಿಷ್ಠಾನ ಅನಂತ್ ಉಪಸ್ಥಿತರಿದ್ದರು.

## ಸೇನಾ ವಿಶೇಷ ಗೂಡ್ಸ್ ರೈಲಿಗೆ ಬೆಂಕಿ



**ಉಜ್ಜಯಿನಿ (ಮಧ್ಯಪ್ರದೇಶ):** ಇಲ್ಲಿನ ರೈಲ್ವೆ ನಿಲ್ದಾಣದಲ್ಲಿದ್ದ ಸೇನಾ ವಿಶೇಷ ಗೂಡ್ಸ್ ರೈಲಿನಲ್ಲಿ ಭಾನುವಾರ ಅಗ್ನಿ ಅವಘಡ ಸಂಭವಿಸಿದ್ದು, ಹೆಚ್ಚಿನ ಹಾನಿ ಆಗಿಲ್ಲ.

ರೈಲಿನಲ್ಲಿ ಟ್ರಕ್‌ಗಳನ್ನು ಕೊಂಡೊಯ್ಯಲಾಗುತ್ತಿತ್ತು. ಇವುಗಳಿಗೆ ಮುಚ್ಚಿದ್ದ ಟಾರ್ಪಾಲಿನ್‌ಗೆ ಬೆಳಿಗ್ಗೆ 9.30ರ ವೇಳೆಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಟ್ರಕ್‌ಗಳನ್ನು ತುಂಬಿದ್ದ ಭೋಪಾಲ್–ಜೋಧ್‌ಪುರ ಸೇನಾ ವಿಶೇಷ ಗೂಡ್ಸ್ ರೈಲಿನಲ್ಲಿ ಸಂಭವಿಸಿದ ಅಗ್ನಿ ಅವಘಡದಿಂದಾಗಿ, ನಿಲ್ದಾಣದ ಚಾವಣಿಗೆ ಹಾನಿಯಾಗಿದೆ ಎಂದು ಆರ್‌ಪಿಎಫ್ ಇನ್‌ಸ್ಪೆಕ್ಟರ್ ನರೇಂದ್ರ ಯಾದವ್ ತಿಳಿಸಿದ್ದಾರೆ.

## ಕುಂಚಿಟಿಗರ ಜನಜಾಗೃತಿ ಸಭೆ; ನಮ್ಮದು ಸ್ವತಂತ್ರ ಜಾತಿ



ಮೈಸೂರು ಕುಂಚಿಟಿಗರ ಸಂಘದಿಂದ ಜಾತಿಗಣತಿ ಜನಜಾಗೃತಿ ಸಭೆಯನ್ನು ಉದ್ಘಾಟಿಸಲಾಯಿತು.

ಮೈಸೂರು, ಸೆ.21– ಮೈಸೂರು ಕುಂಚಿಟಿಗರ ಸಂಘದಿಂದ ಜಾತಿಗಣತಿಯ ವಿಷಯವಾಗಿ ಜನಜಾಗೃತಿ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಇರುವ ಕುಂಚಿಟಿಗರ ಸಂಘಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಈ ಸಭೆಯಲ್ಲಿ ಮೈಸೂರು ಕುಂಚಿಟಿಗರ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಕುಂಚಿಟಿಗರ ಸಂಘದ ಮಹಾಮಂಡಲದ ಅಧ್ಯಕ್ಷರು ಹಾಸನ ಜಿಲ್ಲಾ ಕುಂಚಿಟಿಗರ ಸಂಘದ ಅಧ್ಯಕ್ಷರು, ಚಾಮರಾಜನಗರ, ಕೊಳ್ಳೇಗಾಲ ತಾಲೂಕು, ಪಿರಿಯಾಪಟ್ಟಣ, ತುಮಕೂರು, ಶಿರಾ, ಚಿತ್ರದುರ್ಗ, ಹಿರಿಯೂರು, ಮಡಕಸಿರ, ಕನಕಪುರ ಕುಂಚಿಟಿಗರ ಸಂಘಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಕುಂಚಿಟಿಗ ಜನಾಂಗವನ್ನು ಸ್ವತಂತ್ರ ಜಾತಿಯೆಂದು ಸರ್ಕಾರ ಕೊಟ್ಟಿರುವ ಕೋಡ್ ನಂಬರ್ 0–0795 ಬರೆಸಬೇಕೆಂದು ಸಭೆಯಲ್ಲಿ ಒಮ್ಮತದ ತೀರ್ಮಾನ ತೆಗೆದುಕೊಳ್ಳಲಾಯಿತು. ಕುಂಚಿಟಿಗ ಜಾತಿಯಲ್ಲಿ ಯಾವ್ರದೇ ಉಪ ಜಾತಿ ಇರುವುದಿಲ್ಲ ಎಂದು ಸಹ ನಿರ್ಣಯ ತೆಗೆದುಕೊಳ್ಳಲಾಯಿತು.

# ಅಚ್ಚ–ಸ್ವಚ್ಛ ಮೈಸೂರು ದಸರೆಗೆ ಮುನ್ನುಡಿ ಬರೆಯೋಣ...!

### ಮೈಗ್ರಾಪ, ಜಿಎಸ್‌ಎಸ್ ವಿದ್ಯೋದಯ ಸಂಸ್ಥೆ ಕಳಕಳಿ




ಮೈಸೂರು, ಸೆ.21(ಎಸ್‌ಪಿಎನ್)– ಈ ಬಾರಿಯ ನಾಡಹಬ್ಬ ದಸರಾ ಮಹೋತ್ಸವದ ಸೊಬಗಿಗೆ ಪ್ರವಾಸಿಗರು ಮೈಮರೆತರೂ 'ಮೈಸೂರಿನ ಸ್ವಚ್ಛತೆ' ವಿಚಾರದಲ್ಲಿ ಯಾರೊಬ್ಬರು ಮೈಮರೆಯಬಾರದು. ದಸರಾ ಆಚರಣೆಯಲ್ಲಿ ಅಚ್ಚ–ಸ್ವಚ್ಛ ದಸರೆಗೆ ಮುನ್ನುಡಿ ಬರೆಯೋಣ ಎಂದು ಮೈಸೂರು ಗ್ರಾಹಕ ಪರಿಷತ್ ಹಾಗೂ ಜಿಎಸ್‌ಎಸ್ ವಿದ್ಯೋದಯ ಸಂಸ್ಥೆ ಪ್ರವಾಸಿಗರಲ್ಲಿ ಮನವಿ ಮಾಡಿದೆ.

ವಿಶ್ವವಿಖ್ಯಾತ ಮೈಸೂರು ದಸರಾ ಕರ್ನಾಟಕದ ಹೆಮ್ಮೆಯ ನಾಡಹಬ್ಬ. ಪ್ರತಿ ವರ್ಷವೂ, ಲಕ್ಷಾಂತರ ಪ್ರವಾಸಿಗರು ಮತ್ತು ನಿವಾಸಿಗಳು ಇದರ ಬಗೆಬಗೆಯ ವರ್ಣರಂಜಿತ ಕಾರ್ಯಕ್ರಮಗಳನ್ನು ವಿವಿಧ ವೇದಿಕೆಯಲ್ಲಿ ಸವಿಯಲು ಸೇರುತ್ತಾರೆ. ವಿವಿಧ ವೇದಿಕೆಗಳಲ್ಲಿ ಶಾಸ್ತ್ರೀಯ ಸಂಗೀತ, ಜಾನಪದ ಮತ್ತು ಆಧುನಿಕ ಸಂಗೀತ, ನೃತ್ಯ, ನಾಟಕ, ಚಿತ್ರ, ಕ್ರೀಡೆಗಳಿಂದಿಡಿದು ಪುರಾತನ ಶೈಲಿಯ ನವರಾತ್ರಿ ಧಾರ್ಮಿಕ ಆಚರಣೆಗಳನ್ನು ಇಲ್ಲಿ ಕಾಣಬಹುದು.

ಈ ನವರಾತ್ರಿ ಹಬ್ಬ ಹತ್ತನೆಯ ದಿನ ಭವ್ಯವಾದ ಜಂಬೂಸವಾರಿ ಮೆರವಣಿಗೆ ಮೂಲಕ ಕೊನೆಗೊಳ್ಳುತ್ತದೆ. ಈ ಮೆರವಣಿಗೆಯಲ್ಲಿ ಅಲಂಕೃತ ಆನೆಗಳು ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ಹೊತ್ತು ನಮ್ಮ ರಾಜಬೀದಿಗಳಲ್ಲಿ ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗುತ್ತವೆ. ಈ ಭವ್ಯ ಮೆರವಣಿಗೆಗೆ ಕಣ್ತುಂಬಿಕೊಳ್ಳಲು ಲಕ್ಷಾಂತರ ಪ್ರವಾಸಿಗರು, ಆಧ್ಯಾತ್ಮ ಚಿಂತಕರು, ಸಾರ್ವಜನಿಕರು ಒಂದೆಡೆ ಸೇರುವ ಜಾಗದಲ್ಲಿ ರಾಶಿರಾಶಿ ಕಸದ ಗುಡ್ಡೆ ಹಾಕುತ್ತಾರೆ. ಹಬ್ಬದ ನೆಪದಲ್ಲಿ ಕಸದ ರಾಶಿ ಕಂಡು 'ಇದೆಲ್ಲ ಆಗೇ ಆಗುತ್ತೆ', 'ಏನೂ ಮಾಡೋಕ್ಕಾಗಲ್ಲ' ಎಂದು ನೆಪ ಹೇಳಿ ಒಪ್ಪಿಕೊಳ್ಳಬೇಕೇ? ಎಂಬ ಮನಸ್ಥಿತಿ ಇದೆ. ಇದು ಸರಿಯಾದ ಉತ್ತರವಲ್ಲ ಎಂಬುದನ್ನು ಮನಗಾಣಬೇಕು.

ಈ ಸಲ, ಸಂಪೂರ್ಣ ಸ್ವಚ್ಛ ದಸರಾ ಆಚರಣೆ ಸಲುವಾಗಿ ಒಂದು ಸಂಕಲ್ಪ ಮಾಡೋಣ. ಪ್ರತಿಯೊಬ್ಬ ಮೈಸೂರಿಗರು ಮತ್ತು ಪ್ರವಾಸಿಗರು, ಎರಡು ಸರಳ, ಪವಿತ್ರ ಮಂತ್ರಗಳ ಪಾಲಿಸಬೇಕು. ದಸರಾ ನೋಡಲು ಬರುವ ಪ್ರವಾಸಿಗರು ಎಲ್ಲೆಂದರಲ್ಲಿ 'ಕಸ ಬಿಸಾಡಬೇಡಿ' 'ಇತರರೂ ಕಸ ಎಸೆಯುವುದನ್ನು ನಿಲ್ಲಿಸಿ' ಪಠಿಸೋಣ ಎಂಬುದು ಮೈಗ್ರಾಪ ಸಂಸ್ಥಾಪಕ ಕಾರ್ಯಾಧ್ಯಕ್ಷ ಬಾಮಿ ವಿ.ಶೆಣೈ ಹಾಗೂ ಜಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಕಾರ್ಯದರ್ಶಿ ವಾಸುದೇವ್ ಭಟ್ ಕಿವಿಮಾತಾಗಿದೆ.

ಈಗಾಗಲೇ ಮೈಸೂರಿನ ವಿವಿಧ 19 ಶಾಲೆಯ ವಿದ್ಯಾರ್ಥಿಗಳು ಜನರು ಈ ಜವಾಬ್ದಾರಿಯನ್ನು ನೆನಪಿಸಲು ತಮ್ಮ ತರಗತಿಗಳಲ್ಲಿ ಪೋಸ್ಟರ್‌ಗಳನ್ನು ಪ್ರದರ್ಶಿಸುವ ಮೂಲಕ ಕೈಜೋಡಿಸಿವೆ. ಮಕ್ಕಳೇ ಸಾರ್ವಜನಿಕರ ರಾಯಭಾರಿಗಳಾಗಿ ವರ್ತಿಸಿದಾಗ, ಪರಿಣಾಮವು ದ್ವಿಗುಣಗೊಳ್ಳುತ್ತದೆ. ಶಿಕ್ಷಕರು ಸಹ ತಮ್ಮ ವಿದ್ಯಾರ್ಥಿಗಳನ್ನು ಮಾದರಿಯಾಗಿ ಮುನ್ನಡೆಸಲು ಪ್ರೇರೇಪಿಸಬಹುದು. ನಮ್ಮ ನಗರವನ್ನು ಸ್ವಚ್ಛವಾಗಿಡುವುದು ಸಮಾಜದ ಮೇಲಿನ ಹೆಮ್ಮೆಯ ಕರ್ತವ್ಯವಾಗಿದೆ ಎಂದು ದೃಢಪಡಿಸಬಹುದು ಎಂದು ತಿಳಿಸಿದ್ದಾರೆ.

ಈ ಅಭಿಯಾನಕ್ಕೆ ಸ್ಫೂರ್ತಿದಾಯಕವಾಗಿ ಎಸ್‌ಡಿಎಂ ಮ್ಯಾನೇಜ್‌ಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಜೊತೆಗೆ ಇತರೆ ಕಾಲೇಜಿನ ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡು, ಚಾಮುಂಡಿಬೆಟ್ಟಕ್ಕೆ ಹೋಗುವ ರಸ್ತೆಯ ಸ್ವಚ್ಛತೆ ಕಾಪಾಡುವ ಹೊಣೆ ಹೊತ್ತಿದ್ದಾರೆ. ಅಂತೆಯೇ ತಮ್ಮ ಜವಾಬ್ದಾರಿ ಮರೆಯಬೇಕಾದ ನಾಗರಿಕರು ಎಲ್ಲೆಂದರಲ್ಲಿ ಎಸೆದ ಕಸವನ್ನು ಸಂಗ್ರಹಿಸಲು ನಗರದ ಹಲವಾರು ಸೇವಾ ಸಂಸ್ಥೆಗಳು ದಣಿವರಿಯದೆ ಕೆಲಸ ಮಾಡುತ್ತಿವೆ. ನಾವೆಲ್ಲರೂ ಈ ಮಂತ್ರಗಳನ್ನು ಅಳವಡಿಸಿಕೊಂಡರೆ ಅವರ ಹೊರೆ ಕಡಿಮೆ ಮಾಡಬಹುದು.



**ಮೈಸೂರು ಮಿತ್ರ 46 ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

# ರೈತರ ಸ್ವಾವಲಂಬಿ ಬದುಕಿಗೆ ಹೈನುಗಾರಿಕೆ ಸಹಕಾರಿ

## ಬಿಲಿಗೆರೆಹುಂಡಿ ಡೇರಿ ಅಧ್ಯಕ್ಷ ಬಿ.ಮಹದೇವಸ್ವಾಮಿ



ವಾರ್ಷಿಕ ಸಭೆಯಲ್ಲಿ ಸಂಘದ ಅಧ್ಯಕ್ಷ ಬಿ.ಮಹದೇವಸ್ವಾಮಿ ಮಾತನಾಡಿದರು.

ತಿ.ನರಸೀಪುರ, ಸೆ.21– ಹಾಲು ಉತ್ಪಾದಕರು ಸಂಘಕ್ಕೆ ಸರಬರಾಜು ಮಾಡುವ ಗುಣಮಟ್ಟದ ಹಾಲು ಸಂಘದ ಸದೃಢತೆಯನ್ನು ಕಾಪಾಡುತ್ತದೆ ಎಂದು ಬಿಲಿಗೆರೆಹುಂಡಿ ಡೇರಿ ಅಧ್ಯಕ್ಷ ಬಿ.ಮಹದೇವಸ್ವಾಮಿ ತಿಳಿಸಿದರು.

ತಾಲೂಕಿನ ಬಿಲಿಗೆರೆಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತರು ಸ್ವಾವಲಂಬಿ ಬದುಕು ಸಾಗಿಸಲು ಹೈನುಗಾರಿಕೆ ಸಹಕಾರಿಯಾಗಿದೆ. ರೈತರ ಕಷ್ಟದಲ್ಲಿ ಕೈ ಹಿಡಿದಿರುವುದೇ ಹೈನುಗಾರಿಕೆ. ಹೀಗಾಗಿ ರೈತರು ಗುಣಮಟ್ಟದ ಹಾಲನ್ನು ಸಂಘಕ್ಕೆ ಸರಬರಾಜು ಮಾಡಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದು ಕಿವಿಮಾತು ಹೇಳಿದರು.

ಮೈಮುಲ್ ಒಕ್ಕೂಟದ ಮಾರ್ಗ ವಿಸ್ತರಣಾಧಿಕಾರಿ ಕೆ.ಎನ್.ಶೃತಿ ಮಾತನಾಡಿ, ಗುಣಮಟ್ಟದ ಹಾಲು ಉತ್ಪಾದನೆಗೆ ರಾಸುಗಳಿಗೆ ಸಮ ಪ್ರಮಾಣದಲ್ಲಿ ಆಹಾರ ನೀಡಬೇಕು. ಇಲ್ಲವಾದಲ್ಲಿ ಫ್ಯಾಟ್‌ನಲ್ಲಿ ಏರಿಳಿತ ಕಂಡು ಬರುತ್ತದೆ. ರಾಸುಗಳಿಗೆ ಹಸಿರು ಮೇವಿನ ಜೊತೆಗೆ ಒಣ ಹುಲ್ಲು, ಪೌಷ್ಟಿಕ ಆಹಾರ, ಫೀಡ್ಸ್ ಅನ್ನು ಸಮ ಪ್ರಮಾಣದಲ್ಲಿ ನೀಡಬೇಕು. ಇದರಿಂದ ರಾಸುಗಳಿಗೆ ಕ್ಯಾಲ್ಸಿಯಂ ಇನ್ನಿತರ ಖನಿಜಾಂಶಗಳು ದೊರಕುತ್ತವೆ. ಆಗ ಗುಣಮಟ್ಟದ ಹಾಲು ದೊರೆಯುತ್ತದೆ ಎಂದರು.

ಸಂಘದ ಸಿಇಓ ಪುರುಷೋತ್ತಮ್ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘವು ಪ್ರಸಕ್ತ ಸಾಲಿನಲ್ಲಿ 209875 ರೂ. ನಿವ್ವಳ ಲಾಭ ಗಳಿಸಿದೆ. ಲಾಭಾಂಶದಲ್ಲಿ 98 ಸಾವಿರ ರೂ.ಗಳನ್ನು ಡೈರಿಗೆ ಹಾಲು ಸರಬರಾಜು ಮಾಡುವ 110 ರೈತರಿಗೆ ಬೋನಸ್ ನೀಡಲಾಗುತ್ತದೆ ಎಂದರು.

ಇದಕ್ಕೂ ಮೊದಲು ಸಭೆಯಲ್ಲಿ ಡೆವಿಡೆಂಟ್ ಹಣವನ್ನು ಡೈರಿ ನಿವೇಶನದಲ್ಲಿ ನಿರ್ಮಾಣವಾಗುತ್ತಿರುವ ಬಿಎಂಸಿ ಕಟ್ಟಡಕ್ಕೆ ಬಳಸಿಕೊಳ್ಳುವ ಸಂಬಂಧ ಚರ್ಚೆ ನಡೆಯಿತು. ಕೆಲವರು ಲಾಭಾಂಶವನ್ನು ರೈತರಿಗೆ ಬೋನಸ್ ರೂಪದಲ್ಲಿ ನೀಡಿ ಎಂದರೆ ಮತ್ತೆ ಕೆಲವರು ಬೋನಸ್ ಹಣವನ್ನು ಬಿಎಂಸಿ ಕಟ್ಟಡಕ್ಕೆ ಬಳಸಿಕೊಳ್ಳುವಂತೆ ಸಲಹೆ ನೀಡಿದರು. ಈ ಬಗ್ಗೆ ಪರ ವಿರೋಧದ ಚರ್ಚೆ ನಡೆದು ಅಂತಿಮವಾಗಿ ಬೋನಸ್ ಹಣವನ್ನು ರೈತರಿಗೆ ಹಂಚಿಕೆ ಮಾಡಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷ ಮಂಜು, ನಿರ್ದೇಶಕರಾದ ಮಹದೇವಪ್ಪ, ಎನ್.ಮಹೇಶ್, ಬಿ.ಸುಂದರಸ್ವಾಮಿ, ಶಂಕರ್, ನಾಗರಾಜು, ಸಿದ್ದೇಗೌಡ, ಸಣ್ಣಯ್ಯ, ಮಹಾದೇವನಾಯಕ, ಸ್ವಾಮಿ, ಪಿ.ಮಹದೇವಮ್ಮ, ಪಿ.ಪುಟ್ಟಮಲ್ಲಮ್ಮ, ಹಾಲು ಪರೀಕ್ಷಕ ಅಭಿಷೇಕ್, ಸಹಾಯಕ ರಾಜಣ್ಣ ಸೇರಿದಂತೆ ಮತ್ತಿತರರಿದ್ದರು.

# ಪ್ರತಿಯೊಂದು ಸಮಾಜಕ್ಕೂ ಶಾಸಕ ಅನಿಲ್‌ರಿಂದ ಸೌಲಭ್ಯ

## ಓಣಂ ಹಬ್ಬದಲ್ಲಿ ಶಾಸಕ ಅನಿಲ್ ಅವರ ಪತ್ನಿ ಸೌಮ್ಯ


ಕಾರ್ಯಕ್ರಮವನ್ನು ಶಾಸಕ ಅನಿಲ್ ಅವರ ಪತ್ನಿ ಸೌಮ್ಯ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಸೆ.21– ಪ್ರತಿಯೊಂದು ಸಮಾಜಕ್ಕೂ ಸಮಾನತೆ ಕಲ್ಪಿಸುವ ನಿಟ್ಟಿನಲ್ಲಿ ಶಾಸಕ ಅನಿಲ್ ಅವರು ಜಾತ್ಯಾತೀತ, ಪಕ್ಷಾತೀತವಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಹಾಗಾಗಿ ತಾಲೂಕಿನ ಜನತೆ ಅವರನ್ನು 2ನೇ ಬಾರಿಗೆ ಶಾಸಕರನ್ನಾಗಿ ಆಯ್ಕೆ ಮಾಡಿದ್ದಾರೆ ಎಂದು ಶಾಸಕ ಅನಿಲ್ ಅವರ ಪತ್ನಿ ಸೌಮ್ಯ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಕೈರಳಿ ಸಾಂಸ್ಕೃತಿಕ ವೇದಿಕೆ, ತಾಲೂಕು ಕೇರಳ ಸಮಾಜದಿಂದ ಆಯೋಜಿಸಿದ್ದ ಓಣಂ ಹಬ್ಬ ಉದ್ಘಾಟಿಸಿ ಮಾತನಾಡಿದ ಅವರು, ಶಾಸಕ ಅನಿಲ್ ಅವರು ತಾಲೂಕಿನ ಪ್ರತಿಯೊಂದು ಸಮಾಜವನ್ನು ಗೌರವಿಸುವುದರ ಜೊತೆಗೆ ಅವರ ಬೇಡಿಕೆಗಳನ್ನು ಈಡೇರಿಸುವುದಲ್ಲದೇ ಸರ್ಕಾರದ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಮುಂದಾಗಿದ್ದಾರೆ. ನಿಮ್ಮ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಹಾಗೂ ಸ್ಮಶಾನಕ್ಕೆ ಭೂಮಿ ನೀಡುವಂತೆ ನೀಡಿರುವ ಮನವಿಯನ್ನು ಶಾಸಕರ ಗಮನಕ್ಕೆ ತಂದು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಕೋಟೆಯಲ್ಲಿ ಈ ಹಿಂದೆ ಇದ್ದ ರಾಜಕಾರಣಿಗಳಿಗಿಂತ ನಮ್ಮ ಶಾಸಕರು ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಮೈಸೂರು–ಮಾನಂದವಾಡಿ ಮುಖ್ಯರಸ್ತೆ ಅಭಿವೃದ್ಧಿಪಡಿಸುವಂತೆ ಕೂಗು ಕೇಳಿ ಬರುತ್ತಿದ್ದು, ಮುಂದಿನ ದಿನಗಳಲ್ಲಿ ಜೋಡಿ ರಸ್ತೆ ಆಗಲಿದೆ. ಇದಕ್ಕೆ ಸ್ವಲ್ಪ ಕಾಲವಕಾಶ ಬೇಕಿದೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನಾ ಮಹಾಬಲಿ ಚಕ್ರವರ್ತಿ ವೇಷಧಾರಿ ಕಲಾವಿದರೊಂದಿಗೆ ಚಂಡೇ ಮೂಲಕ ಮೆರವಣಿಗೆ ನಡೆಸಲಾಯಿತು. ಬಳಿಕ ಶಾಸಕ ಅನಿಲ್ ಅವರ ಪತ್ನಿ ಸೌಮ್ಯ ಅವರನ್ನು ಸ್ವಾಗತಿಸಿ ಕನ್ನಡ ಧ್ವಜಾರೋಹಣ ನೆರವೇರಿಸಲಾಯಿತು.

ಈ ವೇಳೆ ಕೇರಳ ಸಮಾಜದ ತಾಲೂಕು ಅಧ್ಯಕ್ಷ ಮನೋಜ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್, ಸದಸ್ಯ ಪ್ರೇಮ್ ಸಾಗರ್, ಕಸಾಪ ಅಧ್ಯಕ್ಷ ಕನ್ನಡ ಪಮೋದ್, ಉದ್ಯಮಿ ವೆಂಕಟೇಶ್ ಪ್ರಸಾದ್, ತಮಿಳು ಸಂಘದ ಅಧ್ಯಕ್ಷ ಪಳನಿಸ್ವಾಮಿ, ವರ್ತಕರ ಸಂಘದ ಅಧ್ಯಕ್ಷ ವಿನಯ್ ಭಜರಂಗಿ, ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಸೌಮ್ಯ, ಜಶೀಲಾ, ಭಾಗ್ಯಲಕ್ಷ್ಮಿ, ಥಾಮಸ್ಸ್, ಮುತ್ತಪ್ಪನ್, ಗೌರವಾಧ್ಯಕ್ಷರಾದ ಕೆ.ಎಸ್.ಮಣಿ, ಎ.ಡಿ.ಥಾಮಸ್, ಕೆ.ಮನೋಜ್, ಕಾರ್ಯಾಧ್ಯಕ್ಷ ಆರ್.ಮಧು, ಉಪಾಧ್ಯಕ್ಷರಾದ ಎಂ.ಟಿ.ಮಂಜುನಾಥ್, ಕೆ.ಅಶೋಕನ್, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಸಹ ಕಾರ್ಯದರ್ಶಿ ಆನಂದ, ಖಜಾಂಚಿ ವಿನೀಶ್, ವಿಜೀಸ್, ದಿನೇಶ್, ಬಾಬುನೇಹ, ರಹೀಂ, ವಿಪಿನ್, ಬಿಜು ವರ್ಗೀಸ್, ಮೋಹನ್, ಫಾಯಿಸ್, ಅಭಿಜಿತ್ ಸಮಾಜದ ಸಮಿತಿ ಸದಸ್ಯರು, ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

# ಮುತ್ತಿನ ಮುಳುಸೋಗೆಯಲ್ಲಿ ಬಿಎಂಸಿ ಕೇಂದ್ರ ಉದ್ಘಾಟನೆ


ಬಿಎಂಸಿ ಕೇಂದ್ರವನ್ನು ಮೈಮುಲ್ ನಿರ್ದೇಶಕ ಪಿ.ಎಂ.ಪ್ರಸನ್ನ ಉದ್ಘಾಟಿಸಿದರು.

ಬೆಟ್ಟದಪುರ, ಸೆ.21– ಪಿರಿಯಾಪಟ್ಟಣ ತಾಲೂಕಿನ ಮುತ್ತಿನ ಮುಳುಸೋಗೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಹಾಲು ಶೀಥಲೀಕರಣ ಘಟಕವನ್ನು ಮೈಮುಲ್ ನಿರ್ದೇಶಕ ಪಿ.ಎಂ.ಪ್ರಸನ್ನ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ರೈತರ ಅನುಕೂಲಕ್ಕಾಗಿ ತಾವು ಮೈಮುಲ್ ಅಧ್ಯಕ್ಷರಾಗಿದ್ದ ವೇಳೆ ಹಲವು ಗ್ರಾಮಗಳಿಗೆ ಬಿಎಂಸಿ ಕೇಂದ್ರಗಳನ್ನು ಮಂಜೂರು ಮಾಡಿಕೊಟ್ಟಿದೆ. ಅಲ್ಲದೇ ಡೇರಿಗಳಿಗೆ ಹೆಚ್ಚಿನ ಅನುದಾನ ನೀಡಿ ಅವುಗಳ ಅಭಿವೃದ್ಧಿಗೆ ಶ್ರಮಿಸಿದ್ದೆ. ಹೀಗಾಗಿ ಮುಂದಿನ ದಿನಗಳಲ್ಲಿ ರೈತರು ನನ್ನನ್ನು ಬೆಂಬಲಿಸಲಿದ್ದಾರೆ ಎಂದರು.

ಸಂಘದ ಅಧ್ಯಕ್ಷ ಎಂ.ಎನ್.ಚಂದ್ರಶೇಖರ್ ಮಾತನಾಡಿ, ಗ್ರಾಮದಲ್ಲಿ ಬಿಎಂಸಿ ಕೇಂದ್ರ ನಿರ್ಮಿಸಲು ಜಾಗವಿಲ್ಲದ ಕಾರಣ ಸಂಘದಿಂದ ಬಂದ ಆದಾಯದಲ್ಲಿ ಒಂದು ಕುಂಟೆ ಜಾಗ ಖರೀದಿಸಿ ಈ ನೂತನ ಬಿಎಂಸಿ ಕೇಂದ್ರ ನಿರ್ಮಿಸಲಾಗಿದೆ. ಮೈಮುಲ್ ನಿರ್ದೇಶಕ ಪಿ.ಎಂ.ಪ್ರಸನ್ನ ಅವರು ಹೆಚ್ಚಿನ ಅನುದಾನ ನೀಡಿದ್ದು, ಅದರಿಂದ ಈ ಕಟ್ಟಡ ನಿರ್ಮಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ರಾಮನಾಯಕ, ನಿರ್ದೇಶಕರಾದ ಬಸಪ್ಪ, ಜಗದೀಶ್, ನಾಗಪ್ಪ, ಕೃಷ್ಣಶೆಟ್ಟಿ, ಕೃಷ್ಣ, ಮಂಜುಶೆಟ್ಟಿ, ರವಿ, ಮಹಾದೇವಮ್ಮ, ಕುಮಾರಿ, ದಾಕ್ಷಾಯಿಣಿ, ಮೈಮುಲ್ ವ್ಯವಸ್ಥಾಪಕ ಸತೀಶ್, ಮೇಲ್ವಿಚಾರಕ ಆಕಾಶ್, ಕಾರ್ಯದರ್ಶಿ ಸುದೀಪ್, ಹಾಲು ಪರೀಕ್ಷಕ ಮಲ್ಲಿಕಾರ್ಜುನ್, ಸಹಾಯಕಿ ಅರ್ಚನಾ, ಶಿವಣ್ಣ ಸೇರಿದಂತೆ ಗ್ರಾಮಸ್ಥರಿದ್ದರು.

# ವಿಶ್ವಕರ್ಮರು ಎಲ್ಲಾ ಕಾಲಕ್ಕೂ ಚಿರಸ್ಮರಣೀಯರು


ಹಳೇ ಕೆಂಪಯ್ಯನ ಹುಂಡಿಯಲ್ಲಿ ವಿಶ್ವಕರ್ಮ ಜಯಂತಿ ಆಚರಿಸಲಾಯಿತು.

**ಜಾತಿಗಣತಿಯಲ್ಲಿ ವಿಶ್ವಕರ್ಮ ಎಂದೇ ಬರೆಸಿ**

ರಾಜ್ಯ ಸರ್ಕಾರ ಸೆ.22ರಿಂದ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜನಗಣತಿಯ ಸಮೀಕ್ಷೆಯಲ್ಲಿ ವಿಶ್ವಕರ್ಮ ಸಮುದಾಯದವರು ಜಾತಿ ಪಟ್ಟಿಯಲ್ಲಿ ಕ್ರಮ ಸಂಖ್ಯೆ ಎ 1538 ರಲ್ಲಿ ವಿಶ್ವಕರ್ಮ ಎಂದೇ ಬರೆಸಬೇಕು. ತಮ್ಮ ಸಮುದಾಯದವರು ಯಾವುದೇ ಗೊಂದಲಕ್ಕೆ ಒಳಗಾಗದೇ ಧರ್ಮ ಕಾಲಂನಲ್ಲಿ 'ಹಿಂದೂ' ಎಂದು ಬರೆಸಿ ಉಪಜಾತಿಯ ಕಾಲಂನಲ್ಲಿ ಯಾವುದು ಇಲ್ಲ ಎಂದು ಬರೆಸಬೇಕು. ಇದರಿಂದ ಸರ್ಕಾರಕ್ಕೆ ನಿಖರ ಮಾಹಿತಿ ದೊರೆಯಲಿದೆ ಜೆ.ಶಿವಕುಮಾರ್ ತಿಳಿಸಿದರು.

ತಿ.ನರಸೀಪುರ, ಸೆ.21– ವಾಸ್ತುಶಿಲ್ಪ, ಕಲೆಗಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟ ವಿಶ್ವಕರ್ಮರು ಎಲ್ಲಾ ಕಾಲಮಾನಕ್ಕೂ ಚಿರಸ್ಮರಣೀಯರು ಎಂದು ವಿಶ್ವಕರ್ಮ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಖಜಾಂಚಿ ಜೆ.ಶಿವಕುಮಾರ್ ತಿಳಿಸಿದರು.

ತಾಲೂಕು ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ವಿಶ್ವಕರ್ಮ ಜನಾಂಗದ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ವಿಶ್ವಕರ್ಮ ಜಯಂತಿಯಲ್ಲಿ ಮಾತನಾಡಿದ ಅವರು, ದೇಶಾದ್ಯಂತ ನಿರ್ಮಿಸಿರುವ ದೇವಾಲಯಗಳಲ್ಲಿನ ಮನಸೂರೆಗೊಳ್ಳುವ ಶಿಲ್ಪಕಲಾ ಸೌಂದರ್ಯ ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುವಂತಾಗಿದೆ. ಶಿಲ್ಪಕಲೆಗೆ ಹೆಸರಾದ ಸೋಮನಾಥಪುರ, ಬೇಲೂರು, ಹಳೇಬೀಡು ಸೇರಿದಂತೆ ಹಲವು ದೇವಾಲಯಗಳು ಸಾವಿರಾರು ದೇಶ–ವಿದೇಶಿಗರ ಕಣ್ಮನಗಳನ್ನು ಸೂಜಿಗಲ್ಲಿನಂತೆ ಸೆಳೆದಿವೆ. ಕರ್ನಾಟಕ ಶಿಲ್ಪಕಲೆಯ ತವರೂರು ಎನಿಸಲು ವಿಶ್ವಕರ್ಮರ ಕೊಡುಗೆ ಅಜರಾಮರ ಎಂದರು.

ಮೂಲ ಕಸುಬನ್ನೇ ವೃತ್ತಿಯಾಗಿಸಿಕೊಂಡಿರುವ ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರ ಇನ್ನೂ ಹೆಚ್ಚಿನ ಅನುದಾನ ನೀಡಬೇಕು ಎಂದ ಅವರು ತಮ್ಮ ಬದುಕನ್ನು ಶಿಲ್ಪಕಲೆ ಉನ್ನತಿಗಾಗಿ ಮೀಸಲಿಟ್ಟ ಮಹಾಪುರುಷ ವಿಶ್ವಕರ್ಮ ಆಗಿದ್ದಾರೆ. ಅವರ ಸಾಧನೆಯನ್ನು ಸ್ಮರಿಸುವ ಅಗತ್ಯವಿದೆ ಎಂದರು.

ಅಧ್ಯಕ್ಷ ಸಿದ್ದಪ್ಪಾಜಿ, ಕಾರ್ಯದರ್ಶಿ ಕೆಂಪಚಾರಿ, ಜಗದೀಶ್, ಸೋಮು, ಅಶ್ವಥ್, ನಟರಾಜು, ಸಿದ್ದಪ್ಪಾಜಿ, ವೆಂಕಟೇಶ್, ಮಂಜು, ಕುಮಾರ್, ಚೇತನ್, ಧನಂಜಯ, ಶಿವಕುಮಾರ್ ಹಾಜರಿದ್ದರು.

# ಕನ್ನಳ್ಳಿಯಲ್ಲಿ ಪುನಶ್ಚೇತನಗೊಂಡ ಕೆರೆ ಹಸ್ತಾಂತರ


ಕನ್ನಳ್ಳಿ ಗ್ರಾಮದ ಕೆರೆಯ ನಾಮಫಲಕ ಅನಾವರಣಗೊಳಿಸಲಾಯಿತು.

ಮೂಗೂರು, ಸೆ.21– ಇಲ್ಲಿಗೆ ಸಮೀಪದ ಕನ್ನಳ್ಳಿ ಗ್ರಾಮದ ಸರ್ಕಾರಿ ಕೆರೆಯನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 'ನಮ್ಮೂರು ನಮ್ಮ ಕೆರೆ' ಎಂಬ ಕಾರ್ಯಕ್ರಮದಡಿ ಪುನಶ್ಚೇತನಗೊಳಿಸಿದ್ದು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಜಿಲ್ಲಾ ಹಿರಿಯ ನಿರ್ದೇಶಕ ವಿಜಯ ಕುಮಾರ್ ನಾಗನಾಳ ಅವರು ಕೆರೆಗೆ ಬಾಗಿನ ಅರ್ಪಿಸಿ, ನಾಮಫಲಕ ಅನಾವರಣಗೊಳಿಸುವ ಮೂಲಕ ಗ್ರಾಮಸ್ಥರಿಗೆ ಕರೆ ಹಸ್ತಾಂತರಿಸಿದರು.

ಬಳಿಕ ಮಾತನಾಡಿದ ಅವರು, ಇದುವರೆಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 950ಕ್ಕೂ ಹೆಚ್ಚು ಕೆರೆಗಳನ್ನು ಪುನಶ್ಚೇತನಗೊಳಿಸಲಾಗಿದ್ದು, ಗ್ರಾಮದ ಸರ್ಕಾರಿ ಕೆರೆಯ ಏರಿಯ ಸುತ್ತಲೂ 50 ಗಿಡ ನೆಡಲಾಗಿದೆ. ಸಂಸ್ಥೆ ಆಶಯದಂತೆ ಕೆರೆ ಅಭಿವೃದ್ಧಿಗೆ ಪೂರಕ ಸಹಕಾರ ನೀಡಿ ಗಂಗಾ ಮಾತೆಗೆ ಶ್ರದ್ಧಾ ಭಕ್ತಿಯಿಂದ ಬಾಗಿನ ಅರ್ಪಿಸಿ ರೈತರಿಗೆ ಹಾಗೂ ಗ್ರಾಮದ ಒಳಿತಿಗಾಗಿ ಕೆರೆ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ಎಂದರು.

ಗ್ರಾಪಂ ಸದಸ್ಯ ಎಂ.ಲಕ್ಷ್ಮಣ್ ಮಾತನಾಡಿ, ಹಳ್ಳಿಗಾಡಿನ ಕೆರೆಗಳ ಅಭಿವೃದ್ಧಿ ಪುಣ್ಯದ ಕೆಲಸವೆಂದು ಧರ್ಮಸ್ಥಳ ಸಂಸ್ಥೆಯವರು ಉದಾರ ಮನಸ್ಸಿನಿಂದ ಪುನಶ್ಚೇತನ ಕೈಗೊಂಡಿರುವುದು ಶ್ಲಾಘನೀಯ. ಸರ್ಕಾರ ಮಾಡಲಾಗದ ಕೆಲಸವನ್ನು ಸಂಸ್ಥೆಯವರು ಮಾಡಿ ರೈತರು ಹಾಗೂ ಪ್ರಾಣಿ, ಪಕ್ಷಿಗಳಿಗೆ ಜಲ ಸಂಪನ್ಮೂಲ ನೀಡಿ ಕೃತಾರ್ಥರಾಗಿದ್ದಾರೆ. ಸಾಕಷ್ಟು ಅಡೆತಡೆ ಇದ್ದರೂ ಕಳೆದ ಬಾರಿ ಮಾತ್ರ ಹಳ್ಳಿ ಗ್ರಾಮದ ಕೆರೆ ನಿರ್ಮಿಸುವಲ್ಲಿ ಯಶಸ್ವಿಯಾದರು. ಕೆಲವರು ಧರ್ಮಸ್ಥಳದ ಬಗ್ಗೆ ಇಲ್ಲಸಲ್ಲದ ಅಪ ಪ್ರಚಾರ ಕೈಗೊಂಡು ಧರ್ಮದ ಹಾದಿಯನ್ನು ಅಧರ್ಮದ ಕಡೆ ನೂಕುವ ಮನಸ್ಥಿತಿಯನ್ನು ಬದಲಾಯಿಸಿ ಕೊಳ್ಳ ಬೇಕಿದೆ ಎಂದರು.

ಈ ವೇಳೆ ಕೊತ್ತೇಗಾಲ ಗ್ರಾಪಂ ಅಧ್ಯಕ್ಷ ಶಿವಕುಮಾರ್, ಕ್ಷೇತ್ರ ಯೋಜನಾಧಿಕಾರಿ ಶಕುಂತಲಾ, ಮೈಸೂರು ಪ್ರಾದೇಶಿಕ ಕಚೇರಿ ಕೆರೆ ಅಭಿಯಂತರ ಪುಷ್ಪರಾಜ್, ಗುರುಮೂರ್ತಿ, ಶ್ರೀನಿವಾಸ್, ಕೊತ್ತೇಗಾಲ ಪಿಡಿಓ ಶ್ರೀನಿವಾಸ್, ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಸವರಾಜು, ಗ್ರಾಪಂ ಮಾಜಿ ಅಧ್ಯಕ್ಷ ಲಕ್ಷ್ಮಣ್, ಗ್ರಾಪಂ ಸದಸ್ಯರಾದ ಪುಷ್ಪ, ಮಹಾದೇವಸ್ವಾಮಿ, ರಾಜಮ್ಮ, ಮುಖಂಡರಾದ ಸಿದ್ದರಾಜು, ಮಹದೇವ್, ಕುಮಾರ್, ರಘು, ಮಧು, ಮೇಲ್ವಿಚಾರಕಿ ಕುಮಾರಿ, ಕಾವೇರಿ, ಶಿವಶಂಕರ್, ಸೇವಾ ಪ್ರತಿನಿಧಿ ಮಮತಾ ಮತ್ತು ಸಂಘದ ಸದಸ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು.

# ಜಾತಿ ಕಲಂನಲ್ಲಿ ಮಡಿವಾಳ ಎಂದು ನಮೂದಿಸಿ

## ಮಡಿವಾಳರ ಸಂಘದ ಅಧ್ಯಕ್ಷ ಹೆಚ್.ಡಿ.ಪ್ರಸನ್ನಕುಮಾರ್


ಸುದ್ದಿಗೋಷ್ಠಿಯಲ್ಲಿ ಹೆಚ್.ಡಿ.ಪ್ರಸನ್ನಕುಮಾರ್ ಮಾತನಾಡಿದರು.

ನಂಜನಗೂಡು, ಸೆ.21– ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲು ಮನೆ ಮನೆಗೆ ಭೇಟಿ ನೀಡಲಿದ್ದು, ಮಡಿವಾಳ ಸಮಾಜದ ಬಂಧುಗಳು ಧರ್ಮದ ಕಲಂನಲ್ಲಿ ಹಿಂದೂ ಹಾಗೂ ಜಾತಿ ಕಲಂನಲ್ಲಿ ಮಡಿವಾಳ ಎಂದು ಬರೆಸಬೇಕು ಎಂದು ತಾಲೂಕು ಮಡಿವಾಳರ ಸಂಘದ ಅಧ್ಯಕ್ಷ ಹೆಚ್.ಡಿ. ಪ್ರಸನ್ನಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮೀಕ್ಷೆ ವೇಳೆ ಮಡಿವಾಳ ಜಾತಿಯ ಪರ್ಯಾಯ ಪದಗಳನ್ನು ಬರೆಸಬಾರದು. ಸಮಾಜದ ಮುಖಂಡರು, ಗ್ರಾಪಂ ಸದಸ್ಯರು ಮನೆಮನೆಗೆ ತೆರಳಿ ಶೈಕ್ಷಣಿಕವಾಗಿ ಹಿಂದುಳಿದಿರುವ ಜನರಿಗೆ ಸಮೀಕ್ಷೆಯಿಂದ ಉಂಟಾಗುವ ಪ್ರಯೋಜನಗಳ ಬಗ್ಗೆ, ಸಾಧಕ–ಬಾಧಕಗಳ ಬಗ್ಗೆ ತಿಳಿ ಹೇಳಬೇಕು. ಮಡಿವಾಳ ಸಮಾಜ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದು, ಸರ್ಕಾರ ಮಡಿವಾಳರನ್ನು ಪ.ಜಾತಿಗೆ ಸೇರಿಸಬೇಕು. ದೇಶದ ಹಲವು ರಾಜ್ಯಗಳಲ್ಲಿ ಮಡಿವಾಳರನ್ನು ಪ.ಜಾತಿಗೆ ಸೇರಿಸಿದ್ದಾರೆ. ನಮ್ಮ ಮಠದ ಸ್ವಾಮೀಜಿಗಳ ನೇತೃತ್ವದಲ್ಲಿ ಮಡಿವಾಳರನ್ನು ಪ.ಜಾತಿಗೆ ಸೇರಿಸಬೇಕೆಂದು ಹೋರಾಟ ನಡೆಸಲಾಗುತ್ತಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಕೆ.ಎಂ.ಬಸವರಾಜು ಮಾತನಾಡಿ, ಅಕ್ಕಪಕ್ಕದ ಎಲ್ಲಾ ರಾಜ್ಯಗಳಲ್ಲೂ ಮಡಿವಾಳ ಸಮುದಾಯವನ್ನು ಎಸ್ಸಿ ಅಥವಾ ಎಸ್‌ಟಿ ಸಮುದಾಯಗಳಿಗೆ ಸೇರಿಸಿ ಸರ್ಕಾರದ ಸವಲತ್ತು ವಿತರಿಸಲಾಗಿದೆ. ಕರ್ನಾಟಕದಲ್ಲಿ ಡಾ.ಅನ್ನಪೂರ್ಣ ಅವರ ನೇತೃತ್ವದಲ್ಲಿ ಕುಲ ಶಾಸ್ತ್ರೀಯ ಅಧ್ಯಯನ ನಡೆಸಲಾಗಿದ್ದು, ಮಡಿವಾಳ ಸಮುದಾಯವನ್ನು ಎಸ್‌ಸಿ ಸಮುದಾಯಕ್ಕೆ ಸೇರಿಸುವಂತೆ ಶಿಫಾರಸ್ಸು ಮಾಡಲಾಗಿದೆ. ಆ ವರದಿಯನ್ನು ಯಥಾವತ್ತಾಗಿ ರಾಜ್ಯ ಸರ್ಕಾರ ಜಾರಿಗೊಳಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಎಸ್.ಶಿವಣ್ಣ, ರವಿ, ಮಹೇಶ್, ಮಹದೇವು, ಹೆಚ್.ಕೆ.ಸೋಮಣ್ಣ, ಬಿ.ನಾಗರಾಜು, ಮಹದೇವಸ್ವಾಮಿ, ಬಾಲು, ಪ್ರಶಾಂತ್, ಸುರೇಶ್, ಶಿವಕುಮಾರ್, ವೆಂಕಟೇಶ್, ಭೈರಶೆಟ್ಟಿ, ಸಂಜು, ನಂಜುಂಡ, ದೇವಣ್ಣ, ಗಣೇಶ್, ಪ್ರಭುಸ್ವಾಮಿ, ವೆಂಕಟೇಶ್, ಪ್ರಕಾಶ್ ಉಪಸ್ಥಿತರಿದ್ದರು.

## ಡಾ.ಬಿ.ದಿನೇಶ್ ಅವರಿಗೆ ಸನ್ಮಾನ


ಶ್ರೀಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಬಿ.ದಿನೇಶ್ ಅವರನ್ನು ತಿ.ನರಸೀಪುರ ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ಸನ್ಮಾನಿಸಿದರು. ಈ ವೇಳೆ ಕೆಡಿಪಿ ಸದಸ್ಯ ದಿವಾಕರ್, ಮಹೇಂದರ್, ಹಾಪ್ ಕಾಮ್ಸ್ ಮಾಜಿ ನಿರ್ದೇಶಕ ಪ್ರಕಾಶ್, ಶಿವಮಲ್ಲು ಇತರರಿದ್ದರು.

# ವಿಜ್ಞಾನ ನಾಟಕ: ಕುಪ್ಪರವಳ್ಳಿ ಶಾಲೆ ವಿಭಾಗ ಮಟ್ಟಕ್ಕೆ

ನಂಜನಗೂಡು, ಸೆ.21– ಮೈಸೂರಿನ ವಸಂತ ಮಹಲ್ ಡಯಟ್ ಆವರಣದಲ್ಲಿ ನಡೆದ ಮೈಸೂರು ಜಿಲ್ಲಾ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ತಾಲೂಕಿನ ಕುಪ್ಪರವಳ್ಳಿ ಸರ್ಕಾರಿ ಪ್ರೌಢಶಾಲಾ ಮಕ್ಕಳು ಪ್ರಸ್ತುಪಡಿಸಿದ 'ಕತ್ತೆ ಕಿವಿ' ನಾಟಕ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದೆ.

ಈ ನಾಟಕದ ಮುಖ್ಯಪಾತ್ರಧಾರಿ 9ನೇ ತರಗತಿಯ ರಕ್ಷಾ ಉತ್ತಮ ನಟಿ ಮತ್ತು ಶಾಲೆ ಶಿಕ್ಷಕ ಸಂತೋಷ ಗುಡ್ಡಿಯಂಗಡಿ ಉತ್ತಮ ನಿರ್ದೇಶಕ ಬಹುಮಾನ ಪಡೆದರು.

ವಾಟರ್ ಹಯಾಸಿಂತ್ ಎಂಬ ಜೊಂಡು ಕಳೆ ಸಸ್ಯ ಹೇಗೆ ಕೆರೆಗಳನ್ನು ಆವರಿಸುತ್ತದೆ ಮತ್ತು ಕೊಳಚೆ ನೀರಿನ ಸಾರವನ್ನು ಹೀರಿಕೊಂಡು ಬಹುಬೇಗ ಬೆಳೆದು ಕೆರೆಗಳ ಅವಸಾನಕ್ಕೆ ಕಾರಣವಾಗುತ್ತದೆ ಎಂಬುದರೊಂದಿಗೆ ಆರಂಭವಾಗುವ ನಾಟಕ ಅದೇ ಕಳೆ ಸಸ್ಯದಿಂದ ಪರಿಸರ ಸ್ನೇಹಿ ಜೈವಿಕ ಇಂಧನ, ಪ್ಲೈವುಡ್, ಕಾಗದ ತಯಾರಿಸಬಹುದು ಎನ್ನುವುದನ್ನು ನಾಟಕ ಪ್ರಸ್ತುತ ಪಡಿಸುತ್ತದೆ. ಮೈಸೂರಿನ ಕೊಳಕು ದಳವಾಯಿ ಕೆರೆಯನ್ನು ಆಧಾರವಾಗಿಟ್ಟುಕೊಂಡು ಈ ನಾಟಕ ಕಟ್ಟಲಾಗಿದ್ದು, ಕೆರೆಯಲ್ಲಿ ವಾಸಿಸುವ ಜಲಚರಗಳ ಮೂಲಕ ಮನುಷ್ಯ ಸೃಷ್ಟಿಸುವ ಅದ್ವಾನಗಳನ್ನು ಚಿತ್ರಿಸಲಾಗಿದೆ.

ನಾಟಕದಲ್ಲಿ 10ನೇ ತರಗತಿಯ ನಿಸರ್ಗ, ಝಾನ್ಸಿ, ಭರತ್ ವಿ.ಎನ್, ಮನು ನಾಯಕ ಬಿ.ಎಂ., 9ನೇ ತರಗತಿಯ ರಕ್ಷಾ, ರನ್ಯಾ ಎನ್.ಎಸ್., ಪುಷ್ಪ ಸಿ., ಮತ್ತು 8ನೇ ತರಗತಿಯ ಕೀರ್ತನ ಎನ್.ಜಿ. ಅಭಿನಯಿಸಿದ್ದರು. ಶಾಲೆ ನಾಟಕ ಶಿಕ್ಷಕ ಸಂತೋಷ ಗುಡ್ಡಿಯಂಗಡಿ ಈ ನಾಟಕ ರಚಿಸಿ ನಿರ್ದೇಶಿಸಿದ್ದರು. ದಿಗ್ವಿಜಯ ಹೆಗ್ಗೋಡು ಸಂಗೀತ ನೀಡಿದ್ದಾರೆ. 9ನೇ ತರಗತಿ ಮಣೀಶ ತಂಡದ ಸಹಾಯಕನಾಗಿದ್ದು ಮತ್ತು ಶಾಲೆಯ ಹಿಂದಿ ಭಾಷಾ ಶಿಕ್ಷಕರಾದ ಜಯಣ್ಣ ಡಿ.ಪಿ. ನಾಟಕ ತಂಡದ ಉಸ್ತುವಾರಿ ಶಿಕ್ಷರಾಗಿ ಮಕ್ಕಳ ಜೊತೆಗಿದ್ದರು.


ಜಿಲ್ಲಾ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದ ಕುಪ್ಪರವಳ್ಳಿ ಸರ್ಕಾರಿ ಪ್ರೌಢಶಾಲಾ ಮಕ್ಕಳು ಮತ್ತು ಶಾಲಾ ಶಿಕ್ಷಕರು


## ಸಾರ್ವಜನಿಕ ಆಸ್ಪತ್ರೆ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ


ಸರಗೂರಲ್ಲಿ ಸಾರ್ವಜನಿಕ ಆಸ್ಪತ್ರೆ ನಿರ್ಮಿಸಲು ಜಿಲ್ಲಾ ಮಟ್ಟದ ಇಇ ಜಗದೀಶ್, ಎಇಇ ಗುರುಪ್ರಸಾದ್, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್. ಡಾ.ಪಾರ್ಥಸಾರಥಿ ಸೇರಿದಂತೆ ಆರೋಗ್ಯ ಹಾಗೂ ಸರ್ವೇ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅಳತೆ ಮಾಡಿದರು.

### ಅವಳಿ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ

# ದಸರಾ ಮುಗಿದ ಬಳಿಕ ಭತ್ತ, ರಾಗಿ ಖರೀದಿ ಕೇಂದ್ರ ಪ್ರಾರಂಭ

## ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ


ಮಹಾಸಭೆಯಲ್ಲಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ ಅವರನ್ನು ಅಭಿನಂದಿಸಲಾಯಿತು.

ಕೆ.ಆರ್.ನಗರ, ಸೆ.21– ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಭತ್ತ ಮತ್ತು ರಾಗಿ ಖರೀದಿ ಕೇಂದ್ರವನ್ನು ದಸರಾ ಮುಗಿದ ಬಳಿಕ ಪ್ರಾರಂಭಿಸಲಾಗುವುದು ಎಂದು ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಭತ್ತ ಮತ್ತು ರಾಗಿಯನ್ನು ಎಂಎಸ್‌ಪಿ ಮೂಲಕ ಖರೀದಿಸುವ ಬದಲು ರೈತರ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಖರೀದಿ ಕೇಂದ್ರ ತೆರೆಯಲು ಈಗಾಗಲೇ ಚರ್ಚಿಸಿ ಹೋಬಳಿಗೆ 2 ಖರೀದಿ ಕೇಂದ್ರ ತೆರೆಯುವಂತೆ ಆದೇಶ ನೀಡಿದೆ. ಈ ಹಿನ್ನೆಲೆಯಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿರುವ 24 ಸಹ ಕಾರ ಸಂಘಗಳ ಪೈಕಿ 12 ಸಹಕಾರ ಸಂಘಗಳಲ್ಲಿ ಭತ್ತ ಮತ್ತು ರಾಗಿ ಖರೀದಿ ಕೇಂದ್ರ ತೆರೆಯಬಹುದಾಗಿದೆ ಎಂದರು.

ಈಗಿರುವ 24 ಸಹಕಾರ ಸಂಘಗಳಲ್ಲಿ ಪೈಕಿ ಯಾವ ಸೊಸೈಟಿಯಲ್ಲಿ ಪಡಿತರ ಮಾರಾಟ ವ್ಯವಸ್ಥೆ ಇದೆ ಅಂತಹ ಸೊಸೈಟಿಗಳಿಗೆ ಭತ್ತ ಮತ್ತು ರಾಗಿ ಖರೀದಿ ಕೇಂದ್ರ ಕೊಡಲು ಸಾಧ್ಯವಿಲ್ಲ. ಪಡಿತರ ಮಾರಾಟ ವ್ಯವಸ್ಥೆ ಇಲ್ಲದ ಸೊಸೈಟಿಗಳು ಖರೀದಿ ಕೇಂದ್ರ ಪ್ರಾರಂಭಿಸಬಹುದಾಗಿದ್ದು, ಹರದನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಭತ್ತ ಮತ್ತು ರಾಗಿ ಖರೀದಿ ಕೇಂದ್ರ ಪ್ರಾರಂಭಿಸಲು ಅನುಮತಿ ಕೊಡಿಸಲಾಗುವುದು ಎಂದು ಭರವಸೆ ನೀಡಿದರು.

ಇದರಿಂದ ಈ ಭಾಗದ ರೈತರಿಗೆ ಹೆಚ್ಚು ಅನುಕೂಲವಾಗುವ ಜೊತೆಗೆ ಹತ್ತಾರು ಯುವಕರಿಗೆ ಉದ್ಯೋಗ ನೀಡಿದಂತಾಗುತ್ತದೆ. ಸೊಸೈಟಿಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಮುಂದಿನ ದಿನಗಳಲ್ಲಿ ಹೊಸ ಸದಸ್ಯರಿಗೆ ಸಾಲ ಕೊಡಲು ನೂತನ ಆಡಳಿತ ಮಂಡಳಿ ರಚನೆಯಾದ ಮೇಲೆ ಚರ್ಚಿಸಿ ಕ್ರಮವಹಿಸಲಾಗುವುದು ಎಂದರು.

ಜಿಲ್ಲೆಯಲ್ಲಿ ಹರದನಹಳ್ಳಿ ಸೊಸೈಟಿ ಮಾದರಿಯಾಗಿ ಪ್ರಥಮ ಸ್ಥಾನ ಪಡೆದಿತ್ತು ಆದರೆ ಒಬ್ಬ ನೌಕರ ಮಾಡಿದ ತಪ್ಪಿಗೆ 1.40 ಕೋಟಿ ರೂ. ನಷ್ಟದಲ್ಲಿದ್ದು, ಸೊಸೈಟಿಗೆ ಲಾಭಾಂಶವಿಲ್ಲದಂತಾಗಿದೆ. ಹಾಗಾಗಿ ಸಹಕಾರ ಸಂಘದ ಅಭಿವೃದ್ಧಿಗಾಗಿ ಮತ್ತು ರೈತರ ಏಳಿಗೆಗಾಗಿ ಅತಿ ಶೀಘ್ರದಲ್ಲಿ ಗೊಬ್ಬರ ಮಾರಾಟಕ್ಕೆ ಕೃಷಿ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ವಹಿಸಲಾಗುವುದು ಎಂದರು.

ಸಹಕಾರ ಸಂಘದ ಅಧ್ಯಕ್ಷ, ಮುಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ಹೆಚ್.ಎನ್.ವಿಜಯ್ ಮಾತನಾಡಿ, ಸಂಘ 12 ಕೋಟಿ ವಹಿವಾಟು ನಡೆಸುವ ಮೂಲಕ 1.32 ಲಕ್ಷ ನಿವ್ವಳ ಲಾಭ ಹೊಂದಿದೆ. ಸಂಘದಲ್ಲಿ 2761 ಷೇರುದಾರರಿದ್ದು, 857 ಸದಸ್ಯರಿಗೆ ಕೆಸಿಸಿ ಸಾಲ, ತಂಬಾಕು ಮತ್ತು ಸೌದೆ ಸಾಲ, ಹಸು ಸಾಕಾಣಿಕೆ ಶೆಡ್ ಸಾಲ, ಮಧ್ಯಮಾವಧಿ ಸಾಲ ವಿತರಿಸಲಾಗಿದೆ ಎಂದರು.

ಸಂಘದ ಅಭಿವೃದ್ಧಿಗಾಗಿ ಹೊಸ ರೈತರಿಗೆ ಸಾಲ ನೀಡುವಂತೆ ಹಾಗೂ ಸೊಸೈಟಿ ಮುಂಭಾಗ ವಾಣಿಜ್ಯ ಮಳಿಗೆ ನಿರ್ಮಿಸಲು ಸಹಕರಿಸುವಂತೆ ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡರಿಗೆ ಮನವಿ ಮಾಡಿದರು.

ಇದೇ ವೇಳೆ ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡರನ್ನು ಅಭಿನಂದಿಸಲಾಯಿತು. ಉಪಾಧ್ಯಕ್ಷ ಯೋಗೇಶ್, ನಿರ್ದೇಶಕರಾದ ಟಿ.ರಾಮೇಗೌಡ, ನಟರಾಜು, ಸಿ.ಸುಂದರ್, ಎಸ್.ಶಂಕರ್, ರವಿ, ಟಿ.ರವಿ, ಕುಮಾರ್, ಲೋಕೇಶ್, ಜಾನಕಿ, ಮಹದೇವಮ್ಮ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಹೆಚ್.ಟಿ.ಮಂಜಪ್ಪ, ಗ್ರಾಪಂ ಅಧ್ಯಕ್ಷ ಗೋಪಾಲ್, ಸದಸ್ಯರಾದ ಕೃಷ್ಣೇಗೌಡ, ಪಶು ಪತಿ, ಮಹೇಂದ್ರ, ಸಹಕಾರ ಸಂಘದ ಪ್ರಭಾರ ಸಿಇಓ ದುಶ್ಯಂತ್, ಸಿಬ್ಬಂದಿಗಳಾದ ಸಂಪತ್ ಕುಮಾರ್, ಪುಷ್ಪಲತಾ, ಅಶೋಕ, ಹೆಚ್.ಬಿ.ಪ್ರಭು ಸೇರಿದಂತೆ ಅನೇಕರಿದ್ದರು.

# ಸಾಲ ಮರು ಪಾವತಿಯಿಂದ ಸಂಘದ ಅಭಿವೃದ್ಧಿ


ಕೂಡ್ಲಾಪುರ ಪಿಎಸಿಎಸ್‌ನಲ್ಲಿ ವಾರ್ಷಿಕ ಮಹಾಸಭೆ ನಡೆಯಿತು.

ಮಲ್ಲುಂಡಿ, ಸೆ21– ಸಾಲ ಪಡೆದ ರೈತರು ಸುಸ್ತಿದಾರರರಾಗದೇ ಸಕಾಲಕ್ಕೆ ಸಾಲ ಮರು ಪಾವತಿಸಿದಾಗ ಮಾತ್ರ ಸಹಕಾರ ಸಂಘದ ಅಭಿವೃದ್ಧಿ ಸಾಧ್ಯ ಎಂದು ಕೂಡ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಾರಶೆಟ್ಟಿ ತಿಳಿಸಿದರು.

ನಂಜನಗೂಡು ತಾಲೂಕಿನ ಕೂಡ್ಲಾಪುರ ಪಿಎಸಿಎಸ್ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರ ಆರ್ಥಿಕಾಭಿವೃದ್ಧಿಗೆ ಸಾಕಷ್ಟು ಸಾಲ ನೀಡಲಾಗುತ್ತಿದೆ. ಆದರೆ ಸಾಲ ಪಡೆದ ರೈತರು ಸಾಲ ಮರು ಪಾವತಿಸದ ಕಾರಣ ಸಹಕಾರ ಸಂಘ ಕೆಲವೊಮ್ಮೆ ಲಾಭ ಗಳಿಸಲು ಸಾಧ್ಯವಿಲ್ಲ. ಹೀಗಾಗಿ ಸಕಾಲಕ್ಕೆ ಮರುಪಾವತಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸಂಘದ ಉಪಾಧ್ಯಕ್ಷ ಬಸವಶೆಟ್ಟಿ, ನಿರ್ದೇಶಕರಾದ ಕೆ.ಎಂ.ಮಹದೇವಸ್ವಾಮಿ, ಸಿದ್ದಶೆಟ್ಟಿ, ಶಿವರಾಜು, ಶಿವಣ್ಣ, ಪುಟ್ಟಸಿದ್ದಮ್ಮ, ಸಿದ್ದಮ್ಮ, ಸಿಇಓ ಮಹೇಶ್, ಗುಮಾಸ್ತ ಎಂ.ಮಹೇಶ್ ಸೇರಿದಂತೆ ಸಂಘದ ಸದಸ್ಯರು ಇತರರಿದ್ದರು.

# 'ಒಂದು ರಾಷ್ಟ್ರ, ಒಂದು ತೆರಿಗೆ'ಯ ಕನಸು ನನಸಾಗಿದೆ

## ಜಿಎಸ್‌ಟಿ ಸುಧಾರಣೆಯ ಕುರಿತು ಪ್ರಧಾನಿ ಮೋದಿ

ನವದೆಹಲಿ, ಸೆ.21– ಜಿಎಸ್‌ಟಿ 'ಒಂದು ರಾಷ್ಟ್ರ, ಒಂದು ತೆರಿಗೆ'ಯ ಕನಸನ್ನು ನನಸಾಗಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇಂದು ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ದೇಶದ ವ್ಯವಹಾರಗಳು ವಿವಿಧ ತೆರಿಗೆಗಳ ಜಾಲದಲ್ಲಿ ಸಿಲುಕಿಕೊಂಡಿತ್ತು. ದೇಶದಲ್ಲಿ ಡಜನ್‌ಗಟ್ಟಲೆ ವಿಭಿನ್ನ ತೆರಿಗೆಗಳಿದ್ದವು. ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸ್ಥಳಾಂತರಗೊಳ್ಳಲು ಲೆಕ್ಕವಿಲ್ಲದಷ್ಟು ಅಡೆತಡೆಗಳಿದ್ದವು. ವಿಭಿನ್ನ ತೆರಿಗೆ ನಿಯಮಗಳಿದ್ದವು. ಅದೆಲ್ಲಾ ಇಂದು ಜಿಎಸ್‌ಟಿ ಮೂಲಕ ನಿವಾರಣೆಯಾಗಿದೆ ಎಂದು ಹೇಳಿದರು.



2014ರಲ್ಲಿ ದೇಶದ ಪ್ರಧಾನಿಯಾಗಿ ನಾನು ಜವಾಬ್ದಾರಿ ವಹಿಸಿಕೊಂಡಾಗ ವಿದೇಶಿ ಪತ್ರಿಕೆಯೊಂದು ಕಂಪನಿಯ ತೊಂದರೆಗಳ ಬಗ್ಗೆ ಉಲ್ಲೇಖಿಸಿತ್ತು. ಅವರು ಬೆಂಗಳೂರಿನಿಂದ ಹೈದರಾಬಾದ್‌ಗೆ ಸರಕುಗಳನ್ನು ಕಳುಹಿಸಲು ಕೇಳಿದ್ದರು. ಮೊದಲು ಬೆಂಗಳೂರಿನಿಂದ ಯುರೋಪಿಗೆ ಸರಕುಗಳನ್ನು ಕಳುಹಿಸಲು ಮತ್ತು ನಂತರ ಅದೇ ಸರಕುಗಳನ್ನು ಯುರೋಪಿನಿಂದ ಹೈದರಾಬಾದ್‌ಗೆ ಕಳುಹಿಸಲು ಅವರಿಗೆ ಹೇಳಲಾಯಿತು. ತೆರಿಗೆಗಳು ಮತ್ತು ಸುಂಕಗಳ ಸಂಕೀರ್ಣತೆಯಿಂದಾಗಿ ಆ ಸಮಯದಲ್ಲಿ ಪರಿಸ್ಥಿತಿ ಹೀಗಿತ್ತು.

ನಾನು ಪ್ರಧಾನಿಯಾದ ನಂತರ ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಜಿಎಸ್‌ಟಿಯನ್ನು ಆದ್ಯತೆಯನ್ನಾಗಿ ಮಾಡಿದೆ. ಪ್ರತಿಯೊಂದು ರಾಜ್ಯದ ಕಳವಳಗಳನ್ನು ಪರಿಹರಿಸಿದೆ. ಪ್ರತಿ ಯೊಂದು ಪ್ರಶ್ನೆಗೆ ಪರಿಹಾರಗಳನ್ನು ಕಂಡುಕೊಳ್ಳಲಾಯಿತು. ಎಲ್ಲರನ್ನೂ ಮಂಡಳಿಯಲ್ಲಿ ತೆಗೆದುಕೊಂಡು ಸ್ವತಂತ್ರ ಭಾರತದ ಅತಿದೊಡ್ಡ ತೆರಿಗೆ ಸುಧಾರಣೆ ಮಾಡಲಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಯತ್ನಗಳ ಪರಿಣಾಮವಾಗಿ ದೇಶವು ಡಜನ್‌ಗಟ್ಟಲೆ ತೆರಿಗೆ ಬಲೆಗಳಿಂದ ಮುಕ್ತಾಯಿತು. ಒಂದು ರಾಷ್ಟ್ರ, ಒಂದು ತೆರಿಗೆಯ ಕನಸು ನನಸಾಯಿತು ಎಂದು ಮೋದಿ ಹೇಳಿದರು.

ಇದು ದಿನನಿತ್ಯದ ವಸ್ತುಗಳನ್ನು ಹೆಚ್ಚು ಕೈಗೆಟುಕುವಂತೆ ಮಾಡುತ್ತದೆ. ಆರೋಗ್ಯ ಮತ್ತು ಜೀವ ವಿಮೆ, ಇತರ ಹಲವು ಸೇವೆಗಳೊಂದಿಗೆ ತೆರಿಗೆ ಮುಕ್ತವಾಗಿರುತ್ತದೆ ಅಥವಾ ಕೇವಲ ಶೇ.5ರಷ್ಟು ತೆರಿಗೆ ಮಾತ್ರ ಇರುತ್ತದೆ. ಶೇ.12ರಷ್ಟು ತೆರಿಗೆ ವಿಧಿಸಲಾಗುತ್ತಿದ್ದ ಶೇ.99ರಷ್ಟು ವಸ್ತುಗಳಿಗೆ ಈಗ ಶೇಕಡ 5ರಷ್ಟು ತೆರಿಗೆ ವಿಧಿಸಲಾಗುತ್ತದೆ ಎಂದು ಮೋದಿ ಹೇಳಿದರು.

12 ಲಕ್ಷ ರೂಪಾಯಿ ಆದಾಯ ತೆರಿಗೆ ವಿನಾಯಿತಿ ಉಡುಗೊರೆಯನ್ನು ನೀಡಲಾಯಿತು. ಈಗ ಬಡವರ ಸರದಿ. ಹೊಸ ಮಧ್ಯಮ ವರ್ಗವು ಈಗ ಡಬಲ್ ಬೊನಾಂಜಾವನ್ನು ಅನುಭವಿಸುತ್ತಿದೆ. ಕಡಿಮೆ ಜಿಎಸ್‌ಟಿ ದರವು ನಾಗರಿಕರು ತಮ್ಮ ಕನಸುಗಳನ್ನು ಈಡೇರಿಸಲು ಸುಲಭಗೊಳಿಸುತ್ತದೆ. ಅವೆರಿಕದ ಕಾರ್ಮಿಕರನ್ನು ಬದಲಾಯಿಸದಂತೆ ರಕ್ಷಿಸುವ ಗುರಿಯನ್ನು ಈ ಕ್ರಮ ಹೊಂದಿದೆ ಎಂದು ಅವರು ಹೇಳಿದರು.

## ಲಿಂಗಾಯತ ಧರ್ಮ ಎಂದು ನಮೂದಿಸಲು ಜಾಗತಿಕ ಲಿಂಗಾಯತ ಮಹಾಸಭಾ ಮನವಿ

ಮೈಸೂರು, ಸೆ.21(ಎಸ್‌ಪಿಎನ್)– ರಾಜ್ಯದ 31 ಜಿಲ್ಲೆಗಳಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ (ಜಾತಿಗಣತಿ)ಸಮೀಕ್ಷೆಯಲ್ಲಿ ಲಿಂಗಾಯತ ಸಮುದಾಯ ಒಗ್ಗಟ್ಟಿನಿಂದ ಪಾಲ್ಗೊಳ್ಳುವಂತೆ ಜಾಗತಿಕ ಲಿಂಗಾಯತ ಮಹಾಸಭಾ ಪ್ರಕಟಣೆ ಮೂಲಕ ಮನವಿ ಮಾಡಿದೆ.



ಜಾಮದಾರ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸಿಸುವ 104 ಪಂಗಡದ 'ಲಿಂಗಾಯತ' ಸಮುದಾಯದವರು ಒಗ್ಗಟ್ಟಿನಿಂದ ಪಾಲ್ಗೊಂಡು, ಇತರೆ ಕಾಲಂನಲ್ಲಿ 'ಲಿಂಗಾಯತ ಧರ್ಮ' ನಮೂದಿಸಿ, ಜಾತಿ ಮತ್ತು ಉಪಜಾತಿ ಕಾಲಂನಲ್ಲಿ ನಿಮ್ಮ ನಿಮ್ಮ ಜಾತಿ, ಒಳಪಂಗಡದ ಹೆಸರು ನಮೂದಿಸುವಂತೆ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಎಂ.ಜಾಮದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಂಚಮಸಾಲಿ ಪೀಠಾಧ್ಯಕ್ಷ ಸ್ಥಾನದಿಂದ ಜಯ ಮೃತ್ಯುಂಜಯ ಸ್ವಾಮೀಜಿ ಉಚ್ಚಾಟನೆ



ಬಾಗಲಕೋಟೆ, ಸೆ.21– ಪಂಚಮಸಾಲಿ ಪೀಠಾಧ್ಯಕ್ಷ ಸ್ಥಾನದಿಂದ ಬಸವ ಜಯ ಮೃತ್ಯುಂಜಯ ಸ್ವಾಮೀಜಿಯನ್ನು ಉಚ್ಚಾಟನೆ ಮಾಡಲಾಗಿದೆ. ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್ ಈ ನಿರ್ಧಾರ ತೆಗೆದುಕೊಂಡಿದೆ. ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ನೀಲಕಂಠ ಅಸೂಟಿ ಅವರು, ಪಂಚಮಸಾಲಿ ಸಮುದಾಯದ ಪ್ರಥಮ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಉಚ್ಚಾಟನೆ ಮಾಡಿರುವುದಾಗಿ ಮಾಧ್ಯಮಗಳಿಗೆ ತಿಳಿಸಿದರು. ಲಿಂಗಾಯತ ಧರ್ಮ ವಿರೋಧಿ ಹೇಳಿಕೆ, ಅಕ್ರಮ ಆಸ್ತಿ ಗಳಿಕೆ ಸೇರಿದಂತೆ ಸ್ವಾಮೀಜಿ ಮೇಲೆ ಹಲವು ಆರೋಪ ಹೊರಿಸಿ, ಪೀಠದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಅಸೂಟಿ ಹೇಳಿದರು. ಇಂದು ನಡೆದ ಸಭೆಯಲ್ಲಿ ಸ್ವಾಮೀಜಿಯನ್ನು ಉಚ್ಚಾಟಿಸುವ ನಿರ್ಣಯ ತೆಗೆದುಕೊಳ್ಳಲಾಯಿತು. ಸ್ವಾಮೀಜಿ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದು ಅಕ್ರಮವಾಗಿ ಆಸ್ತಿ ಗಳಿಕೆ ಮಾಡಿದ್ದಾರೆ. ಈ ಬಗ್ಗೆ 2014ರಲ್ಲಿ ಸ್ವಾಮೀಜಿಗೆ ನೋಟಿಸ್ ನೀಡಿದ್ದೆವು ಎಂದು ನೀಲಕಂಠ ಅಸೂಟಿ ಹೇಳಿದರು.

## ಮೈಸೂರಿನ ಬಹುತೇಕ ಹೋಟೆಲ್ ರೂಂಗಳು ಭರ್ತಿ

ಮೈಸೂರು, ಸೆ.21– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ಬಹುತೇಕ ಹೋಟೆಲ್‌ಗಳ ಕೊಠಡಿಗಳು ಬುಕ್ಕಿಂಗ್ ಆಗಿವೆ.



ನಾರಾಯಣಗೌಡ

ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಕುಸ್ತಿ ಪಂದ್ಯಾವಳಿ, ಕ್ರೀಡಾಕೂಟ, ಫಲಪುಷ್ಪ ಪ್ರದರ್ಶನ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ, ಆಹಾರ ಮೇಳ, ಯೋಗ ದಸರಾ ಸೇರಿದಂತೆ ಹತ್ತು–ಹಲವು ಕಾರ್ಯಕ್ರಮಗಳ ಜೊತೆಗೆ ಅ.2ರಂದು ಜರುಗುವ ಜಂಬೂಸವಾರಿ ಮೆರವಣಿಗೆ ಕಣ್ತುಂಬಿಕೊಳ್ಳಲು ಈಗಾಗಲೇ ವಿವಿಧೆಡೆಯಿಂದ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಮೂರ್ನಾಲ್ಕು ದಿನಗಳ ನಂತರ ಹೊರರಾಜ್ಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚುವ ನಿರೀಕ್ಷೆಯಿದ್ದು, ಈಗಾಗಲೇ ಸ್ಟಾರ್ ಹೋಟೆಲ್‌ಗಳು, ಲಾಡ್ಜ್‌ಗಳು ಸೇರಿದಂತೆ ವಸತಿ ಸೌಕರ್ಯವುಳ್ಳ ಎಲ್ಲಾ ಹೋಟೆಲ್‌ಗಳ ಕೊಠಡಿಗಳನ್ನು ಮುಂಗಡವಾಗಿ ಕಾಯ್ದಿರಿಸುತ್ತಿದ್ದಾರೆ.

ಈ ಬಗ್ಗೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ನಗರದಲ್ಲಿ ಸ್ಟಾರ್ ಕೆಟಗರಿಯ 24 ಹೋಟೆಲ್‌ಗಳು, ಲಾಡ್ಜ್‌ಗಳು ಸೇರಿದಂತೆ ಸುಮಾರು 422 ಹೋಟೆಲ್‌ಗಳಲ್ಲಿ 10,500ಕ್ಕೂ ಹೆಚ್ಚು ರೂಂಗಳಿವೆ. ಸದ್ಯಕ್ಕೆ ಸೆ.25ರಿಂದ 29ರವರೆಗೆ ಶೇ.50ರಷ್ಟು, ಸೆ.30, ಅ.1 ಹಾಗೂ ಅ.2ಕ್ಕೆ ಶೇ.80ಕ್ಕೂ ಹೆಚ್ಚು ಕೊಠಡಿಗಳು ಬುಕ್ ಆಗಿವೆ. ಎರಡು–ಮೂರು ದಿನಗಳಲ್ಲಿ ಶೇ.100ರಷ್ಟು ಭರ್ತಿಯಾಗುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಹೋಟೆಲ್, ಲಾಡ್ಜ್‌ಗಳ ಜೊತೆಗೆ ಕೊಠಡಿ ಸೌಕರ್ಯವಿಲ್ಲದ ಸುಮಾರು 180 ರೆಸ್ಟೋರೆಂಟ್‌ಗಳು, ಬೇಕರಿ–ಸ್ವೀಟ್ ಸ್ಟಾಲ್‌ಗಳು ಸೇರಿದಂತೆ ಒಂದೂವರೆ ಸಾವಿರಕ್ಕೂ ಹೆಚ್ಚು ಆತಿಥ್ಯ ವಲಯದ ಕೇಂದ್ರಗಳಿವೆ. ಸೆ.25ರ ನಂತರ ಉದ್ಯಮ ವಲಯಕ್ಕೆ ಬೂಸ್ಟ್ ಸಿಗುವ ನಿರೀಕ್ಷೆ ಇದೆ ಎಂದರು.

## ಬೆಟ್ಟಕ್ಕೆ ವಾಹನ ಪ್ರವೇಶ ನಿರ್ಬಂಧ...



ದಸರಾ ಮಹೋತ್ಸವ ಉದ್ಘಾಟನೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಭಾನುವಾರ ಸಂಜೆಯಿಂದಲೇ ಉತ್ತನಹಳ್ಳಿ ಮಾರ್ಗವಾಗಿ ಚಾಮುಂಡಿಬೆಟ್ಟಕ್ಕೆ ತೆರಳುವ ರಸ್ತೆಯನ್ನು ತಾತ್ಕಾಲಿಕವಾಗಿ ಬಂದ್ ಮಾಡಿ, ಸ್ಥಳೀಯರ ಹೊರತಾಗಿ ಸಾರ್ವಜನಿಕರ ವಾಹನಗಳ ಪ್ರವೇಶಕ್ಕೆ ಪೊಲೀಸರು ನಿರ್ಬಂಧ ವಿಧಿಸಿದ್ದರು.

## ವಿವಿಧ ಕ್ಷೇತ್ರಗಳಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನ

ಮೈಸೂರು, ಸೆ.21– ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಾದ ನಂಜನಗೂಡು, ಟಿ.ನರಸಿಪುರ, ಹುಣಸೂರು, ಹೆಚ್.ಡಿ ಕೋಟೆ, ಕೆ.ಆರ್.ನಗರ ಮತ್ತು ಪಿರಿಯಾಪಟ್ಟಣ ಇಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಲು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶಿಕ್ಷಕರು, ನಿವೃತ್ತಿ ಸರ್ಕಾರಿ ನೌಕರರು ಮತ್ತು ಹಿರಿಯ ನೌಕರರು, ಎಂ.ಎಸ್ ಡಬ್ಲ್ಯೂ ವಿದ್ಯಾರ್ಥಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಕಾರ್ಯಕರ್ತರು, ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು, ಕಾನೂನು ಪಧವಿ ಓದುತ್ತಿರುವ ವಿದ್ಯಾರ್ಥಿಗಳು, ಮಾಜಿ ಪಂಚಾಯತ್ ಸದಸ್ಯರು. ಮಾಜಿ ಸೈನಿಕರು ಹಾಗೂ ಅವರ ಕುಟುಂಬದ ಸದಸ್ಯರು, ವಿವಿಧ ಸಂಘಟನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಜಿಕ ಸೇವ ಮನೋಭಾವ ಹೊಂದಿರುವ ಪುರುಷ ಮತ್ತು ಮಹಿಳೆಯರು, ಮಂಗಳಮುಖಿಯರು, ಸನ್ನಡತೆ ಹೊಂದಿರುವ ಕಾರಗೃಹ ಬಂಧಿಗಳು, ಸ್ವ–ಸಹಾಯ ಸಂಘಗಳ ಸದಸ್ಯರು, ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಅರೆಕಾಲಿಕ ಕಾನೂನು ಸ್ವಯಂ ಸೇವಕರಾಗಿ ನೇಮಕ ಮಾಡಿಕೊಳ್ಳಬೇಕಾಗಿರುವುದರಿಂದ ಸೇವ ಮನೋಭಾವನೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ನಿಗಧಿತ ಅರ್ಜಿ ನಮೂನೆಯನ್ನು ಪಡೆದು ಮತ್ತು ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿ ಭರ್ತಿ ಮಾಡಿದ ಅರ್ಜಿಯನ್ನು ಅಕ್ಟೋಬರ್ 4 ರ ಸಂಜೆ 5 ಗಂಟೆಯೊಳಗೆ ಖುದ್ದಾಗಿ ಸಲ್ಲಿಸಬೇಕೆಂದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821–2330130ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಾತಿಗಣತಿ: ವಿವಾದದ 33 ಜಾತಿಗಳನ್ನ ಕೈ ಬಿಟ್ಟ ಆಯೋಗ

### ಮತಾಂತರ ಆಗಿದ್ದರೆ ಆ ಧರ್ಮವೇ ಅನ್ವಯ

ಬೆಂಗಳೂರು, ಸೆ.21– ವಿವಾದದ ನಡುವೆಯೇ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಸೋಮವಾರ ಪ್ರಾರಂಭ ಆಗಲಿದೆ. ಕ್ರಿಶ್ಚಿಯನ್‌ಗೆ ಮತಾಂತರ ಆದ ಜಾತಿಗಳ ಬಗೆಗಿನ ವಿವಾದ ಬೆನ್ನಲ್ಲೇ ಎಚ್ಚೆತ್ತಿರುವ ಹಿಂದುಳಿದ ವರ್ಗಗಳ ಆಯೋಗ ವಿವಾದದ 33 ಜಾತಿಗಳನ್ನು ಕೈಬಿಟ್ಟು ಸಮೀಕ್ಷೆ ನಡೆಸಲು ನಿರ್ಧಾರ ಮಾಡಿದೆ.

ಇದೇ ವೇಳೆ ಗೊಂದಲಕ್ಕೆ ಕಾರಣವಾದ 33 ಜಾತಿಗಳನ್ನು ಸರ್ಕಾರದ ಸಲಹೆ ಮೇರೆಗೆ ಆಯೋಗ ಕೈ ಬಿಟ್ಟಿದೆ. ಪಟ್ಟಿಯಲ್ಲಿ ಅ ಜಾತಿ ಹೆಸರು ಇರುವುದಿಲ್ಲ. ಆದರೆ ಜನರ ಇಚ್ಛೆ ಇದ್ದರೆ ಪಟ್ಟಿಯಿಂದ ಕೈಬಿಟ್ಟಿರುವ ಧರ್ಮ ಮತ್ತು ಜಾತಿ ಹೆಸರು ಬರೆಸಬಹುದು ಎಂದು ಆಯೋಗ ಸ್ಪಷ್ಟಪಡಿಸಿದೆ.

**ಮತಾಂತರ ಆದವರಿಗೆ ಆ ಧರ್ಮವೇ ಅನ್ವಯ:** ಮತಾಂತರವಾದ ಜಾತಿಗಳ ಇನ್ನಷ್ಟು ಗೊಂದಲಗಳಿಗೆ ಆಯೋಗ ಸ್ಪಷ್ಟನೆ ನೀಡಿದೆ. ಮತಾಂತರವಾದ ಜಾತಿಗಳಿಗೆ ಮೂಲ ಜಾತಿ ಬಿಟ್ಟು ಮತಾಂತರವಾದ ಧರ್ಮವೇ ಅನ್ವಯವಾಗಲಿದೆ. ಮೂಲ ಜಾತಿ ಅವರಿಗೆ ಅನ್ವಯ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಅಲ್ಲದೇ ಸಮೀಕ್ಷೆ ಆದ ನಂತರ ಯಾವ ಯಾವ ಜಾತಿ ಯಾವ ಯಾವ ಕ್ಯಾಟಗರಿಗೆ ಬರುತ್ತದೆ ಎಂದು ತಜ್ಞರ ತಂಡ ನಿರ್ಧಾರ ಮಾಡಲಿದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯಕ್ ಸ್ಪಷ್ಟನೆ ನೀಡಿದ್ದಾರೆ.

## ಕರಾವಳಿ ಜಾನಪದ ಕ್ರೀಡೆ 'ಕಂಬಳ': ರಾಜ್ಯ ಕ್ರೀಡೆ ಮಾನ್ಯತೆ ನೀಡಲು ಸರ್ಕಾರ ನಿರ್ಧಾರ

ಬೆಂಗಳೂರು, ಸೆ.21– ಕರಾವಳಿ ಭಾಗದ ಪ್ರಸಿದ್ಧ ಜಾನಪದ ಕ್ರೀಡೆ ಕಂಬಳ ಅಭಿಮಾನಿಗಳಿಗೆ ರಾಜ್ಯ ಸರ್ಕಾರದಿಂದ ಸಿಹಿ ಸುದ್ದಿ ಸಿಕ್ಕಿದೆ. ಕಂಬಳಕ್ಕೆ ರಾಜ್ಯ ಕ್ರೀಡೆಯಾಗಿ ಮಾನ್ಯತೆ ನೀಡಲು ನಿರ್ಧರಿಸಲಾಗಿದ್ದು, ಶೀಘ್ರವೇ ಅಧಿಕೃತ ಆದೇಶ ಹೊರಬೀಳಲಿದೆ.



ರಾಜ್ಯ ಸರ್ಕಾರದಿಂದ ಕಂಬಳ ಕ್ರೀಡೆಗೆ ಅಧಿಕೃತ ಮಾನ್ಯತೆ ಘೋಷಣೆಯಾದರೆ ರಾಜ್ಯದ ಕ್ರೀಡಾ ಪ್ರಾಧಿಕಾರದಿಂದ ಉಳಿದ ಕ್ರೀಡೆಗಳಿಗೆ ಸಿಗುವ ಸೌಲಭ್ಯಗಳು ಕೂಡ ಕಂಬಳ ಕ್ರೀಡೆಗಳಿಗೂ ಸಿಗಲಿವೆ. ಕಂಬಳಕ್ಕೆ ರಾಜ್ಯ ಕ್ರೀಡೆಯ ಮಾನ್ಯತೆ ಅಂತಿಮ ಹಂತದಲ್ಲಿದ್ದು, ಕಂಬಳ ಅಸೋಸಿಯೇಷನ್ ನೇಮಕ ಪಟ್ಟಿಯನ್ನು ರಾಜ್ಯ ಸರ್ಕಾರ ಅಂತಿಮಗೊಳಿಸಿದೆ. ಸಮಿತಿಯ ಅಧ್ಯಕ್ಷರೇ ಕಂಬಳ ಅಸೋಸಿಯೇಷನ್‌ಗೆ ಅಧ್ಯಕ್ಷರಾಗಿದ್ದಾರೆ. ಕಂಬಳ ಕೋಣದ ಮಾಲೀಕರು, ಓಟಗಾರರು ಇತರರಿಗೆ, ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಧನ, ವಿಶೇಷ ಅನುದಾನ ಸೌಲಭ್ಯ ಸಿಗಲಿವೆ. ಈ ಬಗ್ಗೆ ಬೈಲಾ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

**ಮೈಸೂರು ಮಿತ್ರ** 46

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘ ನಿ.,**
#12 & 13, ಮೊದಲನೇ ಮಹಡಿ, ಸುಮನ ಕಾಂಪ್ಲೆಕ್ಸ್, ತಾಲಿವಾಹನ ರಸ್ತೆ, ನಜರ್‌ಬಾದ್, ಮೈಸೂರು–570 010

**16ನೇ ವರ್ಷದ ಸರ್ವಸದಸ್ಯರ ಮಹಾಸಭೆ**

ಮೇಲ್ಕಂಡ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 23–9–2025ನೇ ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಹೊನ್ನೇಗೌಡರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಸ್ಥಳ: ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘ (ನಿ), ಚಾಮುಂಡೇಶ್ವರಿ ಕನ್ವೆನ್‌ಷನ್ ಹಾಲ್, ಬನ್ನೂರು ಮುಖ್ಯ ರಸ್ತೆ, ದೇವೇಗೌಡ ಸರ್ಕಲ್, ಭಾರತ್ ಪೆಟ್ರೋಲ್ ಬಂಕ್ ಎದುರು, ಚಾಮುಂಡಿ ಅಪಾರ್ಟ್‌ಮೆಂಟ್ ಪಕ್ಕ, ಆಲನಹಳ್ಳಿ, ಮೈಸೂರು, ಇಲ್ಲಿ ಏರ್ಪಡಿಸಲಾಗಿದೆ. ಸಂಘದ ಮಾನ್ಯ ಸದಸ್ಯರುಗಳಿಗೆ ಅಂಚೆ ಮುಖಾಂತರ ಆಹ್ವಾನ ಕಳುಹಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ತಿಳಿದು ಸಭೆಗೆ ಆಗಮಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ಪರವಾಗಿ
ಸಹಿ/– ಶ್ರೀ ವಿಜಯ್ ಎಂ., ಮುಖ್ಯ ಕಾರ್ಯನಿರ್ವಹಣಾಧಿಕಾರಿ



ಹಸಿರು ನಮ್ಮ ಉಸಿರು





**8ನೇ ವರ್ಷದ ಸವಿನೆನಪು**



**ಶ್ರೀಮತಿ ಲಕ್ಷ್ಮಮ್ಮ**
ದಿವಂಗತ: ಹೋರಿ ಸುಬ್ಬೇಗೌಡರವರ ಧರ್ಮಪತ್ನಿ
ಬೂಕನಕೆರೆ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

ಸದಾ ನಿಮ್ಮ ನೆನಪಿನಲ್ಲಿರುವ
ಶ್ರೀಮತಿ /ಶ್ರೀ ಬಿ.ಎಸ್.ಪರಮೇಶ್, ನಿವೃತ್ತ. ಡಿ.ಡಿ.ಪಿ.ಐ. ಬೂಕನಕೆರೆ.
ಶ್ರೀಮತಿ /ಶ್ರೀ ಬಿ.ಎಸ್.ಜಗದೀಶ್, ನಿವೃತ್ತ. ಪ್ರಾಂಶುಪಾಲರು ವಿಭಜಿತ ಮಹಾರಾಜ ಜೂ। ಕಾಲೇಜು, ಮೈಸೂರು.
ಶ್ರೀಮತಿ ಸರಸ್ವತಿ ಬೋಳೇಗೌಡ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಬೂಕನಕೆರೆ.
ಶ್ರೀಮತಿ /ಶ್ರೀ ಬೂಕನಕೆರೆ ವಿಜೇಂದ್ರ, ಅಭಿವೃದ್ಧಿ ಅಧಿಕಾರಿ (ನಿ), ಭಾರತೀಯ ಜೀವ ವಿಮಾ ನಿಗಮ, ಮೈಸೂರು